ಸಂಪುಟ 15
ಸಂಚಿಕೆ 46

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
21 ನವಂಬರ್ 1993

ಡಿಸೆಂಬರ್‌ನಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ರಾಜಕೀಯ ಸಮಾವೇಶಗಳು

ಕಾಂಗ್ರೈ ಸರಕಾರದ ನಿಜಸ್ವರೂಪವನ್ನು ಬಯಲಿಗೆಳೆಯಲು ರಾಜ್ಯ ಸಮಿತಿ ಕರೆ

ಆಂತರಿಕ ಕಚ್ಚಾಟದಿಂದ ತುಂಬಿದ, ಜನಗಳ ಬಗ್ಗೆ ಏನೊಂದು ಕಾಳಜಿಯಿಲ್ಲದ ಕಾಂಗ್ರೈ ಸರಕಾರವನ್ನು ಬಯಲುಗೊಳಿಸಲು ರಾಜ್ಯಾದ್ಯಂತ ಡಿಸೆಂಬರ್ ಒಳಗೆ ಎಲ್ಲಾ ಜಿಲ್ಲೆಗಳಲ್ಲಿ ರಾಜಕೀಯ ಸಮಾವೇಶಗಳನ್ನು ನಡೆಸಲು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ನಿರ್ಧರಿಸಿದೆ. ನವೆಂಬರ್ 9 ಮತ್ತು 10 ರಂದು ರಾಜ್ಯ ಸಮಿತಿಯು, ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ ಈ ನಿರ್ಧಾರ ಕೈಗೊಂಡಿದೆ. ಕಾಂ. ಪಿ. ರಾಮಚಂದ್ರನ್, ಪಾಲಿಟ್ ಬ್ಯೂರೋ ಸದಸ್ಯರು, ಸಭೆಯಲ್ಲಿ ಹಾಜರಿದ್ದರು.

ಕರ್ನಾಟಕ ರಾಜ್ಯದಲ್ಲಿ ಮೊದಲೇ ಕಾಂಗ್ರೈ ಸತತವಾಗಿ ಕಚ್ಚಾಟದಿಂದ ಕೂಡಿದ ಮತ್ತು ಮುಖ್ಯಮಂತ್ರಿಗಳನ್ನು ಬದಲಾಯಿಸುತ್ತಾ ಬಂದಿರುವ ಸ್ವಾರ್ಥ ಆಡಳಿತೆಯಿಂದಾಗಿ ಜನತೆಯ ನ್ಯಾಯವಾದ ಯಾವ ಬೇಡಿಕೆಗಳಿಗೂ ಪರಿಹಾರ ಸಿಗದಿರುವಾಗ, ಭೂಕಂಪ ಮತ್ತು ವ್ಯಾಪಕವಾದ ಅತಿವೃಷ್ಟಿ ಉಂಟಾಗಿ ಜನ ಸಾಮಾನ್ಯರು ಕಂಗೆಡುವಂತಾಗಿದೆ. ಒಂದೆಡೆ ಲಕ್ಷಾಂತರ ಬಡ ಜನರ ಮನೆಗಳು ಸಂಪೂರ್ಣವಾಗಿ ನಾಶವಾಗಿದೆ. ಇನ್ನೊಂದೆಡೆ ಸುಮಾರು 500 ಕೋಟಿ ರೂಪಾಯಿ ಮೌಲ್ಯಕ್ಕಿಂತಲೂ ಅಧಿಕ ಬೆಲೆಯ ಸೂರ್ಯಕಾಂತಿ, ಭತ್ತ, ತೊಗರಿಬೇಳೆ ಬೆಳೆಗಳು ನಷ್ಟವಾಗಿ ರೈತಾಪಿ ಜನತೆ ಕಂಗೆಟ್ಟಿದ್ದಾರೆ. ಅದೇ ಸಮಯದಲ್ಲಿ ಪರಿಹಾರದ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ಭ್ರಷ್ಟ ಅಧಿಕಾರಿಗಳಿಂದ ಪೋಲಾಗುತ್ತಿದೆ. ನಿಜವಾದ ಸಂತ್ರಸ್ತರಿಗೆ ಪರಿಹಾರ ದೊರೆಯುವುದು 'ಕನ್ನಡಿಯ ಗಂಟಾಗಿದೆ'. ವೀರಪ್ಪ ಮೊಯಿಲಿ ಸರ್ಕಾರದಿಂದ ಕೇವಲ ಪ್ರಚಾರದ ಹಾಗೂ ಕಣ್ಣೊರೆಸುವ ಪರಿಹಾರ ಕಾರ್ಯ ನಡೆದಿದೆ. ನಮ್ಮ ಪಪವೂ ಸೇರಿ ಎಲ್ಲ ವಿರೋಧ ಪಪಗಳ ಪ್ರತಿನಿಧಿಗಳು ಮುಖ್ಯಮಂತ್ರಿ ವೀರಪ್ಪಮೊಯಿಲಿಯವರು ಕರೆದ ಸಭೆಯಲ್ಲಿ "ಭೂಕಂಪ ಮತ್ತು ಅನಿವೃಷ್ಟಿಗೆ ಸಂಬಂಧಿಸಿದ ತಾಲೂಕುಗಳಲ್ಲಿ ಸರ್ವ ಪಪಗಳ ಸಮಿತಿಗಳನ್ನು ರಚಿಸಿ ಅವರ ಮೇಲ್ವಿಚಾರಣೆಯಲ್ಲಿ ಜನರಿಗೆ ಪರಿಹಾರ ಒದಗಿಸುವ ಕಾರ್ಯಕ್ರಮ ನಡೆಯಬೇಕೆಂದು" ಒತ್ತಾಯ ಮಾಡಿದರೂ, ಈ ಕುರಿತು ಸರ್ಕಾರ ಯಾವುದೇ ನಿರ್ಧಾರವನ್ನು ಮಾಡಲಿಲ್ಲ.

ರಾಜ್ಯದ ಕಾಂಗ್ರೆಸ್ (ಐ) ಸರ್ಕಾರವು ಅಕ್ಷಮ್ಯ ಅಪರಾಧ ಮಾಡುತ್ತಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಈ ಸರ್ಕಾರವು ಕ್ಯಾಪಿಟೇಷನ್ ಫೀ ವಿಷಯದಲ್ಲಿ ರಾಜ್ಯದ ಪಾಳೇಗಾರಿ ಸ್ಥಾಪಿತ ಹಿತಾಸಕ್ತಿಗಳಿಗೆ ಶರಣಾಗುತ್ತಿದೆ.

ಕಾವೇರಿ ನೀರಿನ ವಿವಾದವನ್ನು ಇತ್ಯಾರ್ಥ ಮಾಡುವುದಕ್ಕೆ ಅದೇ ಪಕ್ಷದ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದರಲ್ಲಿ ತೀರಾ ವಿಫಲವಾಗಿದೆ.

ಕೃಷ್ಣಾ ನದಿ ನೀರಾವರಿ ಯೋಜನೆಯನ್ನು 2000 ಇಸವಿಯ ಒಳಗೆ ಪೂರೈಸಿ ಲಕ್ಷಾಂತರ ಏಕರೆ ಭೂಮಿಗೆ ನೀರು ಒದಗಿಸುವ ಮೂಲಕ ಬರಗಾಲದ ಸ್ಥಿತಿಯನ್ನು ನೀಗಿಸುವ ಬದಲು, ಇದೀಗ ಆ ಪ್ರದೇಶದಲ್ಲಿ ಬೃಹತ್ ವಿದ್ಯುತ್ ಯೋಜನೆಯನ್ನು ಖಾಸಗಿಯ ಕಂಪನಿಯವರಿಗೆ ಕೊಡಲು ಯೋಜಿಸುವುದರ ಮೂಲಕ ಈ ನೀರಾವರಿ ಕಾಲುವೆ ಯೋಜನೆಯನ್ನೇ ಕೈ ಬಿಡುವಂತೆ ಕಾಣುತ್ತಿದೆ.

ಹೊಸ ಕೈಗಾರಿಕೆಗಳಿಲ್ಲದೆ ರಾಜ್ಯ ಲಕ್ಷಾಂತರ ಯುವಕರು ನಿರುದ್ಯೋಗದಿಂದ ಬಳಲುತ್ತಿದ್ದಾರೆ.

ಕೊನೆಯದಾಗಿ ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳ ವಿಷಯದಲ್ಲಿ ಜನತೆಗೆ ತೀರಾ ಮೋಸಮಾಡುತ್ತಿದೆ. ಒಂದೆಡೆ, ಚುನಾವಣೆ ಮಾಡುವುದಾಗಿ ಹೇಳಿಕೆ ಇನ್ನೊಂದೆಡೆ ಅದನ್ನು ಮುಂದೆ ಹಾಕಲಾಗುವುದು ಎಂಬ ಹೇಳಿಕೆ. ಮತ್ತೊಂದೆಡೆ ನ್ಯಾಯವಾದ ರೀತಿಯಲ್ಲಿ ಸರ್ವ ಪಕ್ಷಗಳ ಅಭಿಮತ ಕೇಳಿ ಕ್ಷೇತ್ರಗಳನ್ನು ಮರು ವಿಂಗಡಣೆ ಮಾಡದಿರುವುದು ಈ ಮೋಸಕ್ಕೆ ಸಾಕ್ಷಿ.

ಕಾರ್ಮಿಕರ ಪ್ರತಿಯೊಂದು ಹೋರಾಟದ ಸಂದರ್ಭದಲ್ಲೂ, ಕೃಷಿ ಕಾರ್ಮಿಕರ ಮತ್ತು ರೈತರ ಹೋರಾಟಗಳಲ್ಲಿ ಸರ್ಕಾರವು ನ್ಯಾಯವಾದ ಪ್ರಶ್ನೆಗಳನ್ನು ಪರಿಹರಿಸಲು ಪ್ರಯತ್ನಿಸುವುದರ ಬದಲು ಪೋಲೀಸರನ್ನು ಈ ಜನ ಸಾಮಾನ್ಯರ ಮೇಲೆ ವೂ ಬಿಟ್ಟು ಲಾಠಿ ಚಾರ್ಜು, ಗುಂಡು ಪ್ರಯೋಗ, ಲಾಕಪ್‌ನಲ್ಲಿ ಹೊಡೆತ, ಕೇಸುಗಳು ಮತ್ತು ಜೈಲು ವಾಸ ಇತ್ಯಾದಿ ಕ್ರಮಗಳ ಮೂಲಕ ಮಾಡಲು ಯತ್ನಿಸುತ್ತಿದೆ.

ಸಿಪಿಐ(ಎಂ) ಜನತೆಯಿಂದ ಸಂಗ್ರಹ ಮಾಡಿದ ಹಣವನ್ನು, ಆಹಾರ ಧಾನ್ಯಗಳನ್ನು, ಬಟ್ಟೆ, ತಟ್ಟೆ ವಗೈರೆಯನ್ನು ಗುಲ್ಬರ್ಗದ ಸಂತ್ರಸ್ತರಿಗೂ ಬಿಜಾಪುರದ ಸಂತ್ರಸ್ತರಿಗೂ ಇದೇ ತಿಂಗಳಲ್ಲಿ 18 ಮತ್ತು 19 ರಂದು ಹಂಚಲಾಗುವುದು. ಮಹಾರಾಷ್ಟ್ರದ ಲಾತೂರಿಗೆ ಟ್ರೇಡ್ ಯೂನಿಯನ್‌ಗಳಿಂದ ಸಂಗ್ರಹಿಸಿದ ಹಣವನ್ನು ನೇರವಾಗಿ ಮಹಾರಾಷ್ಟ್ರ ಸರ್ಕಾರದ ಮೂಲಕ ಹಂಚಲಾಗುವುದು. ಎಂದು ಸಿಪಿಐ(ಎಂ) ರಾಜ್ಯ ಸಮಿತಿಯ ನಂತರ ನೀಡಲಾದ

ಪುಟ 7ಕ್ಕೆ

"ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ಮುಂದಾಗಿರಿ"

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

(ನವೆಂಬರ್ 8, 9, 1993ರಂದು ನಡೆದ) ರಾಜ್ಯ ಸಮಿತಿಯ ಸಭೆ ಅಂಗೀಕರಿಸಿದ ನಿರ್ಣಯ)

ರಾಜ್ಯದ ರಾಜಕೀಯ ಪರಿಸ್ಥಿತಿ ಬಹಳ ಅಸ್ಥಿರವಾಗಿದೆ. ದೇಶದ ಇತರೆಡೆಗಳಲ್ಲಿರುವಂತೆ ಕಾಂಗ್ರೆಸ್(ಐ) ಪಕ್ಷವು ತನ್ನ ಸ್ಥಾನಮಾನವನ್ನು ಕಳೆದುಕೊಳ್ಳುತ್ತಾ ಬರುತ್ತಿದೆ. ಬಿಜೆಪಿ ತಾನೇ ಪರ್ಯಾಯ ಪಕ್ಷವೆಂದು ಡಂಗೂರ ಹೊಡೆಯುತ್ತಿದೆ. ದೇಶದ ವಿಶಾಲ ಭಾಗಗಳಲ್ಲಿ ಎಡ, ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳು ಬಲಹೀನವಾಗಿದ್ದು, ಬಿಜೆಪಿಯಲ್ಲಿದ್ದ ಬಂಡವಾಳಗಾರ-ಭೂಮಾಲೀಕರ ಪಕ್ಷಗಳು, ಕಾಂಗ್ರೆಸ್ಸೇತರ ಹಾಗೂ ಬಿಜೆಪಿಯೇತರ ಪರ್ಯಾಯಪಕ್ಷವಾಗಿ ರೂಪುಗೊಳ್ಳುವ ಪ್ರಕ್ರಿಯೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿವೆ. ರಾಜ್ಯದಲ್ಲಿ ಸಮಾಜವಾದಿ ಜನತಾಪಕ್ಷವು ಜನತಾದಳದಲ್ಲಿ ವಿಲೀನವಾಗಿದೆ. ಕಾಂಗ್ರೆಸ್(ಐ) ಪಕ್ಷದಲ್ಲಿ ಗುಂಪುಗಾರಿಕೆ ತೀವ್ರವಾಗಿ ಬೆಳೆಯುತ್ತಿದೆ.

ಹಣ, ಆಸ್ತಿ, ಅಧಿಕಾರ, ಕೀರ್ತಿಗಳನ್ನು ಗಳಿಸುವುದೇ ಹೊರತು ಬೇರಾವ ಏಕೋದ್ದೇಶವಿಲ್ಲದ ಕಾಂಗ್ರೆಸ್(ಐ) ಪಕ್ಷಕ್ಕೆ ರಾಜ್ಯವನ್ನು ಪರಿಣಾಮಕಾರಿಯಾಗಿ ಆಳಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ರಾಜ್ಯದ ಜನತೆ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಕಾಂಗ್ರೆಸ್(ಐ)ಗೆ ಆಳುವುದೆಂದರೆ ಅಧಿಕಾರದ ಪಾಲುಗಳನ್ನು ಪಡೆಯುವುದು ಎಂದರ್ಥ. ತಮ್ಮಲ್ಲೇ ಪೈಪೋಟಿ ನಡೆಸಿ, ಒಬ್ಬರೊಬ್ಬರು ತಮಗೆ ಸಾಧ್ಯವಾದಷ್ಟು ಅನುಕೂಲತೆ ಮಾಡಿಕೊಳ್ಳುವುದಕ್ಕಾಗಿ ಅವರು ಅಧಿಕಾರ ಪಡೆಯುವುದು. ಆದ ಕಾರಣ 1989ರಲ್ಲಿ ಕಾಂಗ್ರೆಸ್(ಐ) ಪಕ್ಷವು ದೊಡ್ಡ ಬಹುಮತ ಪಡೆದು ರಾಜ್ಯದಲ್ಲಿ ಅಧಿಕಾರಕ್ಕೆ ಬಂದನಂತರ ಮೂವರನ್ನು ಮುಖ್ಯಮಂತ್ರಿಯ ಗದ್ದುಗೆಗೆ ಏರಿಸಿತು. ಈಗ ಮೂರನೆಯ ಮುಖ್ಯಮಂತ್ರಿಯನ್ನು ಕೆಳಗಿಳಿಸುವ ಯತ್ನಗಳೂ ನಡೆಯುತ್ತಿವೆ.

ಕಾಂಗ್ರೆಸ್(ಐ) ಶಾಸಕಾಂಗ ಪಕ್ಷವು ಮೊಯಿಲಿಯವರನ್ನು ಗುಪ್ತ ಮತದಾನದ ಮೂಲಕ ನಾಯಕನನ್ನಾಗಿ ಚುನಾಯಿಸಲಿಲ್ಲ. ಕಾಂಗ್ರೆಸ್(ಐ) ಹೈಕಮಾಂಡೇ ಅವರ ಹೆಸರನ್ನು ಸೂಚಿಸಿತು. ಹಿಂದುಳಿದ ಕೋಮಿನವರೆಂದು ಮುಖ್ಯಮಂತ್ರಿಯನ್ನಾಗಿ ಮಾಡಿದುದು ಮೊಯಿಲಿಯವರ ಬಲ ಹಾಗೂ ಬಲಹೀನತೆಯಾಯಿತು. ಅವರು ಮತ್ತು ಅವರ ಬೆಂಬಲಿಗರು ತಾವು ಹಿಂದುಳಿದ ಸಮುದಾಯದವರು ಎಂದು ಕೂಗಾಡುತ್ತಾ ಬಂದರು. ಮುಂದುವರಿದ ಶ್ರೀಮಂತ ಒಕ್ಕಲಿಗರು ಮತ್ತು ಲಿಂಗಾಯಿತರ ಮಧ್ಯೆ ಕೆಲವು ಗುಂಪುಗಳು ಈ ಹಿಂದುಳಿದ ಕೋಮಿನ ಮುಖ್ಯಮಂತ್ರಿಯ ವಿರುದ್ಧ ಒತ್ತಡ ಬೀರಲು ಆರಂಭಿಸಿದರು. ಮೊಯಿಲಿಯ ವಿರುದ್ಧ ಹಿಂದುಳಿದ ಕೋಮುಗಳ ಒತ್ತಡವನ್ನು ಬಂಗಾರಪ್ಪನವರು ಪ್ರಾರಂಭಿಸಿದರು. ಜನಾರ್ದನ ಪೂಜಾರಿ ಅವರ ಹಿಂದೆ ದನಿಗೂಡಿಸಿದರು.

ವಿಪರೀತಗೊಂಡ ಕಾಂಗ್ರೈ ಭಿನ್ನಮತ

ಎಲ್ಲರನ್ನೂ ತನ್ನ ಜತೆ ಉಳಿಸಿಕೊಳ್ಳಲು ಮೊಯಿಲಿಯವರು ಈಗಾಗಲೇ ಹೆಸರು ಪಡೆದ ಏರ್ ಬಸ್ ಮಂತ್ರಿಮಂಡಲವನ್ನು ರಚಿಸಿಕೊಂಡರು. ಅದರಲ್ಲಿ ಭಿನ್ನಮತೀಯರೂ ಇದ್ದಾರೆ ಮತ್ತು ಕಾಂಗ್ರೆಸ್(ಐ)ನಲ್ಲಿರುವ ಎಲ್ಲಾ ತರಹೆಯ ಸಮಾಜವಿರೋಧಿ ವ್ಯಕ್ತಿಗಳೂ ಇದ್ದಾರೆ. ಮೊಯಿಲಿಯವರು ಬಂಗಾರಪ್ಪನವರ ಮಟ್ಟದ ಭ್ರಷ್ಟಾಚಾರದಿಂದ ದೂರಸರಿದರೂ ಸಹ ಭ್ರಷ್ಟಾಚಾರವು ಮುಂದುವರಿಯುತ್ತಿದೆ. ಅವರಿಗೆ ಆಡಳಿತದ ಮೇಲೆ ನಿಯಂತ್ರಣವಿದೆಯೇ ಎಂಬುದು ಸಂದೇಹ. ಅವರು ತರಹೆವಾರಿ ಒತ್ತಡಗಳಿಗೆ ಬಲಿಬಿದ್ದು ಹಲವು ವಿವಾದಗಳಲ್ಲಿ ಸಿಕ್ಕಿ ಬೀಳುತ್ತಿದ್ದಾರೆ. ವಿಧಾನಸಭೆಯಲ್ಲಿ ಇತ್ತೀಚೆಗೆ ಜನತಾದಳವು ಮೊಯಿಲಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿತು. ಈ ಅವಿಶ್ವಾಸ ಠರಾವಿನ ಬೆದರಿಕೆಯನ್ನು ಎದುರಿಸುವುದರಲ್ಲಿ, ಅವರಿಗೆ ತಮ್ಮ ಪಕ್ಷದ ಬಹುಮತ ಸಹಾಯಕವಾಗಲಿಲ್ಲ. ಕಾಂಗ್ರೆಸ್(ಐ) ಸದಸ್ಯರೇ ವಿಧಾನಸಭೆಯ ಬಾವಿಯಲ್ಲಿ ಧರಣಿ ನಡೆಸಿ ರಂಪ ಮಾಡಿ, ಅವಿಶ್ವಾಸ ನಿರ್ಣಯದ ಮೇಲೆ ಮತ ತೆಗೆಯದಂತೆ ಮಾಡಿದರು. ಕಾಂಗ್ರೆಸ್(ಐ) ಶಾಸಕಾಂಗ ಪಕ್ಷದ ಸಭೆಯಲ್ಲಿ ಪೇಪರ್‌ವೇಟ್, ಲೋಟ, ತಟ್ಟೆ, ಮೈಕುಗಳು ಕ್ಷಿಪಣಿಗಳಾಗಿ ಹಾರಾಡಿ, ಜಟಾಪಟಿಯಾಗಿ, ಮೊಯಿಲಿಯವರು ಸಭೆಯಿಂದ ಹೊರಬರಬೇಕಾಯಿತು. ಇತ್ತೀಚೆಗೆ ತಮ್ಮನ್ನು ಬೆಂಬಲಿಸಿದ ಕೇಂದ್ರ ಮಂತ್ರಿ ಜಾಫರ್‌ಷರೀಫರಿಂದಾಗಿ ಮೊಯಿಲಿ ವಿವಾದದ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಕಾಂಗ್ರೆಸ್(ಐ) ಒಳಜಗಳದಿಂದಾಗಿ ಕೇಂದ್ರ ಕಾಂಗ್ರೆಸ್ (ಐ) ಸಚಿವ ಜಾಫರ್ ಷರೀಫರು ರಾಜ್ಯದಲ್ಲಿ ಭೂ ಕಾಯಿದೆಯನ್ನು ಉಲ್ಲಂಘಿಸಿ ಅನೇಕ ಏಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದು ಬೆಳಕಿಗೆ ಬಂದಿತು. ಭಿನ್ನಮತೀಯರ ನಾಯಕರಲ್ಲೊಬ್ಬರಾದ ಕಂದಾಯ ಸಚಿವ ರಾಜಶೇಖರ ಮೂರ್ತಿ ಈ ವಿಚಾರದಲ್ಲಿ ಪ್ರಾಥಮಿಕ ತನಿಖೆ ನಡೆಸಲು ನೇಮಿಸಿದ್ದ ವಿಭಾಗಾಧಿಕಾರಿ ವಿಣಾಶ್ರೀ ರಾಮರಿಗೆ ಹಠಾತ್ತಾಗಿ ವರ್ಗವಾಯಿತು. ಇದ್ದಕ್ಕಿಂತಲೂ ಕಂದಾಯ ಸಚಿವರು ವಿದೇಶೀ ಮದ್ಯದ ದೊರೆ ಖೋಡೆ ಐದು ಸಾವಿರ ಏಕರೆಗಿಂತಲೂ ಹೆಚ್ಚು ಭೂಮಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದು ಭೂ ಶಾಸನಕ್ಕೆ ಅನುಗುಣವಾಗಿದೆಯೇ ಎಂಬುದನ್ನು ತನಿಖೆ ಮಾಡಲು ಆಜ್ಞಾಪಿಸಿದ್ದುದು ಬಹಿರಂಗವಾಯಿತು. ಜಾಫರ್ ಷರೀಫರ ಭೂ ಆಕ್ರಮಣದ ತನಿಖೆಯ ಸಂಬಂಧದಲ್ಲಿ ಮೊಯಿಲಿಯವರು ಭಿನ್ನಮತೀಯ ನಾಯಕ ರಾಜಶೇಖರ ಮೂರ್ತಿಯವರನ್ನು ಸಚಿವ ಸಂಪುಟದಿಂದ ವಜಾಮಾಡಿದುದರಿಂದ ಕಾಂಗ್ರೆಸ್(ಐ) ಒಳಗಿನ ಭಿನ್ನಮತ

ಪುಟ 8ಕ್ಕೆ

ಅಯೋಧ್ಯೆಗೆ ಬಿಜೆಪಿ ಮುಖಂಡರೊಡನೆ ಅಮೇರಿಕನ್ ಸೆನೆಟರುಗಳ ಭೇಟಿ

ಭಾರತ-ವಿರೋಧಿಗಳೊಡನೆ ಬಿಜೆಪಿಯ ಈ ಸಖ್ಯತೆ ಯಾಕೆ?

ನವಂಬರ್ 2ರಂದು ಒಂಭತ್ತು ಅಮೇರಿಕನ್ ಸೆನೆಟರುಗಳು ಬಿಜೆಪಿಯ ಮುಖಂಡರ ಜೊತೆಗೆ ಅಯೋಧ್ಯೆಗೆ ಭೇಟಿ ನೀಡಿದ್ದನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಖಂಡಿಸಿದ್ದಾರೆ. ಭಾರತ ಸರಕಾರ ಈ ಭೇಟಿಗೆ ಅವಕಾಶ ನೀಡಿದ್ದಕ್ಕೆ ಅದನ್ನು ತೀಕ್ಷ್ಣವಾಗಿ ಟೀಕಿಸಿದ್ದಾರೆ.

ಪ್ರಸ್ತುತ ವಿಧಾನಸಭಾ ಚುನಾವಣಾ ಚಟುವಟಿಕೆಗಳಲ್ಲಿ ಅಮೇರಿಕಾ ಅಸಾಮಾನ್ಯ ಆಸಕ್ತಿ ತೋರುತ್ತಿದೆ ಎಂದ ಸುರ್ಜಿತ್ ಈ ಹಿನ್ನೆಲೆಯಲ್ಲಿ ಕಾಶ್ಮೀರದ ಬಗ್ಗೆ ಅಮೇರಿಕಾದ ಆಕ್ಷೇಪಾರ್ಹ ಹೇಳಿಕೆಯತ್ತ ಗಮನ ಸೆಳೆಯುತ್ತಾ ಅದು ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾದುದನ್ನೇ ಪ್ರಶ್ನಿಸುತ್ತದೆ ಎಂದರು. ಭಾರತ ಸರಕಾರ ಒಂದು ಪ್ರತಿಭಟನೆ ಕಳಿಸಿದ್ದರೂ ಅದು ದುರ್ಬಲ ದನಿ. ಭಾರತ ಸರಕಾರ ಪ್ರತಿಭಟಿಸಬೇಕಾದ ರೀತಿಯಲ್ಲಿ ಪ್ರತಿಭಟಿಸಿಲ್ಲ ಎಂದು ಸುರ್ಜಿತ್ ಹೇಳಿದರು. ಅವರು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದರು.

ಇನ್ನೊಂದು ಗಮನಾರ್ಹ ಅಂಶವೆಂದರೆ ಅಮೇರಿಕಾ ಮತ್ತು ಬಿಜೆಪಿ ನಡುವೆ ಬೆಳೆಯುತ್ತಿರುವ ಗೆಳೆತನ. ಅಮೇರಿಕನ್ ಸೆನೆಟರುಗಳು ಮೊದಲು ನೋಡಬಯಸಿದ್ದು ಅಯೋಧ್ಯೆಯ ವಿವಾದಗ್ರಸ್ತ ಪ್ರದೇಶ ಎಂಬುದು ಗಮನಾರ್ಹ. ಮಾಜಿ ಬಿಜೆಪಿ ಮಂತ್ರಿ ಲಾಲ್‌ಜೀ ಟಂಡನ್ ಸೇರಿದಂತೆ ಬಿಜೆಪಿ ಮುಖಂಡರು ಅಮೇರಿಕನ್ ಸೆನೆಟರುಗಳನ್ನು ಅಯೋಧ್ಯೆಯ ನಿರ್ದೇಶಿತ ಪ್ರವಾಸಕ್ಕೆ ಕೊಂಡೊಯ್ದರು. ಸಾಮಾನ್ಯವಾಗಿ ವಿದೇಶೀ ನಿಯೋಗದ ಪ್ರವಾಸ ಕಾರ್ಯಕ್ರಮಗಳನ್ನೆಲ್ಲಾ ಸರಕಾರ ನಿರ್ಧರಿಸಬೇಕು. ಹಾಗಿರುವಾಗ ಅಮೇರಿಕನ್ ಸೆನೆಟರುಗಳು ತಾವಾಗಿ ಹೇಗೆ ಬಿಜೆಪಿ ಮುಖಂಡರೊಂದಿಗೆ ಅಯೋಧ್ಯೆಗೆ ಹೋದರು ಎಂದು ಸುರ್ಜಿತ್ ಪ್ರಶ್ನಿಸಿದ್ದಾರೆ. ಇದು ಬಿಜೆಪಿ ಹಾಗೂ ಅಮೇರಿಕನ್ ಆಳುವ ಜನಗಳ ನಡುವೆ ನಿಕಟ ಸಂಪರ್ಕ ಎಂಬುದನ್ನು ತೋರಿಸುತ್ತದಷ್ಟೇ. ಆದ್ದರಿಂದಲೇ ಯಾವ ಬಿಜೆಪಿ ಮುಖಂಡನೂ ಅಮೇರಿಕಾವನ್ನು ಖಂಡಿಸಲು ಮುಂದೆ ಬಂದಿಲ್ಲ ಹಾಗೂ ಅಮೇರಿಕಾ ಹೇರಿದ ಸರಕಾರದ ನೀತಿಗಳಿಗೆ ಪೂರ್ಣ ಬೆಂಬಲ ನೀಡಲಾಗುತ್ತಿದೆ ಎಂದು ಸುರ್ಜಿತ್ ಹೇಳಿದರು.

ಉತ್ತರಪ್ರದೇಶದಲ್ಲಿ ಬಿಜೆಪಿಯೇತರ ಸರಕಾರ

ಚುನಾವಣಾ ಸಾಧ್ಯತೆಗಳ/ಬಗ್ಗೆ ಮಾತನಾಡುತ್ತಾ ಸುರ್ಜಿತ್ ಯಾವುದೇ ರಾಜ್ಯದಲ್ಲಿ ಬಿಜೆಪಿ ಬಗ್ಗೆ ಅತ್ಯುತ್ಸಾಹ ಕಾಣುತ್ತಿಲ್ಲ ಎಂದರು. ಬಿಜೆಪಿ ಏನೇ ಪ್ರಯತ್ನ ಮಾಡಿದರೂ ಉತ್ತರಪ್ರದೇಶದಲ್ಲಿ ಅದು ಅಧಿಕಾರಕ್ಕೆ ಬರುವುದಿಲ್ಲ ಎಂಬ ಪೂರ್ಣ ವಿಶ್ವಾಸದಿಂದ ಭವಿಷ್ಯ ನುಡಿಯಬಲ್ಲೆ ಎಂದು ಅವರು ಹೇಳಿದರು. ಜಾತ್ಯಾತೀತ ವಿರೋಧ ಪಕ್ಷಗಳ ಐಕ್ಯತೆಯ ಪ್ರಯತ್ನಗಳಲ್ಲಿ ಕಾಂಗ್ರೆಸ್(ಐ) ತಲೆ ತೂರಿಸದಿದ್ದಿದ್ದರೆ ಬಿಜೆಪಿಗೆ ಶೋಚನೀಯ ಸೋಲು ಉಂಟಾಗುತ್ತಿತ್ತು. ಐಕ್ಯತೆಯ ಮಾತುಕತೆಗಳು ಮುರಿದರೂ ಕೂಡಾ ಬಿಜೆಪಿ ಸೋಲುತ್ತದೆ, ಏಕೆಂದರೆ ಜನ ಬಿಜೆಪಿಯನ್ನು ಸೋಲಿಸಬಲ್ಲ ಅಭ್ಯರ್ಥಿಗಳಿಗೆ ಮತ ನೀಡುತ್ತಾರೆ ಎಂದು ಅವರು ಹೇಳಿದರು.

ಬಿಜೆಪಿಯೇತರ ಜಾತ್ಯಾತೀತ ಕೂಟ ಸರಕಾರ ರಚಿಸಬೇಕಾದರೆ ತನ್ನ ಮೇಲೆ ಅವಲಂಬಿಸಲೇಬೇಕಾದ ಪರಿಸ್ಥಿತಿ ಸೃಷ್ಟಿಸುವುದು ಕಾಂಗ್ರೆಸ್(ಐ)ನ ಉದ್ದೇಶ. ಆದರೆ ಇಂತಹ ಸನ್ನಿವೇಶ ನಿರ್ಮಾಣವಾಗುವ ಸಂಭವ ಕಡಿಮೆ. ಜಾತ್ಯಾತೀತವಾದ ವಿರೋಧ ಶಕ್ತಿಗಳೇ ಸರಕಾರ ರಚಿಸಲು ಸಾಧ್ಯವಾಗುತ್ತದೆ ಎಂದು ಸುರ್ಜಿತ್ ಹೇಳಿದರು.

ಬೇರೆ ರಾಜ್ಯಗಳಲ್ಲಿ ಕಂಡು ಬರುವ ಚಿತ್ರವೆಂದರೆ ಬಿಜೆಪಿಯ 'ರಾಮ ದೇವಸ್ಥಾನದ ಘೋಷಣೆಗೆ ಹಿಂದೆ ಸಿಕ್ಕಂತಹ ಸ್ಪಂದನ ದೊರೆಯುತ್ತಿಲ್ಲ. ಬಿಜೆಪಿ ಸರಕಾರಗಳ ದಾಖಲೆ ಎಷ್ಟು ಕೆಟ್ಟದಾಗಿದೆಯೆಂದರೆ ಅದರ ಆಧಾರದ ಮೇಲೂ ಅವರಿಗೆ ಮತ ಕೇಳುವ ಸಾಮರ್ಥ್ಯವಿಲ್ಲ. ಈ ರಾಜ್ಯಗಳಲ್ಲಿ ಬಿಜೆಪಿಯ ಪ್ರಭಾವ ಕುಂದುತ್ತಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್(ಐ) ಕುರಿತಂತೆ ಹೇಳಬೇಕಾದರೆ ಅದರ ವಿನಾಶಕಾರೀ ಧೋರಣೆಗಳೊಂದಿಗೆ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಒತ್ತಿ ಹೇಳುವ ಸುರ್ಜಿತ್ "ಎಲ್ಲೂ ನಾವು ರಾಜಿ ಮಾಡಿಕೊಳ್ಳುವುದಿಲ್ಲ. ಎಲ್ಲೂ ಅವರೊಂದಿಗೆ ಜಂಟಿಯಾಗಿ ಪ್ರಚಾರ ನಡೆಸುವುದಿಲ್ಲ" ಎಂದರು. ಜ್ಯೋತಿ ಬಸುರವರು ಶಿಮ್ಲಾ ಪತ್ರಿಕಾ ಸಮ್ಮೇಳನದಲ್ಲಿ ಇದನ್ನೇ ಹೇಳಿದರು. ಆದರೆ ಪತ್ರಿಕೆಗಳು ಅವರು ಹೇಳಿದುದರಲ್ಲಿ ಒಂದಂಶವನ್ನಷ್ಟೇ ಎತ್ತಿ ತೋರಿಸಿದೆ ಎಂದರು. ವಿಧಾನಸಭೆಗಳಲ್ಲಿ ಯಾರಿಗೂ ಬಹುಮತ ಇರದ ಸ್ಥಿತಿ ಬಂದರೆ ಕಾಂಗ್ರೈಯನ್ನು ಬೆಂಬಲಿಸುತ್ತೀರಾ ಎಂಬ ಪ್ರಶ್ನೆಗೆ ಇಂತಹ ಸಾಧ್ಯತೆಗಳೆಲ್ಲಾ ಆಗ ಮೂಡಿ ಬರುವ ನಿರ್ದಿಷ್ಟ ಸ್ಥಿತಿಯನ್ನು ಅವಲಂಬಿಸಿರುತ್ತದೆ ಎಂದರು.

ಬಿಜೆಪಿ ಮತ್ತು ಅಕಾಲಿ ದಳ(ಬಾದಲ್) ನಡುವಿನ ಸಮಯಸಾಧಕ ಗೆಳೆತನವನ್ನು ಸುರ್ಜಿತ್ ಮತ್ತೊಮ್ಮೆ ಬಲವಾಗಿ ಟೀಕಿಸಿದರು. ಅಕಾಲಿಗಳು 'ಖಾಲಿಸ್ತಾನ'ದ ಘೋಷಣೆ ಹಾಕಿದರೆ ಬಿಜೆಪಿ 'ಹಿಂದುತ್ವ'ದ ಘೋಷಣೆ ಹಾಕುತ್ತದೆ. ಇವೆರಡರಲ್ಲಿಯೂ ಇರುವ ಏಕೈಕ ಸಮಾನಾಂಶವೆಂದರೆ ಇಬ್ಬರೂ ರಾಷ್ಟ್ರೀಯ ಐಕ್ಯತೆಯನ್ನು ಮುರಿಯುವುದು. 1984ರ ದಂಗೆಗಳ ಹಿನ್ನೆಲೆಯಲ್ಲಿ ಕಾಂಗ್ರೈ ಬಗ್ಗೆ ಅಕಾಲಿಗಳ ಸಿಟ್ಟು ಅರ್ಥವಾಗುತ್ತದಾದರೂ ಬಿಜೆಪಿಗೆ ಅವರ ಬೆಂಬಲ ಏಕೆ ಎಂಬುದನ್ನೂ ಅದು ವಿವರಿಸುವುದಿಲ್ಲ ಎಂದರು.

ಎಡಪಕ್ಷಗಳು ಹಾಗೂ ಜನತಾದಳ ನಡುವೆ ಐಕ್ಯತೆ ಏಕೆ ಬರಲಿಲ್ಲ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಒಟ್ಟಾರೆಯಾಗಿ ಎಡಪಕ್ಷಗಳ ನಡುವೆ ತಿಕ್ಕಾಟವಿಲ್ಲ, ಜನತಾದಳದೊಂದಿಗೆ ಸೀಟು ಹೊಂದಾಣಿಕೆಯ ಕೆಲವು ಸಮಸ್ಯೆಗಳು ಬಂದಿರಲು ಕಾರಣ ಚುನಾವಣೆಯ ಸ್ವಲ್ಪ ಮೊದಲಷ್ಟೇ ವಿವಿಧ ಪಕ್ಷಗಳು ಜನತಾದಳದಲ್ಲಿ ವಿಲೀನವಾದುದರಿಂದ. ಅಭ್ಯರ್ಥಿ ಪತ್ರ ವಾಪಸು ತೆಗೆದುಕೊಳ್ಳುವ ಕೊನೆಯ ದಿನಾಂಕದವರೆಗೂ ಜನತಾದಳದ ವಿವಿಧ ಘಟಕಗಳ ನಡುವೆಯೇ ಹೊಂದಾಣಿಕೆಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗಲಿಲ್ಲ ಎಂದು ಸುರ್ಜಿತ್ ವಿವರಿಸಿದರು. ಈ ಸಮಸ್ಯೆಗಳೇನೇ ಇದ್ದರೂ ಸಿಪಿಐ(ಎಂ) ಜನತಾದಳಕ್ಕೆ ಪೂರ್ಣ ಬೆಂಬಲ ನೀಡುತ್ತಿದೆ, ಉತ್ತರ ಪ್ರದೇಶದಲ್ಲಿ ಜಾತ್ಯಾತೀತ ಶಕ್ತಿಗಳು ಗೆಲ್ಲಬೇಕೆಂದು ಬಯಸುತ್ತದೆ ಎಂದರು.

ಉತ್ತರಪ್ರದೇಶ: 17 ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧೆ

ಸಿಪಿಐ(ಎಂ) ಉತ್ತರ ಪ್ರದೇಶದಲ್ಲಿ 17 ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ಜನತಾದಳದೊಡನೆ ಹೊಂದಾಣಿಕೆ ಮಾತುಕತೆಗಳಲ್ಲಿ 9 ಸ್ಥಾನಗಳನ್ನು ಸಿಪಿಐ(ಎಂ)ಗೆ ಬಿಟ್ಟುಕೊಡುವುದಾಗಿ ಹೇಳಿದ್ದರೂ ಬಿಟ್ಟಿರುವುದು 7 ಸ್ಥಾನಗಳು. ಸಿ.ಪಿ.ಐ.ಗೆ 19 ಸ್ಥಾನಗಳನ್ನು ನೀಡಿದ್ದರೂ 17 ಸ್ಥಾನಗಳಲ್ಲಿ ಹೊಂದಾಣಿಕೆಯಿದೆ ಉಳಿದ ಎರಡೆರಡು ಸ್ಥಾನಗಳಲ್ಲಿ ಜನತಾದಳ ಚಿಹ್ನೆ ಪಡೆದ ಅಭ್ಯರ್ಥಿಗಳಿದ್ದಾರೆ.

ಸಿಪಿಐ(ಎಂ) ಸ್ಪರ್ಧಿಸುತ್ತಿರುವ 17 ಸ್ಥಾನಗಳಲ್ಲಿ 1991 ರ ಚುನಾವಣೆಗಳಲ್ಲಿ ಗೆದ್ದ ಗಂಗಾಪುರ (ವಾರಣಾಸಿ ಜಿಲ್ಲೆ)ವೂ ಇದೆ. ಈ ಬಾರಿ ರಾಜ್ಯ ಕಿಸಾನ್ ಸಭಾ ಅಧ್ಯಕ್ಷ ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ರಾಜ್ಯದ ಹಿರಿಯ ಮುಖಂಡ ರಾಜ್ ಕಿಶೋರ್ ಈ ಇಲ್ಲಿ ಅಭ್ಯರ್ಥಿಯಾಗಿದ್ದಾರೆ.

ಸಿಪಿಐ(ಎಂ) ಸ್ಪರ್ಧಿಸುತ್ತಿರುವ ಇನ್ನೊಂದು ಪ್ರಮುಖ ಸ್ಥಾನ ಸುಲ್ತಾನ್‌ಪುರ್ ಜಿಲ್ಲೆಯ ಇಸೌಲಿ. ಇಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರಸಮಿತಿ ಸದಸ್ಯ ರಾಮ್ ಸುಮೇರ್ ಯಾದವ್ ಅಭ್ಯರ್ಥಿಯಾಗಿದ್ದಾರೆ. ಇವೆರಡರಲ್ಲೂ ಜನತಾದಳದೊಡನೆ ಸೀಟು ಹೊಂದಾಣಿಕೆಯಿದೆ. ಮುಲಾಯಂ ಸಿಂಗ್ ಯಾದವ್ ಇಸೌಲಿಯಲ್ಲಿ ಅಭ್ಯರ್ಥಿಯನ್ನು ನಿಲ್ಲಿಸಿಲ್ಲ. ಆದರೆ ಸಿಪಿಐ ಅಭ್ಯರ್ಥಿ ಕಣದಲ್ಲಿದ್ದಾರೆ.

ಇನ್ನೊಂದು ಮಹತ್ವದ ಸ್ಥಾನವೆಂದರೆ ಕಾನ್‌ಪುರನಗರದಲ್ಲಿನ ಸಿಸಮಾವು. ಇಲ್ಲಿ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ಕಾನ್‌ಪುರ ಜಿಲ್ಲಾ ಕಾರ್ಯದರ್ಶಿ ದೌಲತ್‌ರಾಮ್ ಅಭ್ಯರ್ಥಿಯಾಗಿದ್ದಾರೆ.

ಜನತಾದಳ ಒಂದು ತರ್ಕಬದ್ಧ ಹೊಂದಾಣಿಕೆ ಮಾಡಿಲ್ಲ. ಕೋಮುವಾದದ ವಿರುದ್ಧ ಹೋರಾಟದಲ್ಲಿ ಎಡಪಕ್ಷಗಳ ಪಾತ್ರವನ್ನು ಅದು ಸರಿಯಾಗಿ ಗಮನಕ್ಕೆ ತಗೊಂಡಿಲ್ಲ. ಇಂತಹ ಸನ್ನಿವೇಶದಲ್ಲಿ ಏಳೇ ಸ್ಥಾನಗಳಲ್ಲಿ ಹೊಂದಾಣಿಕೆಯಿದ್ದರೂ ಹದಿನೇಳು ಸ್ಥಾನಗಳಿಗೆ ಸ್ಪರ್ಧಿಸದೇಕಾಯಿತು ಎಂದು ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ ಪಿ.ಬಿ. ಸದಸ್ಯ ಪ್ರಕಾಶ್ ಕಾರಟ್ ಹೇಳಿದ್ದಾರೆ.

ಮಧ್ಯಪ್ರದೇಶ: 15 ಸ್ಥಾನಗಳಲ್ಲೂ ಸ್ಪರ್ಧೆ

ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಹದಿನೈದು ಅಭ್ಯರ್ಥಿಗಳನ್ನು ನಿಲ್ಲಿಸಿದೆ. ಈ ಪಟ್ಟಿಯಲ್ಲಿ ಒಬ್ಬ ಮಾಜೀಮಂತ್ರಿ, ಒಬ್ಬ ಮಾಜೀ ಎಂ.ಎಲ್.ಎ ಹಾಗೂ ಒಬ್ಬ ಪ್ರಸ್ತುತ ಎಂ.ಎಲ್.ಎ. ಸೇರಿದ್ದಾರೆ. ಸಿಐಟಿಯು ಹಾಗೂ ಎ.ಐ.ಕೆ.ಎಸ್.ನ ರಾಜ್ಯ ಕಾರ್ಯದರ್ಶಿಗಳು ಹಾಗೂ ಎಸ್.ಎಫ್.ಐ ರಾಜ್ಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸಿಪಿಐ(ಎಂ) ಅಭ್ಯರ್ಥಿಗಳಾಗಿದ್ದಾರೆ. ಮೀಸಲು ಕ್ಷೇತ್ರವೊಂದರಲ್ಲಿ ಮಹಿಳಾ ಅಭ್ಯರ್ಥಿಯನ್ನೂ ನಿಲ್ಲಿಸಲಾಗಿದೆ. ಒಟ್ಟು 5 ಮೀಸಲು ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. ಇದರಲ್ಲಿ 4 ಬುಡಕಟ್ಟುಗಳಿಗೆ ಮೀಸಲಾದ ಸ್ಥಾನಗಳು.

ರಾಜಸ್ಥಾನ: 11 ಸ್ಥಾನಗಳಲ್ಲಿ ಸ್ಪರ್ಧೆ

ರಾಜಸ್ಥಾನದಲ್ಲಿ ಸಿಪಿಐ(ಎಂ) 11 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದು ಇದರಲ್ಲಿ 3 ಸ್ಥಾನಗಳು ಗಂಗಾನಗರ್ ಜಿಲ್ಲೆಯಲ್ಲಿವೆ. ಈ ಮೂರರಲ್ಲೂ ಸಿಪಿಐ(ಎಂ)ಬಲವಾದ ಸ್ಪರ್ಧೆ ನೀಡುತ್ತಿದೆ ಎಂದು "ಲೋಕಲಹರ್" ಪತ್ರಿಕೆಯ ಕಾಂ. ರಾಜೇಂದ್ರ ಶರ್ಮಾ ವರದಿ ಮಾಡಿದ್ದಾರೆ.

ಹನುಮಾನಗಢದಲ್ಲಿ ಹಿರಿಯ ಸಿಪಿಐ(ಎಂ) ಮುಖಂಡ ಶಿವಪತ್ ಸಿಂಗ್ ಅಭ್ಯರ್ಥಿಯಾಗಿದ್ದಾರೆ. ಅದೀಗ 'ಕೆಂಪುಕೋಟೆ'ಯಂತಾಗಿದೆ. ಗಂಗಾನಗರ್ ಜಿಲ್ಲೆಯಲ್ಲಿ ಕಳೆದ ಹಲವು ದಶಕಗಳಿಂದ ಕಮ್ಯುನಿಸ್ಟರು ಒಂದು ಗಣನೀಯ ಶಕ್ತಿಯಾಗಿದ್ದಾರೆ. ಶಿವಪತ್ ಸಿಂಗ್ 1957 ಹಾಗೂ 1977ರಲ್ಲಿ ಈ ಸ್ಥಾನ ಗೆದ್ದಿದ್ದರು. ನೀರಾವರಿ, ಭೂಹೀನರಿಗೆ ಭೂಮಿ, ಉಳುವವರಿಗೆ ಭೂಮಿ ಮುಂತಾದ ಹಲವು ಹೋರಾಟಗಳಿಗೆ ಇಲ್ಲಿ ನೇತೃತ್ವ ನೀಡಿದವರು. ಈ ಬಾರಿ ಕಾಂಗ್ರೆಸ್(ಐ) ಬಿಜೆಪಿಗಳು ಹಣವನ್ನು ನೀರಿನಂತೆ ಸುರಿಯುತ್ತಿದ್ದಾರೆ. ಆದ್ದರಿಂದ ಇಲ್ಲಿನ ಸ್ಪರ್ಧೆ ಬಡ ಮತ್ತು ಶ್ರೀಮಂತ ಪಕ್ಷಗಳ ನಡುವಿನ ಸ್ಪರ್ಧೆಯಾಗಿಬಿಟ್ಟಿದೆ. ಹಣ ಶಕ್ತಿಯನ್ನು ರೈತಾಪಿ ವರ್ಗ ಕಾರ್ಮಿಕರ ಬೆಂಬಲದಿಂದ ಎದುರಿಸಲು ಸಿಪಿಐ(ಎಂ) ಪ್ರಯತ್ನಿಸುತ್ತಿದೆ.

ಸಾಂಗರಿಯಾದಲ್ಲಿ ಕಳೆದ ಬಾರಿ ಎಂ.ಎಲ್.ಎ. ಆಗಿದ್ದ ಹೇತ್‌ರಾಂ ಬೇನಿವಾಲ್ ಈ ಬಾರಿಯೂ ಸ್ಪರ್ಧಿಸುತ್ತಿದ್ದಾರೆ. ಮೂರು ಬಾರಿ ಸತತವಾಗಿ ಇಲ್ಲಿ ಠೇವಣಿ ಕಳಕೊಂಡ ಬಿಜೆಪಿ ಈ ಬಾರಿ ಈ ಸೀಟನ್ನು ಮಾಜಿ ಕಾಂಗ್ರೆಸ್ಸಿಗನಿಗೆ ನೀಡಿದೆ.

ಸೂರತ್‌ಗಡ್ ಕೂಡಾ ಸಿಪಿಐ(ಎಂ) ಪ್ರಭಾವವಿರುವ ಸ್ಥಾನ. ಈ ಪ್ರದೇಶದ ದೊಡ್ಡ ಗ್ರಾಮ ಪಂಚಾಯತಾದ ರಾಮಪುರದ ಮಾಜೀ ಸರಪಂಚರಾದ ಬಲರಾಂ ವರ್ಮಾ ಇಲ್ಲಿ ಸಿಪಿಐ(ಎಂ) ಅಭ್ಯರ್ಥಿ ದುಡಿಯುವ ಜನಗಳಿಂದ ಗಮನಾರ್ಹ ಬೆಂಬಲಗಳಿಸುತ್ತಿದ್ದಾರೆ.

ಶಿಮ್ಲಾ: ಕೆಂಪುಬಾವುಟಗಳ ಸಾಲುಸಾಲು

ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾದಿಂದ ಆ ರಾಜ್ಯದ ವಿಧಾನಸಭೆಗೆ ಸಿಪಿಐ(ಎಂ) ಅಭ್ಯರ್ಥಿ ಯುವಕರಾದ ಹಾಗೂ ಭಾರೀ ಜನಪ್ರಿಯತೆಗಳಿಸಿರುವ ರಾಕೇಶ್ ಸಿಂಘಾ. ಭಾರತದ ಈ ಪ್ರಸಿದ್ಧ ಗಿರಿಧಾಮ ಈಗ ಕೆಂಪುಬಾವುಟಗಳಿಂದ, ಸುಡುಗೋಲು-ಸುತ್ತಿಗೆಯ ಬಾವುಟಗಳಿಂದ ಪೋಸ್ಟರು, ಗೋಡೆಬರಹಗಳಿಂದ ತುಂಬಿದೆ. ಸಿಪಿಐ(ಎಂ) ಕಾರ್ಯಕರ್ತರು ಎಲ್ಲೆಲ್ಲೂ ಕಾಣುತ್ತಿದ್ದಾರೆ. ಅಕ್ಟೋಬರ್ 28 ರಂದು ನಡೆದ ಸಿಪಿಐ(ಎಂ)ನ ರ್‍ಯಾಲಿ ಉತ್ಸಾಹ ತುಂಬುವಂತದ್ದಾಗಿತ್ತು. ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ, ರಾಜ್ಯಸಭಾ ಸದಸ್ಯೆ ಸರಳಾ ಮಾಹೇಶ್ವರಿ ಹಾಗೂ ಸಿಪಿಐ(ಎಂ) ಪಂಜಾಬ್ ರಾಜ್ಯ ಕಾರ್ಯದರ್ಶಿ, ಮಂಗತ್‌ರಾಮ್ ಪಾಸ್ಲಾ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತಿದಾರೆ.

ಕರಸೇವಕರು ಕಾಂಗ್ರೆಸ್ಸಿಗೆ!

ರಾಜಸ್ಥಾನದ ಜೋಧಪುರ ಜಿಲ್ಲೆಯಿಂದ ಅಯೋಧ್ಯೆಗೆ ಹೋಗಿ ಕಾರ್‌ಸೇವೆ ನಡೆಸಿದ ಐವತ್ತು ಮಂದಿ ಬಿಜೆಪಿ ಬಿಟ್ಟು ಕಾಂಗ್ರೆಸ್(ಐ) ಸೇರಿದ್ದಾರಂತೆ. ಈ ಕಾರಸೇವಕರು ಕ್ರಿಮಿನಲ್ ದಾಖಲೆಗಳನ್ನು ಹೊಂದಿದ್ದ ವ್ಯಕ್ತಿಗಳು ಎಂದು ವಿ.ಹೆಚ್. ಪಿ. ವಕ್ತಾರರೊಬ್ಬರು ಹೇಳಿದ್ದಾರಂತೆ. ಈ ದಾಖಲೆಗಳು ಅಯೋಧ್ಯೆಗೆ ಹೋಗುವ ಮೊದಲೂ ಇದ್ದವು. ಆಗ ಅದು ವಿ.ಹೆಚ್.ಪಿ.ಯ ಖೋಟಾ ಧಾರ್ಮಿಕರಿಗೆ ದೇಖಾಗಿರಲಿಲ್ಲ!

* * * * * * * *

ಬಿಜೆಪಿ- ವಿ.ಹೆಚ್.ಪಿ

"ಒಟ್ಟಾರೆಯಾಗಿ ಮುಸಲ್ಮಾನರು ಬಾಬ್ರಿಮಸೀದಿ ಧ್ವಂಸದಿಂದ ಬಿಜೆಪಿ ಬಗ್ಗೆ ಬೇಸರಗೊಂಡಿರಬಹುದು. ಆದರೆ ಪುಷ್ಕರದ ಮುಸಲ್ಮಾನರು ನನ್ನ ಬಗ್ಗೆ ಖುಶಿಯಾಗಿದ್ದಾರೆ"- ಇದು ರಾಜಸ್ಥಾನದ ಅಜ್ಮೀರ್ ಜಿಲ್ಲೆಯಲ್ಲಿ ಪುಷ್ಕರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ಅಂಬೋಣ. ಹೌದು. ಈತ ಮುಸಲ್ಮಾನ-ರಮಝಾನ್ ಖಾನ್. ತನ್ನ ಪಕ್ಷದ ಮುಖಂಡರು "ಬಾಬ್ರಿಮಸೀದಿ ಧ್ವಂಸದ "ವೀರಗಾಥೆ"ಯ ಆಧಾರದ ಮೇಲೆಯೇ ಚುನಾವಣೆ ಹೋರಾಟಕ್ಕಿಳಿದಿದ್ದಾರೆ ಎಂಬುದು ಆತನಿಗೆ ಗೊತ್ತಿಲ್ಲದ ವಿಷಯವಲ್ಲ. ಇಲ್ಲಿಯ ಸುತ್ತಮುತ್ತಲಿನ ಮುಸಲ್ಮಾನರು ಹಿಂದೂ ಸಂಪ್ರದಾಯಗಳನ್ನು ಅನುಸರಿಸುವವರು. ಆದರೂ ಬಾಬ್ರಿಮಸೀದಿ ಧ್ವಂಸದ ನಂತರದ ಕೋಮುಗಲಭೆಗಳಿಂದ ಈ ಪ್ರದೇಶವೂ ಮುಕ್ತವಾಗಿರಲಿಲ್ಲ. ಬಿ.ಜೆ.ಪಿಗಳಲ್ಲಿ ಆಗ ಮಂತ್ರಿಯಾಗಿದ್ದ ಖಾನ್ ಮಾತ್ರ ಮುಸ್ಲಿಮರ ರಕ್ಷಣೆಗೆ ಬಂದರಂತೆ. ಕಳೆದ ಬಾರಿ ವಿ.ಹೆಚ್.ಪಿ. ಒಬ್ಬ ಮುಸಲ್ಮಾನನ್ನು ಬಿಜೆಪಿಯವರು ಚುನಾವಣೆಗೆ ನಿಲ್ಲಿಸಿದರಿಂದ ಕುಪಿತರಾಗಿ ತಮ್ಮದೇ ಅಭ್ಯರ್ಥಿಯನ್ನು ನಿಲ್ಲಿಸಿದ್ದರು. ಈ ಬಾರಿಯೂ ಆತ ಸ್ಪರ್ಧಿಸುತ್ತಿದ್ದಾನೆ. ಆದರೆ ರಾಜಸ್ಥಾನದಲ್ಲಿ ಬಿಜೆಪಿಯ ಪರಿಸ್ಥಿತಿ ನೋಡಿ ಈ ಬಾರಿ ಆತನನ್ನು ನೇರವಾಗಿ ವಿ.ಹೆಚ್.ಪಿಯವರು ಬೆಂಬಲಿಸುತ್ತಿಲ್ಲ. ಬಿಜೆಪಿ ಅಭ್ಯರ್ಥಿ ರಮ್‌ಝಾನ್‌ಖಾನನ್ನು ಬೆಂಬಲಿಸುತ್ತಿಲ್ಲ"

* * * * * * * *

ಮಹಾರಾಣಿ V/S ಬಂಡವಾಳದ 'ಮಹಾರಾಜ'

ರಾಜ್ಯಸ್ಥಾನದ ಧೋಲ್‌ಪುರದಲ್ಲಿನ ಚುನಾವಣಾ ಹೋರಾಟ ಬಿಜೆಪಿ ಮತ್ತು ಕಾಂಗ್ರೆ ನಡುವಿನ ಸಮಾನತೆ ಮತ್ತು ಭಿನ್ನತೆಗಳ ಒಂದು ಸಂಕೇತದಂತಿದೆ. ಬಿಜೆಪಿಯ ಅಭ್ಯರ್ಥಿ ಧೋಲ್‌ಪುರದ ಮಹಾರಾಣಿ. ಕಾಂಗ್ರೆ ಅಭ್ಯರ್ಥಿ ಸ್ಥಳೀಯ ವ್ಯಾಪಾರೀ ಸಾಮ್ರಾಜ್ಯದ 'ಮಹಾರಾಜ'. ಬಿಜೆಪಿ ಮಹಾರಾಣಿಯ ಚುನಾವಣಾ ಕೇಂದ್ರ 'ಭವ್ಯ' ರಾಜಮಹಲು, ಕಾಂಗ್ರೆ 'ಮಹಾರಾಜ'ನ ಚುನಾವಣಾ ಕೇಂದ್ರ ಅಷ್ಟೇ 'ಭವ್ಯ' ವಾದ ಜಗನ್ ಹೋಟೇಲ್-ಶಾಪಿಂಗ್-ಕಾಂಪ್ಲೆಕ್ಸ್. ಒಟ್ಟಿನಲ್ಲಿ ಹಣದ ಸುರಿಮಳೆ ಎರಡೂ ಕಡೆಗಳಿಂದಲೂ. ಬಿಜೆಪಿ ಮೊದಲಿಗೆ ಇಲ್ಲಿಂದ ಸ್ಪರ್ಧಿಸಲು ವಿ.ಹೆಚ್.ಪಿ. ಮುಖಂಡ ಆಚಾರ್ಯ ಧರ್ಮೇಂದ್ರರ ಮಗ ರಣವೇಂದ್ರ ಶರ್ಮಾರನ್ನು ಆರಿಸಿತ್ತಂತೆ. ಆದರೆ ಸ್ಥಳೀಯ ಬಿಜೆಪಿ ಮಂದಿ ಆತನನ್ನು ನಾಮಪತ್ರ ಸಲ್ಲಿಸಲು ಕೂಡಾ ಬಿಡಲಿಲ್ಲ. ಕೊನೆಯಗಳಿಗೆಯಲ್ಲಿ ಮಹಾರಾಣಿಯನ್ನೇ ಬಿಜೆಪಿಯ ಅಭ್ಯರ್ಥಿಯನ್ನಾಗಿ ಆರಿಸಲಾಯಿತು.

ಇತಿಹಾಸದ ಪುಟಗಳಿಂದ

"ಆದರ್ಶ ಕಮ್ಯುನಿಸ್ಟನಾಗುವುದು ಹೇಗೆ?" ಗ್ರಂಥ ಬರೆದ

ಲಿಯು-ಷಾ-ವೊಕಿ

ವಿಶ್ವ ಕಮ್ಯೂನಿಸ್ಟ್ ಮುಖಂಡರೊಡನೆ



ಕಾಂ. ಇ.ಎಂ.ಎಸ್. 7

ಚೀನೀ ಕಮ್ಯುನಿಸ್ಟ್ ಪಕ್ಷದ 8ನೇ ಅಧಿವೇಶನದಲ್ಲಿ ರಾಜಕೀಯ ಪರಿಸ್ಥಿತಿಯ ಕುರಿತು ವರದಿ ಮಂಡಿಸಿದ್ದು ಲಿಯು ಷಾವೊಕಿ ಎಂದು ನಾನು ಈ ಹಿಂದೆ ತಿಳಿಸಿದ್ದೇನೆ. ಮಾವೋರವರು ಪಕ್ಷದ ಅಧ್ಯಕ್ಷರಾಗಿದ್ದರು, ಲಿಯೋ-ಷಾವೊಕಿ ಉಪಾಧ್ಯಕ್ಷರಾಗಿದ್ದರು. ಚೀನೀ ಕ್ರಾಂತಿಯ ಅನುಭವಗಳನ್ನು ಕ್ರೋಢೀಕರಿಸಿ ಪಕ್ಷದ ತಾತ್ವಿಕ ನಿಲುವುಗಳನ್ನು ರೂಪಿಸುವಲ್ಲಿ ಮಾವೋ ನಂತರ ಲಿಯೋ-ಷಾವುಕಿ ಪ್ರಮುಖರಾಗಿದ್ದರು.

ಲಿಯುರವರ ಹಲವಾರು ಕೃತಿಗಳನ್ನು ನಾನು ಓದಿದ್ದೇನೆ. ಅವರಲ್ಲಿ "ಆದರ್ಶ ಕಮ್ಯುನಿಸ್ಟನಾಗುವುದು ಹೇಗೆ" ಎಂಬ ತಲೆಬರಹದ ಗ್ರಂಥದಲ್ಲಿ ಚೀನೀ ಕ್ರಾಂತಿ ಮತ್ತು ಅದರಲ್ಲಿ ಪಕ್ಷ ವಹಿಸಿದ ನಾಯಕತ್ವದ ಪಾತ್ರದ ಬಗ್ಗೆ ಸರಳವಾದ ವಿವರಣೆ ಇತ್ತು. ಚೀನಾ ಮಾತ್ರವಲ್ಲದೆ, ಭಾರತ ಹಾಗೂ ಪ್ರಪಂಚದ ಇತರ ಕಮ್ಯುನಿಸ್ಟರಿಗೆ ದಾರಿ ದೀಪದಂತಿತ್ತು ಆ ಗ್ರಂಥ.

ಈ ಗ್ರಂಥದಲ್ಲಿ ಹಾಗೂ ಇತರೆ ಪತ್ರಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳಲ್ಲಿ ಪಕ್ಷದಲ್ಲಿನ ತಪ್ಪುಗಳನ್ನು ತಿದ್ದುವ ಪ್ರಕ್ರಿಯೆಯು ಪ್ರಾರಂಭವಾಗಿತ್ತು. ಚೀನೀ ಕ್ರಾಂತಿಕಾರಿಗಳ "ದೀರ್ಘ ಪಯಣ" (Long march) ಚಳುವಳಿ ನಡೆಯುತ್ತಿರುವ ಸಮಯದಲ್ಲಿಯೂ ಪಕ್ಷದೊಳಗಡೆ ಸದಾ ವಿಮರ್ಶೆ ಮತ್ತು ಸ್ವಯಂ ವಿಮರ್ಶೆಗಳು ನಡೆಯುವಂತೆ ಮಾಡಿದ್ದರು. ಪಕ್ಷದಲ್ಲಿನ ಎಡ ಮತ್ತು ಬಲ ಎಂಬ ವ್ಯತ್ಯಾಸಗಳಿಗೆದುರಾಗಿ ಒಂದೇ ಸಮಯದಲ್ಲಿ ನಡೆದ ಧೋರಣೆಗೆ ಸಂಬಂಧಿಸಿದ ಸಂಘರ್ಷವೇ "ತಿದ್ದುವ ಪ್ರಕ್ರಿಯೆ" ಯೆಂದು ಹೇಳಿಕೊಳ್ಳುವ ಪಕ್ಷದ ಆಂತರಿಕ ಹೋರಾಟ. ಚೀನೀ ಪಕ್ಷದ ಕ್ರಾಂತಿಕಾರಿ ಚಳುವಳಿಯನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ನಾಯಕತ್ವ ಕೊಡುವುದಕ್ಕೆ ಮತ್ತು ಅದರಲ್ಲಿ ಐಕ್ಯತೆಯನ್ನು ಉಂಟುಮಾಡುವುದಕ್ಕೆ "ತಿದ್ದುವ ಪ್ರಕ್ರಿಯೆ" ಯಲ್ಲಿ ಪ್ರಧಾನ ಸ್ಥಾನವಿತ್ತು. ಆದ್ದರಿಂದ, ಪಕ್ಷದ ಧೋರಣೆಗೆ ಹಾಗೂ ಕೆಲಸ ಕಾರ್ಯಗಳಿಗೆ ಸಂಬಂಧಿಸಿ ಮಾರ್ಗದರ್ಶನ ನೀಡುತ್ತಿದ್ದ ಮತ್ತು ತಿದ್ದುವ ಪ್ರಕ್ರಿಯೆಯ ನಾಯಕರಾದ ಲಿಯು-ಷಾ-ವೊಕಿ ಜೊತೆ ಧೋರಣೆಗೆ ಸಂಬಂಧಿಸಿ ವಿಚಾರ ವಿನಿಮಯ ನಡೆಸಬೇಕೆಂದು ನನಗೆ ಕಂಡಿತು.

ಚೀನೀ ಪಕ್ಷದ ರೀತಿಯಲ್ಲೇ ಇತರ ಸಹೋದರ ಪಕ್ಷಗಳಲ್ಲಿ, ಭಾರತದಲ್ಲಿಯೂ, ಕಮ್ಯುನಿಸ್ಟ್ ಪಕ್ಷದೊಳಗೆ ಎಡ ಮತ್ತು ಬಲ ಹೋರಾಟದ ಚರ್ಚೆ ನಡೆಯುತ್ತಿತ್ತು. 1951ರ ಜನವರಿಯಲ್ಲಿ ಭಾರತ ಮತ್ತು ಸೋವಿಯತ್ ಪಕ್ಷಗಳ ನಾಯಕತ್ವದ ನಡುವೆ ಧೋರಣೆ ವಿನಿಮಯ ಚರ್ಚೆಯು ನಡೆದುದರ ಆಧಾರದಲ್ಲಿ ಭಾರತದ ಪಕ್ಷದೊಳಗೆ ಧೋರಣೆಯಲ್ಲಿ ಮತ್ತು ಸಂಘಟನೆಯಲ್ಲಿ ಪುನರ್ ಸಂಘಟನಾ ಐಕ್ಯತೆ ರೂಪಿಸಲು ಪ್ರಯತ್ನ ನಡೆಯಿತು.

ಆದರೆ ಕೆಲವೇ ವರ್ಷಗಳಲ್ಲಿ ಹೊಸ ಪರಿಸ್ಥಿತಿಯನ್ನು ವಿಮರ್ಶಿಸುವಲ್ಲಿ ಮತ್ತು ಅಂದಾಜು ಮಾಡುವಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಹ್ಯಾರಿ ಪೊಲಿಟ್ ಮತ್ತು ಸೋವಿಯತ್ ಪಕ್ಷದ ನಾಯಕತ್ವವು ಈ ವಿಷಯದಲ್ಲಿ ಅತ್ಯಂತ ಸಕ್ರಿಯವಾಗಿ ಮಧ್ಯ ಪ್ರವೇಶಿಸಿದ ಮತ್ತು ಅದನ್ನು ಭಾರತದ ಕಮ್ಯುನಿಸ್ಟ್ ಪಕ್ಷವು ಎದುರಿಸಿದ ಬಗ್ಗೆ ಈ ಹಿಂದೆ ತಿಳಿಸಿದ್ದೇನೆ.

ಇದಕ್ಕೆ ಸಂಬಂಧಿಸಿಯೇ ಭಾರತ ಕಮ್ಯುನಿಸ್ಟ್ ಪಕ್ಷದ 4 ನೇ ಅಧಿವೇಶನದಲ್ಲಿ ತೀವ್ರವಾದಿ ಧೋರಣೆಯ ಕುರಿತು ಹೋರಾಟ ನಡೆದದ್ದು. ಭಾರತದ ಕಮ್ಯುನಿಸ್ಟ್ ಪಕ್ಷವು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಜೊತೆ ಐಕ್ಯತೆಯನ್ನು ಹೊಂದಿರಬೇಕೆಂದು ವಾದಿಸುವ ಒಂದು ಸಣ್ಣ ಗುಂಪಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಬಹುಸಂಖ್ಯಾತ ಪ್ರತಿನಿಧಿಗಳು ಆ ವಾದವನ್ನು ನಿರಾಕರಿಸಿದರು. ಇದೇ ಸಂದರ್ಭದಲ್ಲಿ ನಡೆದ ಸೋವಿಯತ್ ಪಕ್ಷದ 20ನೇ ಅಧಿವೇಶನದಲ್ಲಿ ಅಂದಾಜಿನ ಒಂದು ಭಾಗಕ್ಕೆ ಸಂಬಂಧಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ವಿರೋಧ ವ್ಯಕ್ತಪಟ್ಟಿತು.

ಈ ಸಂದರ್ಭದಲ್ಲಿ ಎಡ ಮತ್ತು ಬಲ ಭಿನ್ನತೆಗಳಿಗೆದುರಾಗಿ ಭಾರತದ ಪಕ್ಷದೊಳಗೆ ತೀವ್ರವಾದ ಹೋರಾಟ ಪ್ರಾರಂಭವಾಯ್ತು. ಚೀನೀ ಪಕ್ಷದಲ್ಲಿ ನಡೆದ ರೀತಿಯಲ್ಲಿ ತಪ್ಪನ್ನು ತಿದ್ದುವ ಪ್ರಕ್ರಿಯೆಯನ್ನು ಭಾರತದ ಪಕ್ಷದಲ್ಲೂ ನಡೆಸಬೇಕೆಂದು ನನಗನ್ನಿಸಿತು. ಈ ವಿಷಯದಲ್ಲಿ ಚೀನೀ ಕಮ್ಯುನಿಸ್ಟ್ ಪಕ್ಷದ ನಾಯಕರಾದ ಲಿಯು-ಷಾ-ವೊಕಿಯವರ ಮಾರ್ಗದರ್ಶನ ಪಡೆಯಬೇಕೆಂದು ನನಗನ್ನಿಸಿತು.

ಈ ನಿಟ್ಟಿನಲ್ಲಿ ಲಿಯುರವರ ಜೊತೆ ಅಭಿಪ್ರಾಯ ವಿನಿಮಯ ನಡೆಸಲು ಚೀನೀಸ್ ಪಕ್ಷ ನನಗೆ ಅವಕಾಶ ಕಲ್ಪಿಸಿಕೊಟ್ಟಿತು. ಸುಮಾರು ಒಂದು ಗಂಟೆಗೂ ಅಧಿಕ ಕಾಲ ನಾನು ಅವರೊಡನೆ ಸಂಭಾಷಣೆ ನಡೆಸಿದೆ. ನನ್ನ ಮಟ್ಟಿಗೆ ನಮ್ಮಿಬ್ಬರ ಈ ಚರ್ಚೆ ಬಹಳ ತೃಪ್ತಿಕರವಾಗಿತ್ತು.

ಈ ಸಂಭಾಷಣೆಯ ಪ್ರಾರಂಭದಲ್ಲಿ ನನ್ನ ಅಭಿಪ್ರಾಯವನ್ನು ಅವರ ಮುಂದೆ ಸಂಕ್ಷಿಪ್ತವಾಗಿ ಮಂಡಿಸಿದೆ. ಭಾರತ ದೇಶದ, ಭಾರತ ಪಕ್ಷದ ಸ್ಥಿತಿಗತಿಗಳನ್ನು ಒಟ್ಟಾರೆ ನೋಡಿದರೆ, ಚೀನಾದಲ್ಲಿ ನಡೆಸಿದ ತಪ್ಪು ತಿದ್ದುವ ಪ್ರಕ್ರಿಯೆಯನ್ನು ಭಾರತದಲ್ಲೂ ಮಾಡುವ ಅವಶ್ಯಕತೆಯಿರುವುದನ್ನೂ ಅವರಿಗೆ ತಿಳಿಸಿದೆ ಮತ್ತು ಆದ್ದರಿಂದಲೇ ಚೀನೀ ಪಕ್ಷದ ಮಾರ್ಗದರ್ಶನಗಳು ನಮಗೆ ಬೇಕಾಗಿವೆ ಎಂದು ತಿಳಿಸಿದೆ.

ಹಿಂದೆ ನಾನು ಲೂನಿಂಗ್ ಜೊತೆ ಚರ್ಚೆ ನಡೆಸಿದ ಸಂದರ್ಭದಲ್ಲಿ ಅವರು ವ್ಯಕ್ತಪಡಿಸಿದ ರೀತಿಯಲ್ಲೇ ಇವರೂ ನನಗೆ ಉತ್ತರಿಸಿದರು. ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಪ್ರಶ್ನೆಗಳಿಗೆ ಸಂಬಂಧಿಸಿ ಐತಿಹಾಸಿಕ ಭೌತಿಕವಾದದ ಆಧಾರದಲ್ಲಿ ತಪ್ಪು ತಿದ್ದುವ ಪ್ರಕ್ರಿಯೆಯನ್ನು ನಡೆಸಬೇಕೆಂದು ಅವರು ತಿಳಿಸಿದರು.

ಈ ಕೆಲಸವನ್ನು ಮಾಡಬೇಕಾಗಿರುವುದು ಭಾರತದ ಪಕ್ಷವೇ ಆಗಿದೆಯೆಂದು ತಿಳಿಸಿದರು. ಭಾರತದ ಪಕ್ಷಕ್ಕೆ ಚೀನೀ ಪಕ್ಷದ ಸಹಾಯ-ಸಹಕಾರದ ಅವಶ್ಯಕತೆಯಿದ್ದರೆ ಚೀನೀ ಕಮ್ಯುನಿಸ್ಟ್ ಪಕ್ಷದ ಸಹಾಯ ಹಸ್ತ ನೀಡುವುದಾಗಿ ಅವರು ನನಗೆ ಭರವಸೆ ನೀಡಿದರು. ಈ ಧೋರಣೆಯೇ ಐದು ವರ್ಷಕ್ಕೆ ಹಿಂದೆ ಸೋವಿಯತ್ ಪಕ್ಷ ತೆಗೆದುಕೊಂಡಿದ್ದು. ಭಾರತದ ಪಕ್ಷದೊಳಗೆ ಅಭಿಪ್ರಾಯ ಭೇದಗಳನ್ನು ಕೊನೆಗಾಣಿಸಲಿಕ್ಕೆ ಸೋವಿಯತ್ ಪಕ್ಷ ನೀಡಿದ ಸಲಹೆಯೂ ಇದೇ ಆಗಿತ್ತು. ಪ್ರಾಥಮಿಕವಾಗಿ ಭಾರತ ದೇಶದಲ್ಲಿನ ಸಂಗಾತಿಗಳೂ ನಡೆಸಬೇಕಾದ ಕ್ರಿಯೆಗಳನ್ನು ನಡೆಸಲು ಸೋವಿಯತ್ ಪಕ್ಷ ಸಹಾಯ ಮಾಡಿತು.

ನಂತರ ಭಾರತ ಮತ್ತು ಸೋವಿಯತ್ ಪಕ್ಷಗಳ ಪ್ರತಿನಿಧಿಗಳ ನಿಯೋಗಗಳು ಚರ್ಚಿಸಿ ತಯಾರಿಸಿದ ನೀತಿಗಳು ಭಾರತದ ಪಕ್ಷದೊಳಗೆ ವ್ಯಾಪಕವಾಗಿ ಚರ್ಚೆಯಾಗಿ, ತಿದ್ದುವ ಭಾಗಗಳನ್ನೂ ತಿದ್ದಿ, ಅದನ್ನು ನಂತರ ಅಂಗೀಕರಿಸಿ, ಅದರ ಆಧಾರದಲ್ಲಿ ಪಕ್ಷವನ್ನು ಒಂದುಗೂಡಿಸುವ ಸಲಹೆಯೇ, ಸ್ಟಾಲಿನ್ ನೇತೃತ್ವದ ಸೋವಿಯತ್ ನಿಯೋಗವು ಭಾರತದ ನಿಯೋಗಕ್ಕೆ ನೀಡಿದ ಸಂದೇಶ.

ಈ ಎರಡು ಅನುಭವಗಳಿಂದ ಒಂದು ವಿಷಯವು ವ್ಯಕ್ತವಾಯಿತು. 1943 ರಲ್ಲಿ ಕಮ್ಯುನಿಸ್ಟ್ ಅಂತರಾಷ್ಟ್ರೀಯವನ್ನು ವಿಸರ್ಜನೆ ಮಾಡಿದ್ದು ಕೇವಲ ಔಪಚಾರಿಕ ಕ್ರಮವಾಗಿರಲಿಲ್ಲ. ಒಂದೊಂದು ರಾಷ್ಟ್ರದ ಕಮ್ಯುನಿಸ್ಟ್ ಪಕ್ಷಗಳು ಅಲ್ಲಲ್ಲಿನ ಕಾರ್ಮಿಕ ವರ್ಗದ ಮತ್ತು ದುಡಿಯುವ ಜನತೆಯ ಕ್ರಾಂತಿಕಾರಿ ಹೋರಾಟಗಳಿಗೆ ನಾಯಕತ್ವವನ್ನು ಮತ್ತು ಅಲ್ಲಿನ ಪರಿಸ್ಥಿತಿಗನುಗುಣವಾಗಿ ತಾತ್ವಿಕ ರೂಪವನ್ನು ಕೊಡಬೇಕಾಗಿದೆ. ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ ಇಲ್ಲವೆಂದಾಕ್ಷಣಕ್ಕೆ ಸೋವಿಯತ್ ಪಾರ್ಟಿಯೆ, ಚೀನಾದ ಪಾರ್ಟಿಯೋ ಅಥವಾ ಇತರ ಯಾವುದೇ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಪಕ್ಷಗಳ ನಾಯಕತ್ವದಡಿಯಲ್ಲಿ ಕೆಲಸ ಮಾಡಬೇಕೆಂದಲ್ಲ. ಈ ಸತ್ಯವನ್ನು ಹೆಚ್ಚಾಗಿ ನಾನು ತಿಳಿದುಕೊಳ್ಳಲು ಲಿಯು ಷಾವೋಕಿ ಜೊತೆ ನಡೆದ ಸಂಭಾಷಣೆ ಸಹಾಯಮಾಡಿತು.

ಇದರ ನಂತರ ನಾನು ಲಿಯುರವರನ್ನು ನೋಡಿದ್ದು 1960 ರಲ್ಲಿ ಮಾಸ್ಕೋದಲ್ಲಿ ನಡೆದ 81 ರಾಷ್ಟ್ರಗಳ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನದಲ್ಲಿ. ಅದರಲ್ಲಿ ಭಾಗವಹಿಸಿದ್ದ ಚೀನೀ ಪಕ್ಷದ ನಿಯೋಗದ ನಾಯಕರಾಗಿ ಲಿಯೂ ಬಂದಿದ್ದರು. ಆದರೆ ನಿಯೋಗದ ಪರವಾಗಿ ಸಮ್ಮೇಳನದಲ್ಲಿ ಮಾತನಾಡಿದವರು ಡೆಂಗ್-ಜಿಯೋ-ಪಿಂಗ್ ಆಗಿದ್ದರು.

ಆ ಸಂದರ್ಭಕ್ಕೆ ಇಡೀ ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲಿ ಹಲವಾರು ಮಹತ್ತರ ಬದಲಾವಣೆಗಳಾಗಿದ್ದವು. ಸೋವಿಯತ್ ಪಕ್ಷಕ್ಕೆ ಬೆಂಬಲ ಕೊಡುವವರು ಮತ್ತು ಚೀನೀ ಪಕ್ಷಕ್ಕೆ ಬೆಂಬಲ ಕೊಡುವವರಾಗಿ ಪ್ರಪಂಚದ ಕಮ್ಯುನಿಸ್ಟ್ ಪಕ್ಷಗಳು ಎರಡು ಭಾಗಗಳಾದವು. ಭಾರತದ ತಂಡದಲ್ಲಿಯೂ ಎರಡು ಗುಂಪುಗಳಾದವು. ಈ ಎರಡೂ ಗುಂಪುಗಳ ವಾದಗಳಲ್ಲಿ ನನಗೆ ಸಂಪೂರ್ಣ ಒಮ್ಮತವಿಲ್ಲದ ಕಾರಣ ನಾನು ಸ್ವತಂತ್ರವಾದ ನಿಲುವನ್ನು ಪಡೆದೆ.

ಸಮ್ಮೇಳನದಲ್ಲಿ ಭಾಗವಹಿಸಿದ ನಮ್ಮ ನಿಯೋಗದ ವರದಿಯನ್ನು ಸಂಯುಕ್ತವಾಗಿ ಪಕ್ಷದ ಕೇಂದ್ರ ಸಮಿತಿಗೆ ಒಪ್ಪಿಸಬೇಕಾಗಿತ್ತು. ಆದರೆ ಸಂಯುಕ್ತವಾದ ವರದಿಗೆ ಬದಲಾಗಿ ನನ್ನನ್ನೂ ಸೇರಿದಂತೆ ವೈಯುಕ್ತಿಕ ವರದಿಗಳನ್ನು ಕೇಂದ್ರ ಸಮಿತಿಗೆ ಒಪ್ಪಿಸಿದೆವು.

ಪುಟ 7ಕ್ಕೆ



ಅಸಂಘಟಿತ ಕಾರ್ಮಿಕರ ಹೋರಾಟ ಏಕೆ?

-- ವಿ.ಜೆ.ಕೆ. ನಾಯರ್

2

ತಮ್ಮ ಜೀವನವನ್ನು ತಾವೇ ನಿರ್ಧರಿಸಿ ಸುತ್ತಲಿನ ಜಗತ್ತನ್ನು ತಮಗೆ ಅನುಕೂಲವಾಗುವಂತೆ ರೂಪಿಸಿಕೊಳ್ಳಲು ಅನುವು ಮಾಡಿಕೊಡುವ ಜನಸಾಮಾನ್ಯರ ಹೋರಾಟದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಹೋರಾಟ ಒಂದು ಪ್ರಮುಖ ಹೋರಾಟವಾಗಿ ಮೂಡಿ ಬರುತ್ತಿದೆ.

ನಮ್ಮ ರಾಜ್ಯದಲ್ಲಿ ಸಿಐಟಿಯು ಅಸಂಘಟಿತ ವಲಯದ ಕಾರ್ಮಿಕರ ಬೇಡಿಕೆಗಳನ್ನು ಸರಕಾರ ಒಪ್ಪಿಕೊಳ್ಳುವಂತೆ ಒತ್ತಾಯ ತರಲು ಒಂದು ದೊಡ್ಡ ಕಾರ್ಯಾಚರಣೆಗಿಳಿಯಲು ಉದ್ಯುಕ್ತವಾಗಿದೆ. ಈ ಹೋರಾಟ ಜಯಶಾಲಿಯಾಗುವವರೆಗೂ ಅದನ್ನು ನಡೆಸಲು ತಯಾರಿ ನಡೆಸುತ್ತಿದೆ.

ಈ ಹೋರಾಟಕ್ಕೆ ಸಂಬಂಧಪಟ್ಟಂತೆ ಅಗತ್ಯ ಮಾಹಿತಿಗಳನ್ನು ಒದಗಿಸುವ

ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್‌ರವರ ಲೇಖನದ ಮುಂದುವರಿದ ಭಾಗ.

ಕನಿಷ್ಠ ಕೂಲಿ ಏಕೆ? ಹೇಗೆ?

ಭಾರತದಲ್ಲಿ ಸಂಬಳ/ಕೂಲಿಯ ನಿರ್ಧಾರ ಸಂಘಟಿತ ವಲಯದಲ್ಲಿ ಸಾಮೂಹಿಕ ಚೌಕಾಶಿಯ ಮೂಲಕ ಆಗುತ್ತದೆ. ಕಾರ್ಯಾಚರಣೆ (ಮುಷ್ಕರ ಇತ್ಯಾದಿ)ಯ ಬಲದ ಮೇಲೆ, ಕಾರ್ಯಾಚರಣೆ ನಡೆಸುತ್ತೇವೆ ಎಂಬ ಬೆದರಿಕೆಯ ಬಲ ಮೇಲೆ ಮಾತುಕತೆಗಳು ನಡೆದು ಮತ್ತು ಯಾವುದೇ ಒತ್ತಡವಿಲ್ಲದೆ ಕಾರ್ಮಿಕ ಸಂಘಗಳು ಮತ್ತು ಮಾಲಕರು ಒಟ್ಟಿಗೆ ಮಾತುಕತೆ ನಡೆಸಿ ಇತ್ಯರ್ಥಕ್ಕೆ ಬರುವುದು ಸಂಬಳ ನಿರ್ಧರಿಸುವಲ್ಲಿ ಇತರೆಲ್ಲಾ ವಿಧಾನಕ್ಕಿಂತಲೂ ಅತ್ಯಂತ ಯಶಸ್ವಿಯಾದ ವಿಧಾನ. ಸುಮಾರಾಗಿ ಎಲ್ಲಾ ವೇತನ ಇತ್ಯರ್ಥಗಳನ್ನು ಸಂಧಾನ(Conciliation) ಮೂಲಕ ಮಾಡಿಕೊಂಡ ಇತ್ಯರ್ಥ ಎಂದು ನಮೂದಿಸಲಾಗುತ್ತದೆ. ಆದರೆ ಇದರಲ್ಲಿ ಸಂಧಾನ ನಡೆಸುವ ಅಧಿಕಾರಿಗಳ ನೈಜ ಪಾತ್ರ ಮಾತ್ರ ಬಹಳ ಕಮ್ಮಿ. ಇಲ್ಲದಿದ್ದರೆ ಇದು ಪ್ರಭುತ್ವದ (ಸರಕಾರದ) ಮಧ್ಯಪ್ರವೇಶದ ನೆರವಿನಿಂದ ನಡೆಯುವ ಸಾಮೂಹಿಕ ಚೌಕಾಸಿಯ ಒಂದು ಪ್ರಮುಖ ಅಂಶವಾಗುತ್ತಿತ್ತು. ಮೂರನೇ ವಿಧಾನ ಅಂದರೆ ನ್ಯಾಯ ನಿರ್ಣಯದ (adjudication) ಮೂಲಕ ಕೂಡಾ ಇತ್ಯರ್ಥಗಳು ನಡೆಯುತ್ತಿದ್ದವು. ಆದರೆ ಈ ದೇಶದಲ್ಲಿ ಕನಿಷ್ಠ ಕಳೆದ ಎರಡು ದಶಕಗಳಲ್ಲಿ ಇದರ ಶೋಚನೀಯ ಪರಿಸ್ಥಿತಿಯಿಂದಾಗಿ ಕಾರ್ಮಿಕ ಆಂದೋಲನಕ್ಕೆ (ಸದ್ಭಾವನೆ ಹೊಂದಿರುವ ಆಡಳಿತ ಮಂಡಳಿಗಳಿಗೆ ಕೂಡಾ) ಈ ವಿಧಾನದಲ್ಲಿ ವಿಶ್ವಾಸವುಳಿದಿಲ್ಲ. ಸಂಘಟಿತ ಕಾರ್ಮಿಕರು ಕೆಲವೊಂದು ಸಂದರ್ಭಗಳಲ್ಲಿ ವೇತನ ಮಂಡಳಿಗಳು ಅಥವಾ ಮಧ್ಯಸ್ಥಿಕೆ (arbitration) ಯ ವಿಧಾನಗಳನ್ನು ಅವಲಂಬಿಸುತ್ತಾರೆ. ವೇತನ ಮಂಡಳಿ ಸರ್ಕಾರದ ಮಧ್ಯಪ್ರವೇಶದಿಂದ ರಚನೆಗೊಂಡರೆ ಮಧ್ಯಸ್ಥಿಕೆ ಪರಸ್ಪರ ಒಪ್ಪಿಗೆಯಿಂದ ಆಗುತ್ತದೆ.

ಈ ಮೇಲಿನ ಒಪ್ಪಂದ/ತೀರ್ಪುಗಳಲ್ಲಿನ ಅತ್ಯಂತ ಕೆಳಮಟ್ಟದಲ್ಲಿನ ಕಾರ್ಮಿಕನ ವೇತನ ಶ್ರೇಣಿಯ (ಇದರಲ್ಲಿ ಮೂಲವೇತನ ಹಾಗೂ ನಿಗದಿತ ಅಥವಾ ಮತ್ತು ಹೆಚ್ಚು-ಕಡಿಮೆಯಾಗುವ ತುಟ್ಟಿ ಭತ್ಯೆ ಸೇರಿರುತ್ತದೆ) ಆರಂಭದಲ್ಲಿರುವ ಸಂಬಳವನ್ನು ಕನಿಷ್ಟ ಸಂಬಳ ಎಂದು ಹೇಳಲಾಗುತ್ತಿದೆ. ಅದನ್ನು 'ಒಪ್ಪಿದ ಕನಿಷ್ಟ ಸಂಬಳ' ಎಂದೂ ಹೇಳಲಾಗುತ್ತಿದೆ. ಏಕೆಂದರೆ ಇದು ಕನಿಷ್ಟ ಕೂಲಿ ಶಾಸನ, 1948 ರ ಅಡಿಯಲ್ಲಿ ನಿಗದಿಪಡಿಸಿದ ಅಥವಾ ನೋಟಿಫೈ ಮಾಡಿದ ಸಂಬಳ ಅಲ್ಲ. ಉದಾಹರಣೆಗೆ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಇಂಜಿನಿಯರಿಂಗ್ ಉದ್ದಿಮೆಯ ಘಟಕಗಳಲ್ಲಿ ತಮ್ಮದೇ ಆದ ವೇತನ ಒಪ್ಪಂದಗಳಿವೆ. ಈ ಒಪ್ಪಂದಗಳು ಸಂಬಂಧ ಪಟ್ಟ ಇತ್ಯರ್ಥದ ಅವಧಿಯಲ್ಲಿ ಸೇರುವ ನೌಕರರ ಕನಿಷ್ಟ ಕೂಲಿಯನ್ನು ನಿಗದಪಡಿಸುತ್ತವೆ. ಆದರೆ ಇಂಜಿನಿಯರಿಂಗ್ ಉದ್ದಿಮೆಗೆ ಅನ್ವಯವಾಗುವ ಕನಿಷ್ಟ ಕೂಲಿಯನ್ನು ನೋಟಿಫೈ ಕೂಡಾ ಮಾಡಲಾಗಿದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಘಟಕಗಳಲ್ಲಿ ಇದನ್ನು ಅನ್ವಯಿಸಲಾಗುತ್ತದೆ. ಹೀಗೆ 'ಒಪ್ಪಿದ ಕನಿಷ್ಟ ಕೂಲಿ' 'ನೋಟಿಫೈ ಆದ ಕೂಲಿ' ಇವೆರಡು ಭಿನ್ನವಾಗಿವೆ. ಒಪ್ಪಿದ ಕನಿಷ್ಟ ಕೂಲಿ ನೋಟಿಫೈ ಆದ ಕನಿಷ್ಟ ಕೂಲಿಗಿಂತ ಕಡಿಮೆಯಿರಲಾರದು ಎಂಬುದನ್ನು ಗಮನಿಬೇಕು.

ಸಾಮೂಹಿಕ ಚೌಕಾಸಿ ಮಾಡಲಾರದ, ತೀವ್ರ ಶೋಷಣೆಗೊಳಗಾಗಿರುವ ಅಸಂಘಟಿತ ಕಾರ್ಮಿಕರನ್ನು 'ಬೆವರು ದುಡಿಮೆಗಾರರು' (Sweated Labour) ಎನ್ನುತ್ತಾರೆ. ಅವರ ತೀವ್ರ ಶೋಷಣೆಯಾಗದಂತೆ ಪ್ರಭುತ್ವ (ಸರಕಾರ) ಅವರಿಗೆ ರಕ್ಷಣೆ ನೀಡಬೇಕು, ಅವರ ಯೋಗಕ್ಷೇಮ ನೋಡಿಕೊಳ್ಳಬೇಕು ಎಂದಿದೆ. ಇದನ್ನು ಸಾಧಿಸಲಿಕ್ಕಾಗಿ *1948* ರ ಕನಿಷ್ಟ ಕೂಲಿ ಶಾಸನ ರಚನೆಗೊಂಡಿತು. ಈ ಶಾಸನ ಶೆಡ್ಯೂಲಿನಲ್ಲಿ ನಮೂದಿಸಿದ ಯಾವುದೇ ದರ್ಜೆಯ ಉದ್ದಿಮೆಯಲ್ಲಿ ಕೂಡ ಬೇಕಾದ ಕನಿಷ್ಟ ಕೂಲಿಯನ್ನು ಸೂಕ್ತ ಸರ್ಕಾರ(ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ, ಬಹುಪಾಲು ಸಂದರ್ಭಗಳಲ್ಲಿ ರಾಜ್ಯ ಸರಕಾರಗಳು) ನೋಟಿಫೈ ಮಾಡಬಹುದು. ನೋಟಿಫೈ ಮಾಡುವ ಶೆಡ್ಯೂಲಿನಲ್ಲಿನ ಉದ್ದಿಮೆಗಳ ಪಟ್ಟಿಗೆ ಹೊಸ ಉದ್ದಿಮೆಗಳನ್ನು ಸೇರಿಸಬಹುದು. ಕೂಲಿ/ಸಂಬಳದ ಕನಿಷ್ಟ ದರಗಳ ಕರಡನ್ನು ಪ್ರಕಟಿಸಿ ಈ ಕರಡು ಪ್ರಸ್ತಾಪಗಳ ವಿರುದ್ಧ ಅಭಿಪ್ರಾಯ ಮಂಡಿಸಲು ಅವಕಾಶ ನೀಡಿ ಅಥವಾ ಸಲಹಾ ಸಮಿತಿಗಳೊಡನೆ ಸಮಾಲೋಚಿಸಿ ನಂತರ ಅಧಿಕೃತ ರಾಜಪತ್ರ (ಗೆಜೆಟ್)ದಲ್ಲಿ ಪ್ರಕಟಿಸುವ ಮೂಲಕ ಕನಿಷ್ಟ ಕೂಲಿದರಗಳನ್ನು ನಿಗದಿಪಡಿಸಲು ಸೂಕ್ತ ಸರ್ಕಾರಕ್ಕೆ ಈ ಶಾಸನ ಅಧಿಕಾರ ನೀಡುತ್ತದೆ. ಸರ್ಕಾರ ಕರಡು ಸೂಚನೆ ಜ್ಯಾರಿ ಮಾಡಿ, ಅವುಗಳ ಬಗ್ಗೆ ಅಡ್ಡಿ-ಆಕ್ಷೇಪಗಳನ್ನು ಪಡೆದ ನಂತರ ಅವನ್ನು ಸಾಮಾನ್ಯವಾಗಿ ಕನಿಷ್ಟ ಕೂಲಿ ಸಲಹಾ ಸಮಿತಿಗಳ ಮುಂದಿಡುತ್ತದೆ. ಈ ಸಮಿತಿಗಳಲ್ಲಿ ಆಡಳಿತ ಮಂಡಳಿ, ಕಾರ್ಮಿಕರು ಹಾಗೂ ಸ್ವತಂತ್ರ ಸದಸ್ಯರಿಗೆ ಸಮಾನ ಪ್ರಾತಿನಿಧ್ಯ ಇರುತ್ತದೆ. ಈ ಸಮಿತಿಗಳು ತಮ್ಮ ಶಿಫಾರಸು ನೀಡಿದ ಮೇಲೆ ಸರಕಾರ ಅದನ್ನು ಪರಿಶೀಲಿಸಿ ತನ್ನದೇ ನಿರ್ಧಾರಕ್ಕೆ ಬಂದು ಕನಿಷ್ಟ ಕೂಲಿಯನ್ನು ನಿಗದಿಪಡಿಸಿ ನೋಟಿಫಿಕೇಶನ್ ಜ್ಯಾರಿ ಮಾಡುತ್ತದೆ. ಈ ಕೂಲಿಗಿಂತ ಕಡಿಮೆ ಮಟ್ಟದ ಕೂಲಿಯನ್ನು ಮಾಲಕರು ಕೊಡುವಂತಿಲ್ಲ. ಹೆಚ್ಚು ಕೊಡಲು ಅಡ್ಡಿಯಿಲ್ಲ. ಆದ್ದರಿಂದಲೇ ಇದಕ್ಕೆ ಕನಿಷ್ಟ ಕೂಲಿ ಎಂಬ ಹೆಸರು ಬಂತು.

ಕನಿಷ್ಟ ಕೂಲಿಯ ನೋಟಿಫಿಕೇಷನ್‌ನಲ್ಲಿ ವಿವಿಧ ರೀತಿಯ ಕೆಲಸಗಳಿಗೆ ವಿವಿಧ ಪ್ರದೇಶಗಳಿಗೆ ವಿಭಿನ್ನ ಕೂಲಿದರಗಳು ಇರುತ್ತವೆ. ಕೂಲಿದರಗಳು ಕೂಲಿ ಮಾಡುವ ಅವಧಿಯನ್ನು ಅವಲಂಬಿಸಬಹುದು ಅಥವಾ ಕೆಲಸದ ಪ್ರಮಾಣವನ್ನು (ಪೀಸ್ ರೇಟ್) ಅವಲಂಬಿಸಿರಬಹುದು. ವಿವಿಧ ಪ್ರದೇಶಗಳನ್ನು ವಲಯಗಳಾಗಿ ವಿಂಗಡಿಸಿ ಈ ದರಗಳನ್ನು ಸೂಚಿಸಲಾಗುತ್ತದೆ. ನಗರ ಸಂಚಯಗಳು, ಮಹಾನಗರಪಾಲಿಕೆ /ನಗರಪಾಲಿಕೆ ಪ್ರದೇಶಗಳು, ಜಿಲ್ಲಾ ಮುಖ್ಯಸ್ಥಳಗಳು, ತಾಲೂಕು ಮುಖ್ಯಸ್ಥಳಗಳು ಇತ್ಯಾದಿ ಹಾಗೂ ಇತರೆ ಪ್ರದೇಶಗಳೆಂದು ವಲಯಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯವಾಗಿ ಯಾವುದೇ ನೋಟಿಫಿಕೇಶನ್‌ನಲ್ಲಿ ಮೂರು ವಲಯಗಳಿರುತ್ತವೆ. - (i) ಮಹಾನಗರಪಾಲಿಕೆ ಪ್ರದೇಶಗಳು(ii) ನಗರ ಸಭೆ (ಟೌನ್ ಮುನಿಸಿಪಲ್) ಪ್ರದೇಶಗಳು (iii) ರಾಜ್ಯದ ಇತರೆ ಪ್ರದೇಶಗಳು. ಪ್ರತಿಯೊಂದು ನೋಟಿಫಿಕೇಶನ್‌ನಲ್ಲಿ ಈ ವಲಯಗಳು ಬದಲಾಗಬಹುದು. ಆದರೆ ಎಲ್ಲದರಲ್ಲೂ ಬೆಂಗಳೂರು ವಲಯ 1 ರಲ್ಲಿ ಇರುತ್ತದೆ.

ಕನಿಷ್ಟ ಕೂಲಿಯನ್ನು ಸಮಯ-ಸಮಯಕ್ಕೆ ವಿಮರ್ಶಿಸಬೇಕು ಎಂದು ಕಾನೂನು ವಿಧಿಸುತ್ತದೆ. ಎರಡು ವರ್ಷಗಳಿಗೊಮ್ಮೆ

ಪುಟ 4ಕ್ಕೆ


ರಾಜಶ್ರೀ ಸೀಮೆಂಟ್ ಕಾರ್ಖಾನೆ ಕೆಲಸಗಾರರ ಮೇಲೆ ಗೋಲೀಬಾರ್

ನ್ಯಾಯಾಂಗ ತನಿಖೆಗೆ ಆಗ್ರಹ


ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಮಳಖೇಡದಲ್ಲಿರುವ ರಾಜಶ್ರೀ ಸೀಮೆಂಟ್ ಕಾರ್ಖಾನೆಯ ಕಾರ್ಮಿಕರ ಮೇಲೆ 5-11-93ರಂದು ಮಧ್ಯಾಹ್ನ ನಡೆದ ಪೋಲೀಸ್ ಗೋಲೀಬಾರ್‌ನ ಕುರಿತು ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಕರ್ನಾಟಕ ಸಿಐಟಿಯು ಉಪಾಧ್ಯಕ್ಷ ಎನ್.ಕೆ. ಉಪಾಧ್ಯಾಯ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿ, ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ಯೂನಿಯನ್ ಅಧ್ಯಕ್ಷ ಎ.ಬಿ.ದಾಸ್ ಅವರು ಜಂಟೀ ಪತ್ರಿಕಾ ಹೇಳಿಕೆಯೊಂದರಲ್ಲಿ ಒತ್ತಾಯಿಸಿದ್ದಾರೆ.

ಮೂವರು ಯೂನಿಯನ್ ಮುಖಂಡರನ್ನು(ಶಂಕರ ಮಂಗಾ, ಪ್ರಕಾಶ ದೊಡ್ಡಮನೆ, ಚೆನ್ನಾಯ ಸ್ವಾಮಿ) ನೌಕರಿಯಿಂದ ತೆಗೆದು ಹಾಕಿದ್ದನ್ನು ಪ್ರತಿಭಟಿಸಲು ಬಾಕಿ ಉಳಿದ ತುಟ್ಟಿಭತ್ತೆಯನ್ನು ಕೇಳಲು 'ಎ' ಶಿಫ್ಟ್‌ನ ಕಾರ್ಮಿಕರು ಕಾರ್ಖಾನೆಯ ಒಳಗಡೆ ಶಾಂತ ರೀತಿಯಿಂದ ಕುಳಿತಿದ್ದರು. ಅಧಿಕಾರಿಗಳು ಸ್ಟಾಫ್‌ನವರು ಕೆಲಸಕ್ಕೆ ಯಾಕೆ ಬಂದಿಲ್ಲವೆಂದು ಕೆಲಸಗಾರರನ್ನು ವಿಚಾರಿಸಿದಾಗ ಯಾವ ಉತ್ತರವೂ ಬರಲಿಲ್ಲ. ಮಧ್ಯಾಹ್ನ ಒಂದು ಗಂಟೆಗೆವರೆಗೆ ಶಾಂತ ರೀತಿಯಿಂದ ಕೆಲಸಗಾರರು ಧರಣಿ ನಡೆಸುತ್ತಿದ್ದರು.

ಮಧ್ಯಾಹ್ನ 'ಬಿ' ಶಿಫ್ಟ್‌ನ ಕೆಲಸಗಾರರು ಗೇಟಿನ ಹತ್ತಿರ ಬಂದಾಗ ಗೇಟ್ ಬಂದ್ ಮಾಡಿ ಪೋಲೀಸರು ಅವರನ್ನು ಒಳಗೆ ಬಿಡಲು ನಿರಾಕರಿಸಿದರು. ಆಗ ಆ ಕೆಲಸಗಾರರು ಒಳಗೆ ಹೋಗಲು ಒತ್ತಾಯ ಮಾಡಿದಾಗ ಪೋಲೀಸರು ಅವರ ಮೇಲೆ ಲಾಠಿ ಚಾರ್ಜ್ ಮಾಡಿ ಗೋಲೀಬಾರ್ ಮಾಡಿದರು. ಯೂನಿಯನ್ ಕಾರ್ಯದರ್ಶಿ ಕೃಷ್ಣಮೂರ್ತಿ, ಚಂದ್ರಾಮ ಕಾಂಬಳೆ ಹಾಗೂ ಲಲ್ಲೂ ಕಾಶೀನಾಥ ರಾಠೋಡ್‌ ತಲೆ ಮೇಲೆ ಬಲವಾದ ಪೆಟ್ಟು ಬಿದ್ದಿದೆ. ಪೋಲೀಸರು ತಮ್ಮ ಕೈಯಲ್ಲಿ ಇದ್ದ ಬಂದೂಕಿನಿಂದ ಅವರ ತಲೆಗೆ ಹೊಡೆದಿದ್ದಾರೆ. ಕಾಂಬಳೆಯವರಿಗೆ ಮೈ ತುಂಬ ಬಾಸುಂಡಿ



ಲಾಲು ಚಂದ್ರಕಾಂತ ರಾಠೋಡ- ತಲೆಗೆ ಮತ್ತು ಮೈತುಂಬ ಬಯೊನೆಟ್ಟಿನಿಂದ ಹೊಡೆತ.



ಚಾಂದ್‌ರಾಂ ಕಂಬ್ಳೆ- ತಲೆಗೆ ಬಹಳ ಏಟು ಬಿದ್ದಿದೆ.

ಬರುವಂತೆ ಹೊಡೆದಿದ್ದಾರೆ. ಡಿ.ವಿ.ಚಾರಿ ಎಂಬುವರ ಎಡಕಾಲಿಗೆ ಗೋಲೀಬಾರಿನಿಂದಾಗಿ ಗೋಲಿ ಅವರ ಕಾಲಿನ ಒಳಗಿಂದ ನುಗ್ಗಿ ಹೋಗಿದೆ. ಚಿಕ್ಕ ಹೆಣ್ಣು ಮಕ್ಕಳು ಹೆಂಗಸರನ್ನೊಳಗೊಂಡು ಹಲವಾರು ಜನರನ್ನು ಲಾಠಿಯ ಪೆಟ್ಟು ಬಿದ್ದಿದೆ.

ಬಿ ಶಿಫ್ಟ್‌ಗೆ ಬರುವವರನ್ನು ಒಳಗೆ ಬಿಟ್ಟಿದ್ದರೆ ಎ ಶಿಫ್ಟ್‌ನವರನ್ನು ಸೈರನ್ ಆದ ಕೂಡಲೇ ಊಟಕ್ಕೆ ಬಿಡುತ್ತಿದ್ದರೆ ಯಾವ ಗಲಾಟೆ ಕೂಡಾ ಆಗುತ್ತಿರಲಿಲ್ಲ. ಮಾಲಕರು ಮತ್ತು ಪೋಲೀಸ್ ಅಧಿಕಾರಿಗಳು ಸೇರಿ ಸಿಐಟಿಯು ಯೂನಿಯನ್ನನ್ನು ಮುರಿಯುವ ದುರುದ್ದೇಶದಿಂದ ಈ ಕುತಂತ್ರವನ್ನು ಹೂಡಿದ್ದಾರೆಂದು ಸಿಐಟಿಯು ಮುಖಂಡರು ಆರೋಪಿಸಿದ್ದಾರೆ.

ಮಾಲಕರು ಮತ್ತು ಮಾಲಕರ ಪರವಾದ ಐದು ಕಾರ್ಮಿಕ ಸಂಘಟನೆಗಳು ಕಳೆದ 6, 7 ವರ್ಷಗಳಿಂದಲೂ ಕಾರ್ಮಿಕರಿಗೆ ಮೋಸ ಮಾಡುತ್ತಾ ಬಂದಿದ್ದರು. ಇದೇ ವರ್ಷ ಜೂನ್ ತಿಂಗಳಲ್ಲಿ ಬೋನಸ್ ಸಲುವಾಗಿ ಜಂಟಿ ಸಭೆ ನಡೆದಾಗ ಕಾರ್ಮಿಕರು ಡೆಪ್ಯೂಟಿ ಕಮಿಷನರ್ ಮಾಲಕರ ಮಾತು ಕೇಳಿ ಸಿಐಟಿಯು ಯೂನಿಯನ್‌ನ ಮುಖಂಡರನ್ನು ಚರ್ಚೆಗೆ ಕರೆಯದೆ ಮಾಲಕರ ಪರವಾದ ಒಪ್ಪಂದಕ್ಕೆ ಸಹಿ ಮಾಡಿಸಿಕೊಂಡರು. ಇದರ ವಿರುದ್ಧ ಕಾರ್ಮಿಕರು ಒಂದು ದಿನದ ಮುಷ್ಕರ ಹೂಡಿ ಅರ್ಜಿಗಳ ಮೂಲಕ ಪ್ರತಿಭಟನೆ ಮಾಡುತ್ತಾ ಬಂದರು. ಹೋದ ತಿಂಗಳು ಸಿಐಟಿಯು ಯೂನಿಯನ್‌ನ ಆರು ಮುಖಂಡರನ್ನು ಸಸ್ಪೆಂಡ್ ಮಾಡಿ ಅವರಲ್ಲಿ ಮೂವರನ್ನು 4-11-93ರಂದು ಡಿಸ್‌ಮಿಸ್ ಮಾಡಿದರು. ಬಾಕಿ ಉಳಿದ ತುಟ್ಟಿಭತ್ತೆ ಕೊಡಲು ನಿರಾಕರಿಸಿದ್ದರು.

ಇದರ ಕುರಿತು ಸರಕಾರಕ್ಕೆ ತಿಳಿಸಲಾಗಿತ್ತು. ಕೈಗಾರಿಕಾ ಕಾನೂನಿನಂತೆ ರಿಜಿಸ್ಟರ್ ಆದ ಸಿಐಟಿಯು ಯೂನಿಯನ್ನನ್ನು ಚರ್ಚೆಗೆ ಕರೆಯಬೇಕೆಂಬುದೇ ಕಾರ್ಮಿಕರ ಒತ್ತಾಯ. ಮಾನ್ಯತೆಯ ಸಲುವಾಗಿ ಮತದಾನ ನಡೆಯಬೇಕೆಂಬುದೇ ಅವರ ಬೇಡಿಕೆ.

ಸಿಐಟಿಯು ಯೂನಿಯನ್ನನ್ನು ಚರ್ಚೆಗೆ ಕರೆಯಬೇಕು, ಸಸ್ಪೆಂಡ್ ಆರ್ಡರನ್ನು ಡಿಸ್‌ಮಿಸ್ ಆರ್ಡರನ್ನು ವಾಪಸ್ ಪಡೆಯಬೇಕು, ಬಾಕಿ ಉಳಿದ ಡಿಎ ಕೊಡಬೇಕು, ಮಾನ್ಯತೆಯ ಸಲುವಾಗಿ ಚುನಾವಣೆ ನಡೆಸಬೇಕು, ಗೋಲೀಬಾರಿನ ನ್ಯಾಯಾಂಗ ವಿಚಾರಣೆ ನಡೆಸಬೇಕು, ಗೋಲೀಬಾರಿಗೆ ಜವಾಬ್ದಾರರಾದ ಪೋಲೀಸ್ ಅಧಿಕಾರಿಗಳ ವಿರುದ್ಧ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕೆಲಸಗಾರರಿಂದ ಪ್ರತಿಭಟನೆ : ರಾಜಶ್ರೀ ಸೀಮೆಂಟ್ ಕಾರ್ಖಾನೆಯ ಕೆಲಸಗಾರರ ಮೇಲೆ ಆದ ಗೋಲೀಬಾರನ್ನು ಖಂಡಿಸಲು 6-11-93ರಂದು ಮುಳಖೇಡ, ಶಹಾಬಾದ, ಗುಲ್ಬರ್ಗಾದ ಸಾವಿರಾರು ಕೆಲಸಗಾರರು ಪೋಲೀಸರ ದೌರ್ಜನ್ಯ ಗೋಲೀಬಾರನ್ನು ಖಂಡಿಸುತ್ತಾ ಗುಲ್ಬರ್ಗಾ ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸಂಜೆ 6 ಗಂಟೆಯವರೆಗೆ ಮತ ಪ್ರದರ್ಶನ ನಡೆಸಿ ಗೋಲೀಬಾರಿನ ಕುರಿತು ನ್ಯಾಯಾಂಗ ವಿಚಾರ ನಡೆಸಬೇಕೆಂದು ಒತ್ತಾಯಿಸಿದರು. ಸಿಐಟಿಯು ಉಪಾಧ್ಯಕ್ಷ ಎನ್.ಕೆ. ಉಪಾಧ್ಯಾಯ, ಯೂನಿಯನ್ ಅಧ್ಯಕ್ಷ ಎ.ಬಿ. ದಾಸ್, ರೈತ ಮುಖಂಡ ಮಾರುತಿ ಮಾನ್ಪಡೆ ಭಾಷಣ ಮಾಡಿ ಮಾಲಕರ ಮತ್ತು ಸರಕಾರದ ನೀತಿಯನ್ನು ಖಂಡಿಸಿದರು.



ಜಿ. ಕೃಷ್ಣಮೂರ್ತಿ- ಪ್ರಧಾನ ಕಾರ್ಯದರ್ಶಿ- ತಲೆಗೆ ಬಯೊನೆಟ್ ಏಟಿನಿಂದ ದೊಡ್ಡ ತೂತು ಬಿದ್ದಿದೆ.



ಡಿ.ವಿ. ಚಾರಿ- ಇವರ ಎಡಮೊಣಕಾಲಿನಿಂದ ಗುಂಡು ಹಾದು ಹೋಗಿದೆ.

ಕಾರ್ಖಾನೆಯ ಸುತ್ತ ಪೋಲೀಸರು ದೌರ್ಜನ್ಯ ಮುಂದುವರಿಸಿದ್ದಾರೆಂಬ ಸುದ್ದಿ ಬಂದ ಕೂಡಲೇ ಕಾರ್ಮಿಕರು ಎಸ್.ಪಿ. ಆಫೀಸಿಗೆ ಹೋಗಿ ರಾತ್ರಿತನಕ ಧರಣಿ ನಡೆಸಿದರು. ಎಸ್‌ಪಿ ಮತ್ತು ಡಿಸಿಯವರು ಯೋಗ್ಯ ಕ್ರಮ ಕೈಗೊಳ್ಳುವ ಆಶ್ವಾಸನೆ ನೀಡಿದ ನಂತರ ಮತ ಪ್ರದರ್ಶನ ಮುಕ್ತಾಯಗೊಳಿಸಲಾಯಿತು.

7-11-93ರಂದು ರಾಜಶ್ರೀ ಕಾರ್ಖಾನೆಯ ಹತ್ತು ಸಾವಿರ ಕೆಲಸಗಾರರ ಪ್ರಚಂಡ ಸಭೆಯಲ್ಲಿ ಎನ್.ಕೆ.ಉಪಾಧ್ಯಾಯ, ಎ.ಬಿ. ದಾಸ್, ಮಾರುತಿ ಮಾನ್ಪಡೆ, [illegible] ಮೊದಲಾದವರು ಮಾತನಾಡಿ ಐಕ್ಯತೆಯಿಂದ ಹೋರಾಟ ಮುಂದುವರಿಸಬೇಕೆಂದು ಕರೆ ನೀಡಿದರು.

8-11-93ರಂದು ಸಿಐಟಿಯು ಅಧ್ಯಕ್ಷರಾದ ಎಸ್.ಸೂರ್ಯನಾರಾಯಣರಾವ್, ಎನ್.ಕೆ. ಉಪಾಧ್ಯಾಯ, ಮಾರುತಿ ಮಾನ್ಪಡೆಯವರು ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿ ಧರ್ಮಸಿಂಗ್, ಹಾಗೆಯೇ ಲೇಬರ್ ಕಮಿಷನರ್‌ರಿಗೆ ಭೇಟಿಯಾಗಿ ಕೆಲಸಗಾರರ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕೆಂದು ಕೇಳಿಕೊಂಡರು.

ಗೋಲೀಬಾರ್ ಆದರೂ ಕೂಡಾ 2500 ಕೆಲಸಗಾರರು ಧೈರ್ಯದಿಂದ ಹೋರಾಟ ಮುಂದುವರಿಸುವ ನಿರ್ಧಾರ ಕೈಗೊಂಡಿದ್ದಾರೆ.

ಅಸಂಘಟಿತ ಕಾರ್ಮಿಕರ ಹೋರಾಟ ಏಕೆ?

ಪುಟ 3ರಿಂದ

ಕನಿಷ್ಠ ಐದು ವರ್ಷಗಳಿಗೊಮ್ಮೆಯಾದರೂ ಈ ವಿಮರ್ಶೆ ನಡೆಯಬೇಕಾಗಿದೆ.

ಆದರೆ ಕನಿಷ್ಟ ಕೂಲಿಯ ಮಟ್ಟ ಏನಿರಬೇಕು ಎಂಬ ಬಗ್ಗೆ ಈ ಕಾನೂನು ನಿರ್ವಚಿಸಿಲ್ಲ, ತಿಳಿಸಿಲ್ಲ. ಉದಾಹರಣೆಗೆ, ಯಾವುದೇ ಉದ್ದಿಮೆಗೆ ಬದುಕಿನ ಮಟ್ಟದ ಕೂಲಿ ಕೊಡುವ ಅಸ್ತಿತ್ವವಲ್ಲಿರಲು ಸಾಧ್ಯವಿಲ್ಲ ಎಂದು ಹಲವು ಸುಪ್ರೀಂ ಕೋರ್ಟ್ ತೀರ್ಪುಗಳಿದ್ದರೂ, 1957 ರ 15 ನೇ ಐ.ಎಲ್.ಸಿ. ಶಿಫಾರಸು ಉಣಿಚೋಯ್ ಮತ್ತು ಕೇರಳ ಸರ್ಕಾರಗಳ ನಡುವಿನ ದಾವೆಯಲ್ಲಿ ಅಗತ್ಯ ಆಧಾರಿತ ಕನಿಷ್ಟ ಕೂಲಿಯ ನೀತಿ-ನಿಯಮಗಳನ್ನು ಸುಪ್ರೀಂ ಕೋರ್ಟ್ ಗಮನಿಸಿದ ನಂತರವೂ ಕನಿಷ್ಟ ಕೂಲಿ ಶಾಸನವನ್ನು ತಿದ್ದುಪಡಿ ಮಾಡಿ 15ನೇ ಐ.ಎಲ್.ಸಿ. ಶಿಫಾರಸಿನಂತೆ '*ಅಗತ್ಯ ಆಧಾರಿತ ಕನಿಷ್ಟ ಕೂಲಿ*'ಯೇ ಕನಿಷ್ಟ ಕೂಲಿಯಾಗಿರಬೇಕು ಎಂದು ವಿಧಿಸಿಲ್ಲ. ಇದರಿಂದಾಗಿ ಹಲವು ಸಂದರ್ಭಗಳಲ್ಲಿ ಕನಿಷ್ಟ ಕೂಲಿ ಪರಸ್ಪರ ಒಪ್ಪಿಕೊಂಡ ಅಥವಾ ಸಾಮಾನ್ಯವಾಗಿ ಕೊಡುವ ಕೂಲಿಗಿಂತಲೂ ಕಡಿಮೆಯಿರುತ್ತದೆ.

ವಿವಿಧ ಕಸುಬುಗಳು ಹಾಗೂ ನೋಟಿಫೈ ಮಾಡಿದ ಕನಿಷ್ಟ ಕೂಲಿ ದರಗಳ ಪಟ್ಟಿ ಕೋಷ್ಟಕ 1 ರಲ್ಲಿದೆ. ಇದರಲ್ಲಿ ಗಮನಿಸಬಹುದುದಾದ ಅಂಶವೆಂದರೆ, ಮೊದಲನೆಯದಾಗಿ, ಕೂಲಿಮಟ್ಟ ಬಹಳ ಕೆಳಗಿದೆ. ಬಡತನದ ರೇಖೆಗಿಂತಲೂ ಕಡಿಮೆಯಿದೆ. ಎರಡನೆಯದಾಗಿ ಸರಕಾರ ಸಮಯ-ಸಮಯಕ್ಕೆ ಕನಿಷ್ಟ ಕೂಲಿಗಳನ್ನು ಪರಿಷ್ಕರಿಸುವುದಿಲ್ಲ ನಿಜ ಸಂಗತಿಯೆಂದರೆ ಇತ್ತೀಚೆಗೆ ಕೆಲವು ಕಡೆ ಕೂಲಿದರಗಳನ್ನು ಪರಿಷ್ಕರಿಸಿ ಕಮ್ಮಿ ಮಾಡಲಾಗಿದೆ (ಉದಾ: ಗಾರ್ಮೆಂಟ್/ಟೈಲರಿಂಗ್)

ಕನಿಷ್ಟ ಕೂಲಿಯ ವಿವಿಧ ಮಟ್ಟಗಳು

ಇಲ್ಲಿ ನಿರ್ಣಾಯಕ ಪ್ರಶ್ನೆ ಎಂದರೆ *ಅಗತ್ಯ ಆಧಾರಿತ ಕನಿಷ್ಟ ಕೂಲಿ* ಯಾವುದು? 15 ನೇ ಐ.ಎಲ್.ಸಿ. ಶಿಫಾರಸು ಹಾಗೂ ಸುಪ್ರೀಂ ಕೋರ್ಟಿನ ವಿಭಿನ್ನ ತೀರ್ಪುಗಳನ್ನು ನೋಡಿದರೆ ಅದು ಕನಿಷ್ಟ ಬದುಕಿಗೆ ಬೇಕಾಗುದುವಕ್ಕಿಂತ ಹೆಚ್ಚು ಇರಬೇಕು ಎಂದು ಸೂಚಿಸುತ್ತವೆ. ಕಾರ್ಮಿಕ ಅಪೀಲು ನ್ಯಾಯ ಮಂಡಳಿ (ಲೇಬರ್ ಅಪೆಲ್ಲೇಟ್ ಟ್ರಿಬ್ಯೂನಲ್) 1952 ರಲ್ಲಿ "ಒಬ್ಬ ಕೈಗಾರಿಕಾ ಕಾರ್ಮಿಕನ ಕೂಲಿ **ಬದುಕುಳಿಯಲು ಬೇಕಾಗುವ ಸಾಧನಗಳನ್ನು ಪಡೆಯಲು ಅನುಕೂಲವಾಗುವಷ್ಟು ಮಾತ್ರವೇ ಅಲ್ಲ, ಒಬ್ಬ ಕಾರ್ಮಿಕನಾಗಿ ತನ್ನ ದಕ್ಷತೆಯನ್ನು ಕಾಪಾಡಿಕೊಳ್ಳಲು ಅಗತ್ಯವಾದಷ್ಟು** ಇರಬೇಕು ಹೀಗಾಗಬೇಕಾದರೆ ಒಬ್ಬ ಕಾರ್ಮಿಕ ಸ್ವಲ್ಪ ಪ್ರಮಾಣದ ಶಿಕ್ಷಣ, ವೈದ್ಯಕೀಯ, ಅಗತ್ಯಗಳು ಹಾಗೂ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವಂತಿರಬೇಕು. ಆತ ಕೆಲಸ ಮಾಡುವ ಉದ್ದಿಮೆ ಅಥವಾ ಮಾಲಕನಿಗೆ ಅಷ್ಟು ಕೊಡುವ ಸಾಮರ್ಥ್ಯವಿದೆಯೋ ಇಲ್ಲವೋ ಈ ಕನಿಷ್ಟ ಕೂಲಿಯಂತೂ ಆತ ಪಡೆಯಲೇಬೇಕಾಗುತ್ತದೆ" ಎಂದು ಸ್ಪಷ್ಟವಾಗಿ ಹೇಳಿತ್ತು.

ಈ ನಿರ್ಣಯವನ್ನೂ ನಂತರ ಬಕ್ಕಿಂಗಂ ಹಾಗೂ ಕರ್ನಾಟಿಕ್ ಕಂಪೆನಿ ಲಿಮಿಟೆಡ್‌ನಲ್ಲಿ ಮತ್ತು 1954ರಲ್ಲಿ ಮುಂಬೈನಲ್ಲಿ ಕಾರ್ಮಿಕ ನ್ಯಾಯ ಪಂಚಾಯ್ತಿ ಫಲ್ಟನ್ ಶುಗರ್ ವರ್ಕ್ಸ್-ಶಕ್ಕರ್‌ವಾಡಿ ಕಾಮಗಾರ್ ಯೂನಿಯನ್ ಕೇಸುಗಳಲ್ಲಿ ಅನುಸರಿಸಿತು. ಬಿ ಅಂಡ್ ಸಿ ಮಿಲ್ 3 ಯುನಿಟ್‌ಗಳ ಕುಟುಂಬದ ಲೆಕ್ಕಚಾರವನ್ನು ಅನುಸರಿಸಿತು. ಡಾ. ಅಕ್ರಾಯ್ಡ್‌ರ ಹೆಲ್ತ್ ಬುಲೆಟಿನ್ (1937)ನಂ. 23 ರಲ್ಲಿ 2600 ಕ್ಯಾಲೋರಿಗಳಷ್ಟು ಕನಿಷ್ಟ ಆಹಾರದ ಅಗತ್ಯವಿದೆಯೆಂದಿತ್ತು. ಆಧ್ರಂತಾಯ ವರದಿ (1938) 2800 ಕ್ಯಾಲರಿ ಬೇಕೆಂದು ಹೇಳಿ ತಿಂಗಳಿಗೆ 28 ರೂ. ನಿಗದಿ ಪಡಿಸಿತು. ಕಾರ್ಮಿಕ ನ್ಯಾಯ ಪಂಚಾಯ್ತಿ ನಂತರ ನೀಲಿಮಲೈ ಟೀ ಎಸ್ಟೇಟ್ ಕೇಸ್‌ನಲ್ಲೂ ಇದನ್ನು ಅನುಸರಿಸಿತು.

ನಂತರ ವಾರಂಗಲ್ ಮುನಿಸಿಪಲ್ ಕಾರ್ಮಿಕರ ಕೇಸಿನಲ್ಲಿ ರೇಗೆ ಸಮಿತಿ 1954 ರಲ್ಲಿ ತಿಂಗಳಿಗೆ ರೂ. 26 ಕೂಲಿಯಿರಬೇಕೆಂದು ಶಿಫಾರಸೂ ಮಾಡಿತು. ಕಾರ್ಮಿಕ ನ್ಯಾಯ ಪಂಚಾಯ್ತಿಗಳನ್ನು ರದ್ದುಮಾಡಿದ ನಂತರ ಸುಪ್ರೀಂ ಕೋರ್ಟ್ ತನ್ನ ನಿರ್ಣಯಗಳನ್ನು ಕೊಡಲಾರಂಭಿಸಿತು. ಉಣಿಚೋಯ್ ಹಾಗೂ ಕೇರಳ ಸರಕಾರದ ನಡುವಿನ ಕೇಸ್‌ನವರೆಗೆ ಸುಪ್ರೀಂ ಕೋರ್ಟ್ ನ್ಯಾಯ ಪಂಚಾಯ್ತಿ ಸೂತ್ರವನ್ನೇ ಅನುಸರಿಸಿತು. ಕೇರಳ ಸರಕಾರ 1957 ರ ಐ.ಎಲ್.ಸಿ. ಶಿಫಾರಸುಗಳನ್ನು ಅನುಸರಿಸಿತ್ತು. ಸುಪ್ರೀಂ ಕೋರ್ಟ್ ಅದನ್ನು ಎತ್ತಿ ಹಿಡಿಯಿತು. ಹೀಗೆ 15ನೇ ಐಎಲ್‌ಸಿಯ ಶಿಫಾರಸುಗಳು ಅದುವರೆಗಿನ ನ್ಯಾಯಾಂಗದ ತೀರ್ಪುಗಳಿಗೆ ತ್ರಿಪಕ್ಷೀಯ ಸಮಿತಿ ನೀಡಿದ ಮಾನ್ಯತೆಯಲ್ಲದೆ ಬೇರೇನೂ ಅಲ್ಲ ಎಂಬುದು ನಮಗೆ ಕಂಡು ಬರುತ್ತದೆ. ಈ ಎಲ್ಲಾ ಉದಾಹರಣೆಗಳಲ್ಲಿ ಕನಿಷ್ಟ ಕೂಲಿ ಲೆಕ್ಕಾಚಾರದ ಆಧಾರ ಮೂರು ಯುನಿಟ್‌ಗಳ ಒಂದು ಕುಟುಂಬ ಕನಿಷ್ಟವಾಗಿ ಬದುಕುಳಿಯಲು ಬೇಕಾದ ಸಾಧನ ಮಾತ್ರವೇ ಅಲ್ಲ ಕಾರ್ಮಿಕನಾಗಿ ದುಡಿಮೆಗಾರನ ದಕ್ಷತೆಯನ್ನು ಕಾದುಕೊಳ್ಳುವ ಸಾಧನವೂ ಕೂಡಾ. ಅಂದರೆ ವೈದ್ಯಕೀಯ ಅಗತ್ಯ ಹಾಗೂ ಸ್ವಲ್ಪ ಮಟ್ಟಿನ ಶಿಕ್ಷಣ ಇತ್ಯಾದಿ. ಇದನ್ನು ಬದುಕಿನ ಮಟ್ಟಕ್ಕಿಂತ ಸ್ವಲ್ಪ ಹೆಚ್ಚಿನ ಮಟ್ಟ ಎಂದು ನಾವು ಕರೆಯಬಹುದು.

ಕೂಲಿ ನಿಗದಿ ಪಡಿಸುವ ಅಧಿಕಾರಿಗಳು ಹೆಚ್ಚು ಕಮ್ಮಿ ಈ ಎಲ್ಲಾ ನ್ಯಾಯಾಂಗದ ತೀರ್ಪುಗಳನ್ನು, 15ನೇ ಐ.ಎಲ್.ಸಿ. ಶಿಫಾರಸನ್ನು ಉಪೇಕ್ಷಿಸಿದ್ದಾರೆ. 1958-59 ರಲ್ಲಿ ಕೇರಳ ಸರ್ಕಾರ ಮಾತ್ರವೇ ಆ ರಾಜ್ಯದ ಹೆಂಚು ಕಾರ್ಮಿಕರ ಕೂಲಿ ನಿಗದಿ ಪಡಿಸುವಲ್ಲಿ ಈ ಸೂತ್ರವನ್ನು ಅನುಸರಿಸಿದೆ. ಇದುವರೆಗೆ ನೋಟಿಫೈ ಮಾಡಿದ ಕನಿಷ್ಟ ಕೂಲಿ ಅಗತ್ಯ ಆಧಾರಿತ ಕನಿಷ್ಟ ಕೂಲಿಯ ಮಟ್ಟಕ್ಕಿಂತ ಬಹಳ ಕಮ್ಮಿಯಿದೆ. ಅಂದರೆ ಕೂಲಿ ನಿಗದಿಮಾಡುವ ಅಧಿಕಾರಿಗಳಿಗೆ ಅಗತ್ಯ ಆಧಾರಿತ ಕನಿಷ್ಟ ಕೂಲಿ ಏನು ಎಂಬುದನ್ನು ಪರಿಶೀಲಿಸುವುದೂ ಅಸಂಭವವಾಗಿಬಿಡುತ್ತದೆ.

ಆದ್ದರಿಂದಲೇ ಕನಿಷ್ಟಕೂಲಿ ಶಾಸನದಡಿ ಕೂಲಿ ನಿಗದಿಪಡಿಸುವ ಅಧಿಕಾರಿಗಳು ಬೇರೊಂದು ಸಿದ್ಧಾಂತವನ್ನು ಹುಡುಕಲಾರಂಭಿಸಿದರು. ಕರ್ನಾಟಕದಲ್ಲಿ ಹೀಗೆ ಅವರು ಕಂಡುಕೊಂಡ ಹೊಸ ಪರಿಕಲ್ಪನೆಯೆಂದರೆ ಕನಿಷ್ಟ ಕೂಲಿ ಬಡತನದ ರೇಖೆಗಿಂತ ಕಡಿಮೆಯಿರಬಾರದು ಎಂದು. ಇದನ್ನು ಅನುಸರಿಸಬೇಕೇ ಅಥವಾ ತಿರಸ್ಕರಿಸಬೇಕೇ ಎಂದು ನಿರ್ಧರಿಸುವ ಮೊದಲು ಇವನ್ನು ಸ್ವಲ್ಪ ವಿವರವಾಗಿ ಪರಿಶೀಲಿಸಬೇಕು.

ಬಡತನ ಮಟ್ಟದ ಕೂಲಿ

ಕರ್ನಾಟಕದಲ್ಲಿ ಈ ಪರಿಕಲ್ಪನೆಯನ್ನು ಪ್ರತಿಪಾದಿಸಿದವರಲ್ಲಿ ಡಾ. ಡಿ.ಎಂ. ನಂಜುಂಡಪ್ಪ ಒಬ್ಬರು. ಅವರ ಉದ್ದೇಶ ಕೂಲಿಯ ಮಟ್ಟವನ್ನು ಕನಿಷ್ಟ ಬಡತನದ ಮಟ್ಟವವರೆಗಾದರೂ ಮೇಲೆಳೆಯುವುದು. ನಂತರ ಕನಿಷ್ಟ ಕೂಲಿ ಸಲಹಾ ಸಮಿತಿಗೆ ಇದರಲ್ಲಿ ಆಸಕ್ತಿ ಉಂಟಾಯಿತು. ಈಗ ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕರಾಗಿರುವ ಡಾ. ಶಾಂತಪ್ಪನವರ ನೆರವಿನಿಂದ ಬಡತನ ಮಟ್ಟ ಏನು, ಕೂಲಿ ಎಷ್ಟು ಎಂದು ಲೆಕ್ಕ ಹಾಕಲಾಯಿತು. 1990 ರಲ್ಲಿ ಕನಿಷ್ಟ ಕೂಲಿ ಸಲಹಾ ಸಮಿತಿ ಅವರ ಶಿಫಾರಸುಗಳನ್ನು ಅಂಗೀಕರಿಸಿತು. ಇವರ ಪ್ರಕಾರ ಮೂರು ಜನರ ಒಂದು ಕುಟುಂಬಕ್ಕೆ ಬಡತನ ಮಟ್ಟ ಹಾಗೂ ಕೂಲಿ ತಿಂಗಳಿಗೆ 611 ರೂ. ಅಥವಾ ದಿನಕ್ಕೆ ರೂ. 23.50. ಈ ಶಿಫಾರಸನ್ನು ಒಪ್ಪಿದ ಸಮಿತಿ 908 ಬೆಲೆ ಸೂಚ್ಯಂಕ (ಇದು 1989 ರಲ್ಲಿ ರಾಜ್ಯದ ಸರಾಸರಿ ಸೂಚ್ಯಂಕ) ದಲ್ಲಿ ಇದು ಕನಿಷ್ಟ ಕೂಲಿ ಎಂದು ಶಿಫಾರಸು ಮಾಡಿತು. ಬೀಡಿ ಮತ್ತು ಪ್ಲಾಂಟೇಶನ್‌ಗಳಲ್ಲಿ ನಿಗದಿಯಾಗಬೇಕೆಂದೂ ಮೂಲ ಕೂಲಿ ದಿನಕ್ಕೆ 25 ರೂ. ಗಳಿಗಿಂತ ಕಮ್ಮಿಯಿದ್ದಲ್ಲಿ ಪ್ರತಿ ಪಾಯಿಂಟಿಗೆ 3.5 ಪೈಸೆ 25 ರೂ. ಕ್ಕಿಂತ ಹೆಚ್ಚಿದ್ದಲ್ಲಿ ನಾಲ್ಕು ಪೈಸೆ, ಮೂಲ ದಿನಗೂಲಿ 30 ರೂ. ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ 5 ಪೈಸೆ ದರದಲ್ಲಿ ತುಟ್ಟಿಭತ್ಯೆ ಹೆಚ್ಚಳ (ವಿ.ಡಿ.ಎ.) ವನ್ನೂ ಶಿಫಾರಸುಮಾಡಿತು. ನಂತರ 1992ರಲ್ಲಿ ಈ ಸೂತ್ರವನ್ನು ಸರಕಾರ ಸಿನೇಮಾ ಕಾರ್ಮಿಕರಿಗೆ ಸರಿಯಾದ ರೀತಿಯಲ್ಲಿ ಅನ್ವಯಿಸಿತು. ಈ ನೋಟಿಫಿಕೇಶನ್ ಪ್ರಕಾರ ಈಗ ವಲಯ 1 ರಲ್ಲಿ ಸಿನಿಮಾ ಕಾರ್ಮಿಕರು ತಿಂಗಳಿಗೆ ರೂ. 1219.85 ಅಥವಾ ದಿನಕ್ಕೆ ರೂ. 46.64 ಪಡೆಯುತ್ತಾರೆ. ವಲಯ 3 ರಲ್ಲಿ ಇದು ತಿಂಗಳಿಗೆ 1020.85 ಅಥವಾ ದಿನಕ್ಕೆ ರೂ. 38.26. ಆದರೆ ಬೀಡಿ ಹಾಗೂ ಪ್ಲಾಂಟೇಶನ್ ಕಾರ್ಮಿಕರಿಗೆ ಸಮಿತಿಯ ಶಿಫಾರಸನ್ನು ಸರಕಾರ ಒಪ್ಪಿಕೊಳ್ಳಲಿಲ್ಲ. ಅವರಿಗೆ 976 ಪಾಯಿಂಟಿನಲ್ಲಿ ಅನುಕ್ರಮವಾಗಿ ರೂ. 19.65 ಹಾಗೂ ರೂ. 19.00 ದಿನಗೂಲಿ ಹಾಗೂ ತುಟ್ಟಿಭತ್ಯೆ ಹೆಚ್ಚಳ ಪಾಯಿಂಟಿಗೆ 2 ಪೈಸೆ ಹೆಚ್ಚಳದಂತೆ ನಿಗದಿ ಪಡಿಸಲಾಯಿತು. ಈಗ ಅವರಿಗೆ ದಿನಗೂಲಿ ಅನುಕ್ರಮವಾಗಿ ರೂ. 26.31 ಮತ್ತು ರೂ. 25.66.

1993 ರಲ್ಲೂ ಸಲಹಾ ಸಮಿತಿಯಲ್ಲಿ ಕನಿಷ್ಟ ಕೂಲಿ ಕುರಿತು ಚರ್ಚೆಗಳಲ್ಲಿ ಈ ಬಡತನ ಮಟ್ಟದಲ್ಲಿ ಕನಿಷ್ಟ ಕೂಲಿ 1309 ಪಾಯಿಂಟುಗಳಲ್ಲಿ ದಿನಕ್ಕೆ 37.55 ರೂ. ಆಗುತ್ತದೆ ಎಂದು ವ್ಯಾಖ್ಯಾನಿಸಲಾಯಿತು. ಹಲವು ಉದ್ದಿಮೆಗಳಿಗೆ ಇದನ್ನೇ ಕನಿಷ್ಟ ಕೂಲಿ ಎಂದು ಸರಕಾರಕ್ಕೆ ಶಿಫಾರಸು ಮಾಡಲಾಯಿತು. ಆದರೆ ಸರ...ಸುಗಳನ್ನು ಅವಲಂಬಿಸಿಲ್ಲ. ಇದಕ್ಕಿಂತ ಬಹಳ ಕೆಳಗಿನ ಮಟ್ಟದಲ್ಲಿ ಕೂಲಿಯನ್ನು ನಿಗದಿ ಪಡಿಸಿ ನೋಟಿಫೈ ಮಾಡುತ್ತಲೇ ಇದೆ. 908 ಪಾಯಿಂಟುಗಳಲ್ಲಿ 23.50 ರೂ. ಹಾಗೂ ಸದ್ಯ 1309 ಪಾಯಿಂಟುಗಳಲ್ಲಿ 37.55 ರೂ. ಕನಿಷ್ಟ ಕೂಲಿ ಎಂದು ಶಿಫಾರಸು ಮಾಡಿದರೂ ಸರಕಾರ ಇನ್ನೂ ಅದನ್ನು ಅನುಸರಿಸುತ್ತಿಲ್ಲ. ಈ ಶಿಫಾರಸು ಕೂಡಾ ಸಿನೇಮಾ ಉದ್ದಿಮೆಯಲ್ಲಿ ಮೂಲತಃ ಅನುಸರಿಸಿದ ಕನಿಷ್ಟ ಕೂಲಿಗಿಂತ ಕಮ್ಮಿ ಅಗತ್ಯ ಆಧಾರಿತ ಕನಿಷ್ಟ ಕೂಲಿಯ ಪರಿಕಲ್ಪನೆಯಿರಲಿ ಅಥವಾ ಬಡತನಮಟ್ಟದ ಕೂಲಿಯ ಪರಿಕಲ್ಪನೆಯಿರಲಿ ಸರಕಾರ ಎಂದೂ ಅದನ್ನು ಪಾಲಿಸುವುದಿಲ್ಲ. ಅದಕ್ಕಿಂತ ಕಮ್ಮಿ ಕೂಲಿಯನ್ನೇ ನಿರ್ಧರಿಸುತ್ತದೆ.

ಹೀಗೆ 1930 ರ ದಶಕದಲ್ಲಿ ತಂದ **ಜೀವನ ವೇತನ, ಕನಿಷ್ಟ ಕೂಲಿ ಎಂಬ ಪರಿಕಲ್ಪನೆಗಿಂತ ಕೆಳಮಟ್ಟದ 'ನ್ಯಾಯ ವೇತನ' ಮಸೂದೆ** *1948ರಲ್ಲಿ* ನ್ಯಾಯ ವೇತನ ಮಸೂದೆಯನ್ನು ತಂದು ಅನಂತರ ಅದನ್ನು

ಕೋಷ್ಟಕ-1

ಕರ್ನಾಟಕದಲ್ಲಿ ಪಟ್ಟಿ ಮಾಡಿದ ಕೆಲಸ ಹಾಗೂ ನೋಟಿಫೈ ಮಾಡಿದ ಕನಿಷ್ಟ ಕೂಲಿಗಳು

ನೋಟಿಫಿಕೇಷನ್ ವರ್ಷ	ಕೆಲಸ/ ಉದ್ದಿಮೆ	ಎಪ್ರಿಲ್93 ರಿಂದರಿಂದ ಮಾರ್ಚ್ 94ವರೆಗೆ ಕೊಡಬೇಕಾದ ತಿಂಗಳಕೂಲಿ ವಲಯ 3	ವಲಯ 2	ವಲಯ1
1967	ರೇಷ್ಮೆಬಟ್ಟೆ	55.30	55.90	58.50
1968	ಸ್ಥಳೀಯ ಸಂಸ್ಥೆ	-	-	62.10
1984	ಕೃಷಿ	312.00	344.50	377.00
"	ಚರ್ಮ ಉದ್ಯೋಗ	-	-	348.4
"	ಮೂರ್ತೆದಾರಿಕೆ	344.25	366.25	386.25
"	ಮರಗೆಲಸ ಮತ್ತು ಸಾಮಿಲ್	348.25	366.25	387.25
"	ಏಲಕ್ಕಿ ಎಸ್ಟೇಟ್‌ಗಳು	-	-	611.78
"	ಪಿಂಗಾಣಿ ವಸ್ತುಗಳು	-	-	683.28
"	ಅಗರ್‌ಬತ್ತಿ	-	-	683.28
"	ಕಟ್ಟಡ ಕೆಲಸ	-	-	733.72
"	ಪ್ರಿಂಟಿಂಗ್ ಪ್ರೆಸ್	750.40	768.90	788.40
"	ಹತ್ತಿ ಜಿನ್ನಿಂಗ್	-	-	810.42
"	ಪ್ಲೈವುಡ್	-	-	818.22
"	ಅಕ್ಕಿ ಗೋಧಿ, ಬೇಳೆ ಮಿಲ್ಲುಗಳು	-	-	896.28
"	ರೇಷ್ಮೆಕೃಷಿ-ಗದ್ದೆಗಳಲ್ಲಿ	615.66	733.88	759.78
"	-ಪಾಲನೆ	799.98	824.90	850.98
"	-ಮಾರುಕಟ್ಟೆ	924.90	850.98	969.02
1986	ಕಾಫಿ ಕ್ಯೂರಿಂಗ್	-	-	683.28
"	ಹೋಟೆಲ್‌ಗಳು	750.40	768.40	788.40
1987	ಹೆಂಚು	-	-	863.72
"	ಖಂಡಸಾರಿ	-	-	886.75
"	ಅಂಗಡಿ, ವಾಣಿಜ್ಯ ಸಂಸ್ಥೆಗಳು	833.50	871.50	886.75
"	ಆಟೋಮೊಬೈಲ್ ವರ್ಕ್‌ಶಾಪ್‌ಗಳು	-	856.75	891.75
"	ಇಂಜಿನಿಯರಿಂಗ್	772.98	811.98	927.92
"	ಕ್ಲಬ್‌ಗಳು	-	-	1114.10
"	ಎಣ್ಣೆ ಮಿಲ್ಲುಗಳು	-	865.28	956.54
"	ಬೇಕರಿ	944.25	1093.10	1143.10
"	ಸಿಹಿತಿಂಡಿ ತಯಾರಿಕೆ	944.25	1093.10	1143.10
"	ಆಸ್ಪತ್ರೆ, ನರ್ಸಿಂಗ್ ಹೋಂ		1048.10	1088.10
1991	ತೋಟಗಳು	-	-	667.16
"	ಬೀಡಿ	-	-	684.06
"	ಗೇರುಬೀಜ	-	-	775.32
"	ಲಾಂಡ್ರಿ	-	-	836.75
"	ಪೆಟ್ರೋಲ್ ಪಂಪ್	-	-	866.75
"	ಫೌಂಡ್ರಿ	-	-	891.75
1992	ಕಲ್ಲುಕುಟ್ಟುವ ಕೆಲಸ	-	-	850.65
"	ಮೋಟಾರ್ ಸಾರಿಗೆ	-	-	984.25
"	ಸಿನೇಮಾ-ಪ್ರದರ್ಶನ	-	-	1219.85
"	-ವಿತರಣೆ	-	1210	1225.85
"	-ಸ್ಟುಡಿಯೋ	-	-	1225.85
1993	ಟೈಲರಿಂಗ್ 734.50	765.96	791.96	843.96

ಟಿಪ್ಪಣಿ : (ಇದು ನಿಪುಣರಲ್ಲದ ಕಾರ್ಮಿಕರ ಕೂಲಿ ಮಾತ್ರ) (i) ಪೀಸ್ ರೇಟ್ ನೋಟಿಫೈ ಮಾಡಿದಲ್ಲಿ (ಉದಾ: ಗೇರು ಬೀಜ, ಕಾಫಿ ಕ್ಯೂರಿಂಗ್, ಅಗರಬತ್ತಿ) ಕನಿಷ್ಟ ಟೈಂ ರೇಟ್ಸ್ ದಿನ ಕೂಲಿ ದರವನ್ನು 26ರಿಂದ ಗುಣಿಸಲಾಗಿದೆ. ಬೀಡಿ ಸುತ್ತುವವರಿಗೆ ಕೂಲಿ 10000 ಬಿಡಿಯ ಕೂಲಿ 26.

(ii) 'ವಲಯ'ದ ನಿರ್ವಚನೆ ವಿವಿಧ ನೋಟಿಫಿಕೇಶ್‌ನಲ್ಲಿ ಬೇರೆ ಬೇರೆಯಾಗಿವೆ.

(iii) ವಲಯ 1ರ ಕೂಲಿ ಮಾತ್ರ ನಮೂದಿಸಿದಲ್ಲಿ ಯಾವುದೇ ವಲಯದ ಸೂಚನೆ ನೋಟಿಫಿಕೇಶನ್‌ನಲ್ಲಿ ಇಲ್ಲ ಎಂಬ ಅರ್ಥ.

(iv) ಕೃಷಿ ಹಾಗೂ ರೇಷ್ಮೆಕೃಷಿಗೆ ವಲಯ ಎಂದರೆ ಒಣ ಭೂಮಿ, ಹಸಿ ಭೂಮಿ ಹಾಗೂ ತೋಟ ಭೂಮಿ.

(v) ರೇಷ್ಮೆಬಟ್ಟೆ, ಸ್ಥಳೀಯ ಸಂಸ್ಥೆ ಹಾಗೂ ಅಗರ ಬತ್ತಿಗೆ ತುಟ್ಟಿ ಭತ್ಯೆ ನೋಟಿಫೈ ಮಾಡಿಲ್ಲ.

ಕೋಷ್ಟಕ - 2

ಸಾಧಾರಣ ಕೆಲಸ ಮಾಡುವ ವ್ಯಕ್ತಿಗೆ ಬೇಕಾಗುವ ಆಹಾರ

	ಸಸ್ಯಾಹಾರಿ (ಗ್ರಾಂ.)	ಮಾಂಸಹಾರಿ (ಗ್ರಾಂ.)
ಆಹಾರಧಾನ್ಯಗಳು	475	475
ದ್ವಿದಳ ಧಾನ್ಯ	80	65
ಹಸಿರು ಕಾಯಿಪಲ್ಲೆ	125	125
ಇತರ ತರಕಾರಿ	75	75
ಗೆಡ್ಡೆ ತರಕಾರಿ	100	100
ಹಣ್ಣುಗಳು	30	30
ಹಾಲು	200	100
ಎಣ್ಣೆ-ಕೊಬ್ಬು	40	40
ಮಾಂಸ-ಮೀನು	-	30
ಮೊಟ್ಟೆ	-	30
ಸಕ್ಕರೆ-ಬೆಲ್ಲ	40	40

ಕೃಪೆ: ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ರಾಷ್ಟ್ರೀಯ ಪೋಷಕಾಂಶ ಸಂಸ್ಥೆ ಪ್ರಕಟಿಸಿದ "Nutritive Value of Indian Foods" ಪುಟ 29.

ಕೋಷ್ಟ...

ಕರ್ನಾಟಕ ಸರಕಾರದ ...
ಕನಿಷ್ಟ ಕೂಲಿ ಸಲಹಾ ಮಂ...
ಅಗತ್ಯ ಆಧಾರಿತ ...
(15ನೇ ಐ.ಎಲ್.ಸಿ. ನಿ...

	ಐಟಂಗಳು	ಪ್ರಮಾಣ (ಗ್ರಾಂ.)
1.	ಧಾನ್ಯಗಳು ಅಕ್ಕಿ ಗೋಧಿ ರಾಗಿ	392
2.	ಬೇಳೆಗಳು	84
3.	ತರಕಾರಿಗಳು ಆಲೂಗೆಡ್ಡೆ ಬದನೆ ಹುರಳಿಕಾಯಿ ಮೂಲಂಗಿ	280
4.	ಹಾಲು	280
5.	ಸಕ್ಕರೆ	56
6.	ಎಣ್ಣೆ-ತುಪ್ಪ	56
7.	ಹಣ್ಣುಗಳು	56
8.	ಮೀನು-ಮಾಂಸ	84
9.	ಮೊಟ್ಟೆ	28

1.	ಮೂರು ಯುನಿಟ್... ತಿಂಗಳಿಗೆ ಆಹಾರ ಖರ್ಚು...
2.	ತಿಂಗಳಿಗೆ ಬಟ್ಟೆಯ ಖರ್ಚು...
3.	ಬಾಡಿಗೆ 10%
4.	ಇತರ ಖರ್ಚು- 20%
5.	ಒಟ್ಟು ದಿನಕ್ಕೆ

ಅಗತ್ಯ ಆಧಾರಿ...

ಗಿ ಹೋಗಲು ಬಿಟ್ಟು ಮತ್ತೊಮ್ಮೆ 1950 ರಲ್ಲಿ ಸಿ.ವಿ ವಲ್ಲಿ 'ಜೀವನ ವೇತನ'ದ ಪರಿಕಲ್ಪನೆಯನ್ನು ಸೇರಿಸಲಾ ು. ಆದರೆ ಮತ್ತೆ 1957 ರ ಐ.ಎಲ್.ಸಿ. ಶಿಫಾರ ಮೂಲಕ ಇನ್ನೂ ಕಡಿಮೆ ಮಟ್ಟದ ಅಗತ್ಯ ಆಧಾರಿತ ಕೂಲಿಯ ಪರಿಕಲ್ಪನೆ ಬಂತು. ಇದರಿಂದ ಕೂಡಾ ರ್ಮಿಕರು ನಿರಂತರವಾಗಿ ವಂಚಿತರಾಗುತ್ತಲೇ ಇದ್ದಾರೆ. ಹಿನ್ನೆಲೆಯಲ್ಲಿ ಬಡತನ ಮಟ್ಟದ ಕೂಲಿಯ ಸಿದ್ಧಾಂತ ಪ್ರತಿ ಸುತ್ತಿರುವುದನ್ನು ಹಾಗೂ ಅದನ್ನು ಪಾಲಿಸುವಲ್ಲಿಯೂ ಹರಿಯುತ್ತಿರುವುದನ್ನು ಕಾಣಬೇಕು. ಅದನ್ನು ಪರಿಶೀಲಿ ಕು.

ಲವು ಕಾರ್ಮಿಕ ಸಂಘಗಳ ಮುಖಂಡರೂ ಈ ತನದ ಮಟ್ಟದ' ಸಿದ್ಧಾಂತವನ್ನು ಅವಲಂಬಿಸಿರು ಅಧಿಕಾರ ಶಾಹಿಯ ಮೂಲಕ, ಅವರ ರಾಜಕೀಯ ಟಿರ ಮೂಲಕ ಕೆಲಸ ಮಾಡುತ್ತಿರುವ ಬಂಡವಾಳಶಾ ಬಲೆಗೆ ಬಿದ್ದಂತೆ ಎಂಬುದನ್ನು ನಾವು ಅರಿಯಬೇಕು. ಹ ಕುತಂತ್ರವನ್ನು ಬಹಿರಂಗವಾಗಿ ಬಯಲಿಗೆಳೆದು, ವಿರುದ್ಧ ಪ್ರಚಾರ ನಡೆಸಿ ಹಾಗೂ ಕಾರ್ಯಾಚರಣೆ ುದೆ ನಾವು ಎದುರಿಸಲು ಸಾಧ್ಯವಿಲ್ಲ. ಕನಿಷ್ಟ ಕೂಲಿ ಾ ಸಮಿತಿ ಶಿಫಾರಸು ಮಾಡಿದ 'ಬಡತನ ಮಟ್ಟದ ಿಯನ್ನು ನಿಗದಿಪಡಿಸಲು ಕೂಡಾ ಹಿಂಜರಿಯುತ್ತಿ ನಾವು 'ಅಗತ್ಯ ಆಧಾರಿತ ಕನಿಷ್ಟ ಕೂಲಿ' ಯ ಪರಿ ಗೇ ದೃಢವಾಗಿ ಅಂಟಿಕೊಂಡಿದ್ದರೆ ಮಾತ್ರವೇ ಅವರ ತ್ರವನ್ನು ಎದುರಿಸಲು ಸಾಧ್ಯ

'ಬಡತನ ಮಟ್ಟ'ದಲ್ಲಿ ಅಗತ್ಯದ ಆಧಾರ

ಬಡತನದ ಮಟ್ಟ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿ ೊಬ್ಬರಿಗೆ ಪ್ರತಿದಿನ 2400 ಕ್ಯಾಲರಿ, ನಗರ ಪ್ರದೇಶ 2,100 ಕ್ಯಾಲರಿಗಳಷ್ಟು ಆಹಾರಕ್ಕೆ ಆಗುವ ಖರ್ಚು ನಿರ್ವಚಿಸಲಾಗಿದೆ. ಅಂದರೆ ಸರ್ಕಾರದ ಅಂದಾ ಪ್ರಕಾರ ಈ ಖರ್ಚು 1991-92 ಗ್ರಾಮೀಣ ಪ್ರದೇಶ ತಿಂಗಳಿಗೆ ತಲಾ ರೂ. 181.50 ನಗರ ಪ್ರದೇಶಗಳಲ್ಲಿ ಆಧಾರ: **Statistical Outline of** **a 1992-93,** ಟಾಟಾ ಸರ್ವಿಸಸ್ ಲಿಮಿಟೆಡ್)

'ಬಡತನ ಮಟ್ಟ'ದಲ್ಲಿ ಹಾಗೂ 'ಬದುಕಿರುವ 'ದಲ್ಲಿ ಎಷ್ಟು ಕ್ಯಾಲರಿ ಆಹಾರ ಬೇಕಾಗುತ್ತದೆ ಎಂಬು ಪರೀಕ್ಷಿಸುವ ಮೊದಲು ನಮ್ಮ ರಾಜ್ಯದಲ್ಲಿ 'ಬಡತನ ಕ್ಕೂ ಜೀವನ ವೆಚ್ಚ ಸೂಚ್ಯಂಕಕ್ಕೂ ಇರುವ ಸಂಬಂಧ ನೋಡೋಣ.

1991-92ರ ಬೆಲೆಗಳಲ್ಲಿ ಮೂರು ಯುನಿಟ್‌ಗಳ

ಕೆ ಮಾಣಕದ	
	ಖರ್ಚು ರೂಪೈ
[illegible]	0.96
[illegible]	0.50
[illegible]	0.64
[illegible]	0.80
[illegible]	0.33
[illegible]	1.00
[illegible]	0.30
[illegible]	1.00
[illegible]	0.20
[illegible]	5.73
73X30X3	
515.70	
40X30X4	
48.00	
57.00	
7.00	
9.00	
.90	

ಒಂದು ಕುಟುಂಬದ ಬಡತನದ ಮಟ್ಟ ನಗರ ಪ್ರದೇಶಗಳಲ್ಲಿ ತಿಂಗಳಿಗೆ 209.50x3 ಅಂದರೆ 628-50 ರೂ. ಅಂದರೆ ದಿನಕ್ಕೆ 24.17 ರೂ. ಆಗುತ್ತದೆ. ಇದು ಕರ್ನಾಟಕ ರಾಜ್ಯದ ಆ ಅವಧಿಯ ಸರಾಸರಿ ಸೂಚ್ಯಂಕ 967 ಪಾಯಿಂಟುಗಳಲ್ಲಿ. 967 ಪಾಯಿಂಟುಗಳಿಗಿಂತ ಪ್ರತಿ ಹೆಚ್ಚಿನ ಪಾಯಿಂಟಿಗೆ 2.5 ಪೈಸೆ ನೀಡಿ ಹೊಂದಾಣಿಕೆ ಮಾಡಬೇಕು. ಕನಿಷ್ಟ ಕೂಲಿ ಸಲಹಾ ಸಮಿತಿ 46.64 ರೂ ಹಾಗೂ 37.55 ರೂ ಇತ್ಯಾದಿಯನ್ನು ಹೇಗೆ ಲೆಕ್ಕ ಹಾಕಿತು ಎಂಬುದಕ್ಕೆ ವಿವರಣೆಯನ್ನು ನಾವಿಲ್ಲಿ ಕೊಡಬೇಕಾಗುತ್ತದೆ. ಎರಡು ಕಾರಣಗಳಿಂದ ಈ ಲೆಕ್ಕಾಚಾರ ಬಂದಿದೆ - 1) ಕೂಲಿಯ ಮಟ್ಟ 908 ಪಾಯಿಂಟುಗಳಲ್ಲಿ 23.50 ರೂ. ಎಂದು ಲೆಕ್ಕ ಹಾಕಲಾಯಿತು. 2) ಬೆಲೆಯೇರಿಕೆಗೆ ಸರಿಹೊಂದಿಸಲು ಪಾಯಿಂಟಿಗೆ 3.5 ಪೈಸೆಯ ದರದಲ್ಲಿ ತುಟ್ಟಿಭತ್ಯೆಯನ್ನು ಶಿಫಾರಸು ಮಾಡಲಾಯಿತು. ಸಿನೆಮಾ ಕಾರ್ಮಿಕರ ಸಂಬಳ ನಿಗದಿಪಡಿಸುವಲ್ಲಿ ಇದನ್ನು ಸರಿಯಾಗಿ ಪಾಲಿಸಲಾಯಿತು. ಈಗ ಅದು 37.55 ಎಂದು ಬದಲಾಯಿಸಲಾಗಿದೆ. ಒಂದು ಏನೂ ಫಲಕಾರಿಯಿಲ್ಲದ ನಿಯಮವನ್ನು ಸ್ವೀಕರಿಸಿದ್ದರಿಂದ ಅಂದರೆ "ಬಡತನದ ಮಟ್ಟ"ದ ಪರಿಕಲ್ಪನೆಯನ್ನು ಅಂಗೀಕರಿಸಿ ಅದನ್ನ ಕಾರ್ಮಿಕರ ನಿರೀಕ್ಷೆಯ ಮಟ್ಟಕ್ಕೆ ತರಲು ಪ್ರಯತ್ನಗಳು ನಡೆದಿರುವುದು ಇಂತಹ ವ್ಯತ್ಯಾಸ, ತೊಂದರೆಗಳಿಗೆ ಕಾರಣ. ಇದನ್ನು ನಿವಾರಿಸಬೇಕಾದರೆ 'ಬಡತನ ಮಟ್ಟ' ದ ಪರಿಕಲ್ಪನೆಯನ್ನೇ ತ್ಯಜಿಸಬೇಕು. ಇದು ಒಬ್ಬ ಕಾರ್ಮಿಕ 'ಬದುಕಿರುವುದಕ್ಕೂ' ಸಾಲದು.

'ಬದುಕುಳಿಯುವ ಮಟ್ಟ' ದಲ್ಲಿ ಕ್ಯಾಲರಿಯ (ಆಹಾರದ) ಅವಶ್ಯಕತೆ ಮತ್ತು ಬಡತನದ ಮಟ್ಟದಲ್ಲಿ ಕ್ಯಾಲರಿಯ ಅವಶ್ಯಕತೆ ಒಂದೇ ಅಲ್ಲ. ಮೇಲೆ ಹೇಳಿದಂತೆ ಬಡತನಮಟ್ಟದಲ್ಲಿ 2,100 ಕ್ಯಾಲರಿ ಮಾತ್ರ (ನಗರ ಪ್ರದೇಶಗಳಲ್ಲಿ) ಇದು ಯಾವುದೇ ರೀತಿಯ ಅಂದರೆ ದೈಹಿಕ ಕೆಲಸ ಮಾಡುವ ಅಥವಾ ಸಾಧಾರಣ ಅಥವಾ ಕುಳಿತು ಕೆಲಸ ಮಾಡುವ- ಕಾರ್ಮಿಕರಿಗೆ ಎಷ್ಟು ಕ್ಯಾಲರಿ ಬೇಕು ಎಂದು ಅಂದಾಜು. ಮಾಡಲಾಗಿದೆಯೋ ಅದಕ್ಕಿಂತ ಕಮ್ಮಿ ಇದನ್ನು ಅಂದಾಜು ಮಾಡಲು 15ನೇ ಐ.ಎಲ್.ಸಿ. ಡಾ. ಐಕ್ರೋಯ್ಡ್‌ರ 'ಹೆಲ್ತ್ ಬುಲೆಟಿನ್'ನ್ನು ಅವಲಂಬಿಸಿತ್ತು. ಈ ಇಂಗ್ಲೀಷ್ ಮನುಷ್ಯ 2,600 ಕ್ಯಾಲರಿ ಅಗತ್ಯವೆಂದು ಶಿಫಾರಸು ಮಾಡಿದ್ದರೆ ಅಡ್ಯಂತಾಯರ 1938ರ ವರದಿ 2800 ಕ್ಯಾಲರಿ ಎಂದು ಶಿಫಾರಸು ಮಾಡಿತ್ತು. ಐ.ಎಲ್.ಸಿ. ಕೊನೆಯದಾಗಿ 2,700 ಕ್ಯಾಲರಿ ಎಂದಿತ್ತು. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐ.ಸಿ.ಎಮ್.ಆರ್.) 2,800 ಕ್ಯಾಲರಿ ಎಂದು ಶಿಫಾರಸು ಮಾಡಿದೆ. ಈ ಶಿಫಾರಸನ್ನು ಮತ್ತು ಯಾವ ಆಹಾರಗಳನ್ನು ಪರಿಶೀಲಿಸಿತ್ತು ಎಂಬುದು ಕೋಷ್ಟಕ 2 ರಲ್ಲಿದೆ. ಐ.ಸಿ.ಎಮ್.ಆರ್.ನ ಪುಸ್ತಕ ಪ್ರತಿದಿನ 475 ಗ್ರಾಂ ಆಹಾರ ಧಾನ್ಯಗಳನ್ನು ಸೇವಿಸಬೇಕು ಎಂದು ಶಿಫಾರಸು ಮಾಡುತ್ತದೆ. ಮಾರ್ಚ್ 1986 ರಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆ ಮಾಡಿರುವ ಲೆಕ್ಕಾಚಾರವನ್ನೂ ಕೊಡುತ್ತಿದ್ದೇವೆ. ಇದು 2,700 ಕ್ಯಾಲರಿಯನ್ನು ಅನುಸರಿಸಿ, ಪ್ರತಿದಿನ 392 ಗ್ರಾಂ. ಆಹಾರಧಾನ್ಯಗಳ ಸೇವನೆಗೆಂದು ಲೆಕ್ಕ ಹಾಕಿದೆ.

ನಾವು ಸ್ವತಂತ್ರವಾಗಿ ಒಬ್ಬ ಸಾಧಾರಣ ಕೆಲಸ ಮಾಡುವ ಕಾರ್ಮಿಕನಿಗೆ ಎಷ್ಟು ಕ್ಯಾಲರಿ ಆಹಾರ ಬೇಕು ಎಂದು ಲೆಕ್ಕ ಹಾಕೋಣ. ಎಷ್ಟು ಕ್ಯಾಲರಿ ಆಹಾರ ಸೇವನೆ ಬೇಕೆಂದು ವಿವರಿಸುವ ಒಂದು ವೈದ್ಯಕೀಯ ಕಿರುಹೊತ್ತಿಗೆಯಲ್ಲಿ ವಿವಿಧ ಚಟುವಟಿಕೆಗಳಿಗೆ ಎಷ್ಟು ಕ್ಯಾಲರಿ ಆಹಾರ ಬೇಕೆಂದು ಪಟ್ಟಿ ಮಾಡಲಾಗಿದೆ. ಅದನ್ನು ಕೋಷ್ಟಕ 4 ರಲ್ಲಿ ಕೊಡಲಾಗಿದೆ.

ದೇಹ ಸಂಪೂರ್ಣ ವಿರಾಮ ಸ್ಥಿತಿಯಲ್ಲಿರುವಾಗ ಖರ್ಚಾಗುವ ಶಕ್ತಿ (ಪೋಷಕಾಂಶ ಪರಿಣತರು ಇದನ್ನು 'ಆಧಾರ ಜೀರ್ಣಶಕ್ತಿ' (**Basal metabolism**) ಎನ್ನುತ್ತಾರೆ) ನಿಮಿಷಕ್ಕೆ ಒಂದು ಕ್ಯಾಲರಿ. ಒಂದು ದಿನದಲ್ಲಿ 24x60 ನಿಮಿಷಗಳಿರುವುದರಿಂದ ದೇಹ ಸಂಪೂರ್ಣ ವಿರಾಮ ಸ್ಥಿತಿಯಲ್ಲಿರುವಾಗ ದಿನಕ್ಕೆ 1,440 ಕ್ಯಾಲರಿ ಆಹಾರಬೇಕು. 'ಬಡತನ ಮಟ್ಟ' 2,100 ಕ್ಯಾಲರಿ ಮಾತ್ರ ಲೆಕ್ಕ ಹಾಕುವುದರಿಂದ ನಿಲ್ಲುವುದು, ನಡೆಯುವುದು, ತೊಳೆಯಲು ಇತ್ಯಾದಿಗೆ ಉಳಿಯುವ ಕ್ಯಾಲರಿ 2,100-1,440=640 ಕ್ಯಾಲರಿಗಳಷ್ಟೆ. ಈ ಕೆಲಸಗಳಿಗೆ ಬೇಕಾಗುವ ಕ್ಯಾಲರಿ 1.2, 2, 3.5 ಇತ್ಯಾದಿ. ಈ ಚಟುವಟಿಕೆಗಳನ್ನು ಜಾಗೃತಾವಸ್ಥೆಯಲ್ಲಿರುವ ಎಂಟು ಗಂಟೆಗಳಲ್ಲಿ ಮಾಡುತ್ತಿರಬೇಕಾಗುತ್ತದೆ ಎಂದು ಭಾವಿಸೋಣ. ಈ ಕೆಲಸಗಳಿಗೆ 2 ಕ್ಯಾಲರಿ ಎಂದು ಲೆಕ್ಕಹಾಕಿ, ಈಗಾಗಲೇ, ವಿರಾಮ ಸ್ಥಿತಿಯಲ್ಲಿ ಈ 8 ಗಂಟೆಗೂ ಒಂದು ಕ್ಯಾಲರಿ ಎಂದು ಲೆಕ್ಕ ಹಾಕಿದ್ದನ್ನು ಕಳೆದರೆ ಇಂತಹ ಕನಿಷ್ಟ ಚಟುವಟಿಕೆಗೆ 480 ಕ್ಯಾಲರಿ ಖರ್ಚಾಗುತ್ತದೆ ಎಂದಾಯಿತು. ಅಂದರೆ ಬಡತನಮಟ್ಟದಲ್ಲಿನ 2,100 ಕ್ಯಾಲರಿ ಕೇವಲ ಆಧಾರ ಜೀರ್ಣಶಕ್ತಿ ಹಾಗೂ ಕನಿಷ್ಟ ಚಟುವಟಿಕೆಗೆ ಮಾತ್ರವೇ ಶಕ್ತಿ ಒದಗಿಸಬಲ್ಲದು, ಯಾವುದೇ ಕೆಲಸ ಮಾಡಲಿಕ್ಕಲ್ಲ. ಕೋಷ್ಟಕ 4 ನೋಡಿದರೆ 8 ಗಂಟೆಗಳ ಕೆಲಸಕ್ಕೆ ಬೇಕಾಗುವ ಶಕ್ತಿ ಬೇರೆ ಬೇರೆ ಕೆಲಸಗಳಿಗೆ ಭಿನ್ನವಾಗಿದೆ ಎಂದು ಕಾಣುತ್ತೇವೆ. ಸಾಧಾರಣ ಕೆಲಸಕ್ಕೆ ಕನಿಷ್ಟ 3.5 ರಿಂದ 4. ಕ್ಯಾಲರಿ (ನಿಮಿಷಕ್ಕೆ) ಬೇಕು. ಅಂದರೆ ವಿರಾಮಸ್ಥಿತಿಯಲ್ಲಿರುವುದಕ್ಕಿಂತ ಸಾಧಾರಣ ಕೆಲಸದ 8 ಗಂಟೆಗಳಲ್ಲಿ ನಿಮಿಷಕ್ಕೆ 2.5 ಕ್ಯಾಲರಿಗಳಂತೆ ಹೆಚ್ಚಿನ ಶಕ್ತಿ ಬೇಕು. ಅಂದರೆ ಒಟ್ಟು ಕ್ಯಾಲರಿ 1440+480+1200 ಕ್ಯಾಲರಿಗಳು ಅಂದರೆ 3120 ಕ್ಯಾಲರಿಗಳು. ಐ.ಸಿ.ಎಮ್.ಆರ್. ಕೊಟ್ಟಿರುವ 2,800 ಕ್ಯಾಲರಿಗಳನ್ನು ಕನಿಷ್ಟ ಕೂಲಿ ನಿಗದಿಪಡಿಸುವಾಗ ಯಾವುದೇ ಕಾರಣಕ್ಕೆ ಕಡಿಮೆ ಮಾಡಲು ಬಿಡಬಾರದು ಎಂಬುದಕ್ಕೆ ಈ ಲೆಕ್ಕಾಚಾರವನ್ನು ಕೊಡುತ್ತಿದ್ದೇವೆ.

ಬಡತನಮಟ್ಟದ ಆಧಾರದ ಮೇಲೆ ಸುಧಾರಿತ ಕೂಲಿ

ಆದ್ದರಿಂದ ನಗರ ಪ್ರದೇಶಗಳಲ್ಲಿ ಬಡತನ ಮಟ್ಟದ

ರೂಪಾಯಿಯ ಕಾಲೆಳೆಯಲು ಮತ್ತೆ ಹುನ್ನಾರ

-- ಜಿ.ಎಸ್.ಮಣಿ

ಕಳೆದ ಆಯ ವ್ಯಯ ಮಂಡನೆಯ ಸಂದರ್ಭದಲ್ಲಿ ರೂಪಾಯಿಯ ಪೂರ್ಣ ಪರಿವರ್ತನೆ ತಂದಿದ್ದು ನಿಮಗೆ ನೆನಪಿರಬಹುದು. ನಿಜದಲ್ಲಿ ಈ ಪೂರ್ಣ ಪರಿವರ್ತನೆ ಪೂರ್ಣವಾಗಿರಲಿಲ್ಲ. ವ್ಯಾಪಾರಕ್ಕೆ ಮಾತ್ರ ಇದು ಪೂರ್ಣ ಪರಿವರ್ತನೆಯಾಗಿತ್ತು. ಬಂಡವಾಳ ಚಾಲ್ತಿ ಖಾತೆಗೆ ಈ ಪೂರ್ಣ ಪರಿವರ್ತನೆ ಅನ್ವಯಿಸುತ್ತಿರಲಿಲ್ಲ. ದಿನವೂ ಅಪಮೌಲ್ಯಕ್ಕೊಳಗಾಗಬೇಕಾಗಿದ್ದ ರೂಪಾಯಿಯ ಬೆಲೆ ಕುಸಿಯದಂತೆ ಸರಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಸರ್ಕಸ್ ಮಾಡುತ್ತಾ ಬಂದಿದೆ.

ಈಗ ಸಾಮ್ರಾಜ್ಯಶಾಹಿಗಳಿಗೆ ತಮ್ಮ ತಂತ್ರ ಕೂಡಲೇ ಫಲಪ್ರದವಾಗದ್ದನ್ನು ಕಂಡು ತುರಿಕೆಯುಂಟಾಗಿರಬೇಕು. ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯಕಾರಿ ನಿರ್ದೇಶಕ ಓ.ಪಿ. ಸೊಧಾನಿಯವರ ಪ್ರಕಾರ ಐಎಂಎಫ್‌ನ ಏಳನೇ ಪರಿಚ್ಛೇದದ ಸ್ಥಾನ ಪಡೆಯಲು ಭಾರತ ಚಾಲ್ತಿ ಖಾತೆಯ ಮೇಲಿನ ಹತೋಟಿಯನ್ನು ತೆಗೆಯಬೇಕಂತೆ. ಐಎಂಎಫ್‌ನ ಈ ಪರಿಚ್ಛೇದ ಹಣ ಪಾವತಿ ಕರೆನ್ಸಿ ಪದ್ಧತಿಯಲ್ಲಿ ಭೇದಭಾವ ತೆಗೆದು ಹಾಕುವುದರ ಬಗ್ಗೆ ಇದೆ.

ಇಂತಹ ಪೂರ್ಣ ಪರಿವರ್ತನೆಯನ್ನು ತಂದರೆ ಅದು ಖಂಡಿತವಾಗಿಯೂ ರೂಪಾಯಿಯ ನಿರಂತರ ಅಪಮೌಲ್ಯೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಯಾಕೆಂದರೆ ಬಂಡವಾಳಕ್ಕೆ ಇದು ಅನ್ವಯವಾದಾಗ, ವಿದೇಶೀ ಸಾಲ, ಸಹಾಯ ಇತ್ಯಾದಿಗಳಿಗೆಲ್ಲಾ ಇದು ಅನ್ವಯವಾಗುತ್ತದೆ. ಆಗ ಸಹಜವೆಂಬಂತೆ ಡಾಲರಿನ ಬೆಲೆ ಏರುತ್ತದೆ. ರೂಪಾಯಿಯ ಬೆಲೆ ಕುಸಿಯುತ್ತದೆ. ನಮ್ಮ ಸರಕುಗಳು ಡಾಲರ್ ಇರುವವರಿಗೆ ಸುಲಭವಾಗಿ ಕೈಗೆಟಕುತ್ತದೆ. ನಮಗೆ ವಿದೇಶೀ ಸರಕುಗಳು ಬಹು ದುಬಾರಿಯಾಗುತ್ತವೆ. ಆಗ ನಾವು ತಂತ್ರಜ್ಞಾನ, ತೈಲ ಇತ್ಯಾದಿಗಳಿಗೆಲ್ಲಾ ಅತ್ಯಂತ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ. ಇದು ದೇಶದೊಳಗೆ ಹಣದುಬ್ಬರವನ್ನು ಬಹಳ ವೇಗದಿಂದ ಹೆಚ್ಚಿಸುತ್ತದೆ. ಬಡ ಜನತೆಯ ಜೀವನ ಇನ್ನೂ ದುರ್ಭರವಾಗುತ್ತದೆ. ಇದಾಗಬೇಕೆಂಬುದೇ ಐಎಂಎಫ್/ವಿಶ್ವ ಬ್ಯಾಂಕ್/ಸಾಮ್ರಾಜ್ಯಶಾಹಿಗಳ ಆಶಯ. ಅಲ್ಲವೇ?


'ಅಯ್ಯೋ' ಎನುವವರ ಕಟುಕುವವರು

ಅಯ್ಯೋ ಎಂದರೆ ಸ್ವರ್ಗ ಎನ್ನುತ್ತಾರೆ. ಆದರೆ 'ಅಯ್ಯೋ' ಎಂದವರನ್ನು ಕಟುಕುವವರೂ ಇದ್ದಾರೆ.

ಉದ್ದಿಮೆ ಮತ್ತು ಹಣಕಾಸು ಪುನರ್‌ನಿರ್ಮಾಣ ಮಂಡಲಿ ರೋಗಗ್ರಸ್ತ ಔದ್ಯಮಿಕ ಕಾಯಿದೆಯ(ಸೀಕಾ ಎಂದು ಇಂಗ್ಲಿಷ್‌ನಲ್ಲಿ ಕರೆಯುತ್ತಾರೆ) ಅಡಿ ಅಸ್ತಿತ್ವಕ್ಕೆ ಬಂತು. ರೋಗಗ್ರಸ್ತ ಕಂಪನಿಗಳನ್ನು ಪುನರ್ವಸತಿ ಮಾಡುವುದು ಇದರ ಕೆಲಸ. ಇಂತಹ ಪುನರ್ವಸತಿ ಸಾಧ್ಯವೇ ಇಲ್ಲವೆಂದಾಗ ಆ ಉದ್ಯಮವನ್ನು ಮುಚ್ಚಲೂ ಇದಕ್ಕೆ ಅಧಿಕಾರ ಇದೆ.

ಆದರೆ ಈ ಮಂಡಳಿ ಉದ್ಯಮಗಳನ್ನು ಪುನರ್ವಸತಿ ಮಾಡುವ ಕಡೆಗೆ ಹೆಚ್ಚಿನ ಗಮನ ನೀಡಿತು. ಈ ನಿಲುವಿನಿಂದಾಗಿಯೇ ಈ ಮಂಡಳಿಯನ್ನು ತೀವ್ರವಾಗಿ ಗೋಸ್ವಾಮಿ ಎಂಬ ಗೋಮುಖ ವ್ಯಾಘ್ರ ಸಮಿತಿ ಟೀಕಿಸಿತು.

ಉದ್ದಿಮೆ ಮತ್ತು ಹಣಕಾಸು ಪುನರ್‌ನಿರ್ಮಾಣ ಮಂಡಳಿ(**BIFR**)ಯ ಅಧ್ಯಕ್ಷ ಆರ್.ಆರ್. ಗುಪ್ತಾ ಈ ಬಗೆಗೆ ವಿವರ ನೀಡಿದ್ದಾರೆ. 1987ರಲ್ಲಿ ಅಸ್ತಿತ್ವಕ್ಕೆ ಬಂದ ಈ ಮಂಡಳಿ ಎಂತಹ ತೊಂದರೆಗಳನ್ನು ಅನು


ನರಸಿಂಹರಾವ್ ಸರಕಾರದ 29ನೇ ತಿಂಗಳಲ್ಲಿ

ಭವಿಸಿತು. ಎಂತಹ ನಿಲುವು ಧೋರಣೆ ತಳೆಯಿತು ಎಂಬುದನ್ನು ಅವರು ವಿವರಿಸಿ ಬಿಐಎಫ್‌ಆರ್‌ನ ಈ ಧೋರಣೆಯ ಮಹತ್ವವನ್ನು ಅವರು ವಿವರಿಸಿದ್ದಾರೆ.

ಸಾವಿರಾರು ಕಾರ್ಮಿಕರ ಭವಿಷ್ಯವನ್ನು ನಿರ್ಧರಿಸುವಾಗ ಜವಾಬ್ದಾರಸ್ಥರು ಅನುಸರಿಸುವ ಧೋರಣೆ ಇದು.

ಆದರೆ ಉದಾರೀಕರಣದ ಹೆಂಡ ಕುಡಿದ ಗೋಸ್ವಾಮಿ ಸಮಿತಿಗೆ ಇಂತಹ ಸಮತೋಲದ ವಿಚಾರ ಹೇಗೆ ಸಾಧ್ಯ? 'ಉದಾರೀಕರಣವೇ ಎಲ್ಲಕ್ಕೂ ಮುಖ್ಯ' ಎಂಬುದು ಅದರ ಮಂತ್ರ. ಆದ್ದರಿಂದಲೇ ಬಿಐಎಫ್‌ಆರ್‌ನ ಪಾತ್ರದ ಟೀಕೆ ಕಟುಕು ಮಾತು. ಹೇಗಿದೆ ಉದಾರೀಕರಣ?

ರೊಟ್ಟಿಯೂ ತುಟ್ಟಿ

ಕೆಲವೇ ದಿನಗಳಲ್ಲಿ ದೇಶದ ಜನತೆ ಉಣ್ಣುವ ರೊಟ್ಟಿ, ಓಟ್ಸು, ಅನ್ನ ಇವೆಲ್ಲ ತೀವ್ರವಾಗಿ ತುಟ್ಟಿಯಾಗಲಿವೆ. ಹೇಗೆ ಎಂದಿರಾ? ಬಡ ಜನತೆಯ ಹಿತಗಳನ್ನು ಗಾಳಿಗೆ ತೂರಿ ಉದಾರೀಕರಣದ ನೇತಾರನಾಗಿರುವ ಕೇಂದ್ರ ಸರಕಾರ ಆಹಾರ ಬೇಯಿಸಲು ಬೇಕಾದ ಸೀಮೆ ಎಣ್ಣೆ ಮತ್ತು ಅಡಿಗೆ ಅನಿಲಗಳ ಬೆಲೆಯೇರಿಸಲಿದೆಯಂತೆ.

ಐಎಂಎಫ್, ವಿಶ್ವ ಬ್ಯಾಂಕ್‌ಗಳ ನಿರ್ದೇಶನದಂತೆ ನಮ್ಮ ದೇಶದಲ್ಲಿ ಯಾವುದೇ ಸಹಾಯ ಧನವಿರಕೂಡದು. ಅಡಿಗೆ ಅನಿಲ ಮತ್ತು ಸೀಮೆ ಎಣ್ಣೆಯ ಮೇಲಿನ ಸಹಾಯ ಧನ 4000 ಕೋಟಿ ರೂಪಾಯಿಗಳಂತೆ. ಆದರೆ ಈ ಸಹಾಯಧನ ಬಡವರ ಜೀವನವನ್ನು ಸುಲಭಗೊಳಿಸುತ್ತಿತ್ತು.

ಈಗ ಹೊಟ್ಟೆಯ ಮೇಲೆ ಒದ್ದೆ ಬಟ್ಟೆ ರಾತ್ರಿಯಾದರೆ ಗಾಢ ಅಂಧಕಾರ - ಇದೇ ಬಡ ಜನರ ಬದುಕಾಗಲಿದೆ.

ಸ್ವರ್ಗ ಸೇರಲು ಇನ್ನೂ ಹೆಚ್ಚು ಉದಾರೀಕರಣ

ಉದಾರೀಕರಣ ಫಲವನ್ನು ಆಗಲೇ ಉಣ್ಣುತ್ತಿರುವವರಿಗೆ ಮನಮೋಹನಸಿಂಗ್ ಎಂಬ ಸಾಮ್ರಾಜ್ಯಶಾಹಿಗಳ ಪ್ರತಿನಿಧಿ ಇನ್ನೂ ಹೆಚ್ಚಿನ ಉದಾರೀಕರಣದ ಮಾತನ್ನು ಆಡಿದ್ದಾರೆ. ಈಗ ಮಾಡಿರುವ ಉದಾರೀಕರಣದಿಂದ ಅಬಿವೃದ್ಧಿ ತೀವ್ರವಾಗಿ ಬೆಳೆದಿಲ್ಲ. ಶೇ. 8ರಿಂದ 10ರಷ್ಟು ಅಭಿವೃದ್ಧಿ ಹೊಂದಲು ಇನ್ನೂ ಹೆಚ್ಚೆಚ್ಚು ಉದಾರೀಕರಣ ಮಾಡಬೇಕಾಗುತ್ತದೆ ಎಂಬುದು ಅವರ ಅಂಬೋಣ.

ದೇಶ ಇನ್ನೂ ಅಭಿವೃದ್ಧಿ ಪಥದಲ್ಲಿರುವುದರಿಂದ ಆಮದು ಹೆಚ್ಚುತ್ತಲೇ ಇರುತ್ತದಂತೆ. ಇದನ್ನು ಸರಿದೂಗಿಸಲು ನಾವು ರಫ್ತನ್ನು ಹೆಚ್ಚಿಸಬೇಕಂತೆ. ಇದನ್ನು ಸಾಧಿಸಲು ಏನು ಮಾಡಬೇಕು? ಇನ್ನೂ ಹೆಚ್ಚು ಉದಾರೀಕರಣ ಮಾಡಬೇಕಂತೆ.

ಈ ಹೆಚ್ಚೆಚ್ಚು ಉದಾರೀಕರಣ ಬಡವರನ್ನು ಸ್ವರ್ಗಕ್ಕೆ ಕಳುಹಿಸಬಹುದೇ?


ಸಾಧ್ಯವಿಲ್ಲ. ಆದ್ದರಿಂದ 'ಬಡತನ ಮಟ್ಟ'ದ ಅಗತ್ಯಗಳನ್ನು ಆಧಾರಿಸಿದ ಲೆಕ್ಕಾಚಾರವನ್ನು ಶೇ. 33.33 (2100 ಕ್ಯಾಲರಿಗಿಂತ 700 ಕ್ಯಾಲರಿ ಸೇರಿಸಬೇಕು) ಹೆಚ್ಚಿಸಿದರೆ ಮಾತ್ರ ಬದುಕುಳಿಯುವ ಮಟ್ಟದ ಲೆಕ್ಕಾಚಾರ ಮಾಡಬಹುದು. ಹೀಗೆ ಅಧಿಕೃತ ಬಡತನ ಮಟ್ಟದ (3 ಯುನಿಟ್‌ಗಳಂತೆ) ಕೂಲಿ ತಿಂಗಳಿಗೆ 628.50 ರೂ. ಅಥವಾ ದಿನಕ್ಕೆ 24.17 ರೂ. ಎಂಬುದನ್ನು 33.33% ಹೆಚ್ಚಿಸಿದರೆ ಮಾತ್ರ 2800 ಕ್ಯಾಲರಿಗಳ ಆಹಾರ ಸೇವನೆಗೆ ಅಗತ್ಯವಾದ ಕೂಲಿ ಎಷ್ಟೆಂದು ಲೆಕ್ಕ ಹಾಕಬಹುದು. ಇದು 967 ಪಾಯಿಂಟುಗಳಲ್ಲಿ ದಿನಕ್ಕೆ 32.24 ರೂ. ಆಗುತ್ತದೆ. ಬೆಲೆಯೇರಿಕೆಯನ್ನು ಸರಿದೂಗಿಸಲು ಪ್ರತಿ ಪಾಯಿಂಟಿಗೆ 3.33 ಪೈಸೆ (ಸಮೀಪದ ಅರ್ಧ ಪೈಸೆಗೆ ಲೆಕ್ಕಹಾಕಿದರೆ 3.5 ಪೈಸೆ) ಹೆಚ್ಚಳ ನೀಡಬೇಕು. ಇದು 1309 ಪಾಯಿಂಟುಗಳ ಮಟ್ಟದಲ್ಲಿ (1992 ರಲ್ಲಿ ಕರ್ನಾಟಕದಲ್ಲಿ ಸರಾಸರಿ ಬೆಲೆ ಮಟ್ಟ) ದಿನಕ್ಕೆ 44ರೂ. ಅಥವಾ ತಿಂಗಳಿಗೆ 1144/-ಆಗುತ್ತದೆ. (ತುಟ್ಟಿಭತ್ಯೆ ದರ 3.33 ಪೈಸೆ ಎಂದು ಲೆಕ್ಕಹಾಕಿದರೆ 43.22 ರೂ. ಆಗುತ್ತದೆ. ಪೂರ್ಣ ರೂಪಾಯಿಗಳಲ್ಲಿ ಇದನ್ನು 44. ರೂ ಎಂದು ತೆಗೆದುಕೊಂಡಿದೆ) 1,309 ಪಾಯಿಂಟುಗಳಿಗಿಂತ ಹೆಚ್ಚಿನ ಬೆಲೆಯೇರಿಕೆಗೆ ಪಾಯಿಂಟಿಗೆ 3.5 ಪೈಸೆ ಕೊಡಬೇಕೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದೆಲ್ಲಾ ಬಡತನಮಟ್ಟದ ಕೂಲಿಯ ಮಟ್ಟದ ಲೆಕ್ಕಾಚಾರ- ನಾವು ಅದನ್ನು 2,100 ರಿಂದ 2,800 ಕ್ಯಾಲರಿ ಎಂದು ಅಂದಾಜು ಮಾಡಿ ಸ್ವಲ್ಪ ಸುಧಾರಿಸಿದ್ದೇವಷ್ಟೆ. ಗ್ರಾಮೀಣ ಪ್ರದೇಶಗಳಲ್ಲೂ ಈ ದರ ಕಮ್ಮಿಯಾಗುವುದಿಲ್ಲ. ಏಕೆಂದರೆ ಅಲ್ಲಿ ಸಾಮಾನ್ಯವಾಗಿ ದೈಹಿಕ ಕೆಲಸವೇ. ಅದಕ್ಕೆ ಬೇಕಾಗುವ ಕ್ಯಾಲರಿ ಐ.ಸಿ.ಎಮ್.ಆರ್.ಪ್ರಕಾರವೇ 3,200. ಈ ಲೆಕ್ಕಾಚಾರದಲ್ಲಿ ಇತರ ಅಗತ್ಯಗಳನ್ನು ಸಾಕಷ್ಟು ಗಮನಕ್ಕೆ ತಗೊಂಡಿಲ್ಲ ಎಂಬುದನ್ನು ಗಮನಿಸಬೇಕು. ಅವನ್ನು ಪರಿಗಣಿಸದೆ 'ಬದುಕುಳಿಯುವ ಮಟ್ಟ' ಸಾಧಿಸಲು ಸಾಧ್ಯವಿಲ್ಲ.

ಅಸಂಘಟಿತ ಕಾರ್ಮಿಕರ ಚಳುವಳಿ

ಪ್ರಾಂತ ರೈತ ಸಂಘದ ಬೆಂಬಲ

ಬರಗಾಲ ಬಂದಾಗ ಕಾರ್ಮಿಕ ಸಂಘಟನೆಯಿಂದ ರೈತರಿಗೆ ಜೋಳವನ್ನು ಕೊಡಲಾಗಿತ್ತು. ಇಂದು ಅಸಂಘಟಿತ ಕಾರ್ಮಿಕರಿಂದ ನಡೆಯುವ ಚಳುವಳಿಗೆ ರೊಟ್ಟಿಯನ್ನು ರೈತರಿಂದ ಕೊಡುವಂತಾಗಬೇಕು. ಕಾರಣ ರೈತ ಕಾರ್ಯಕರ್ತರು ಶಾಲೆಗೆ 20 ನೇ ತಾರೀಕಿಗೆ ಬರುವಾಗ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಟ ನೂರಕ್ಕಿಂತಲೂ ಹೆಚ್ಚಾಗುವಂತೆ ರೊಟ್ಟಿಯನ್ನು ತರಬೇಕು, ಇದಲ್ಲದೆ ಸಂಘಟಿತ ಕಾರ್ಮಿಕರಿಂದ, ಪಕ್ಷದ ಸದಸ್ಯರಿಂದ ಹಿತೈಷಿಗಳಿಂದ ಸಾವಿರಾರು ಸಂಖ್ಯೆಯಲ್ಲಿ ರೊಟ್ಟಿಯನ್ನು ಮಾಡಿಸಿ 22, 23, 24ಕ್ಕೆ ತಲುಪುವಂತೆ ಬಸ್ಸಿಗೆ ಕಳಿಸಬೇಕು ಫೋನ್ ಹಾಗೂ ತಂತಿಯ ಮುಖಾಂತರ ರಾಜ್ಯ ಕೇಂದ್ರಕ್ಕೆ ತಿಳಿಸಬೇಕು.

ಹಾಗೂ ಈ ಹೋರಾಟಕ್ಕೆ ಬೆಂಬಲಿ ಸರಕಾರಕ್ಕೆ ಒತ್ತಾಯಿಸಲು 22ರ ನಂತರ ಮುಟ್ಟುವಂತೆ ಮುಖ್ಯಮಂತ್ರಿಗೆ ತಂತಿ ಕಳಿಸಬೇಕು ಎಂದು ಕರ್ನಾಟಕ ಪ್ರಾಂತ ಸಂಘ ತನ್ನ ಕಾರ್ಯಕರ್ತರಿಗೆ ಕರೆ ನೀಡಿದೆ.



--ವಿಶ್ವ

ಕೇರಳ ಸಾರಿಗೆ ನೌಕರರ ವಿಜಯ

ತಿರುವನಂತಪುರ: ಕೇರಳ ರಾಜ್ಯ ಸಾರಿಗೆ ಸಂಸ್ಥೆಯ 28,000ಕ್ಕೂ ಹೆಚ್ಚು ನೌಕರರು ನಡೆಸಿದ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ.

ಹೋರಾಟ ನಿರತ ಎರಡೂ ಕ್ರಿಯಾ ಸಮಿತಿಗಳ ಮುಖಂಡರು ಮುಖ್ಯಮಂತ್ರಿ, ಕಾರ್ಮಿಕ ಮಂತ್ರಿ ಮತ್ತು ಸಾರಿಗೆ ಮಂತ್ರಿ ಜತೆ ದೀರ್ಘ ಸಮಾಲೋಚನೆಗಳನ್ನು ನಡೆಸಿದರು. ಇದರ ಫಲವಾಗಿ, ವೇತನ ಸ್ತಂಭನ ನಿರ್ಧಾರವನ್ನು ವಾಪಸು ಪಡೆಯಲು ಸರಕಾರ ಒಪ್ಪಿಕೊಂಡಿದೆ.

ಎಲ್.ಡಿ.ಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಕ್ರಿಯಾ ಸಮಿತಿಗಳು ಮುಷ್ಕರಕ್ಕೆ ಕರೆ ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕೇರಳ ಸಾರಿಗೆ ನೌಕರರ ಚಳವಳಿ ಬಗ್ಗೆ "ಐಕ್ಯರಂಗ" ಹಿಂದಿನ ಸಂಚಿಕೆಗಳಲ್ಲಿ ವರದಿಗಳನ್ನು ಪ್ರಕಟಿಸಿತ್ತು.

ತಮಿಳುನಾಡು ಸಾರಿಗೆ ನೌಕರರ ಮುಷ್ಕರ

ಮದ್ರಾಸ್: ತಮಿಳುನಾಡು ರಾಜ್ಯ ಸಾರಿಗೆಯ 1.2 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ನವೆಂಬರ್ ಎರಡರ ಬೆಳಿಗ್ಗೆಯಿಂದ ಮಿಂಚಿನ ಮುಷ್ಕರ ಆರಂಭಿಸಿದರು. ರಾಜ್ಯ ಸರಕಾರಿ ಆಡಳಿತದ ಸಾರಿಗೆ ನಿಗಮಗಳ ನೌಕರರ ಬೋನಸ್‌ಗೆ ಸಂಬಂಧಪಟ್ಟ ಸರಕಾರದ ಏಕಪಕ್ಷೀಯ ಪ್ರಕಟಣೆಯನ್ನು ಪ್ರತಿಭಟಿಸಿ ಈ ಮುಷ್ಕರವನ್ನು ಆರಂಭಿಸಲಾಯಿತು.

• ಕಾರ್ಮಿಕ ಸಂಘಟನೆಗಳನ್ನು ಮಾತುಕತೆಗೆ ಕರೆದು ಬೋನಸ್ ವಿಷಯವನ್ನು ಇತ್ಯರ್ಥಪಡಿಸುವಂತೆ ಸಿಐಟಿಯು ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಟಿ.ಕೆ. ರಂಗರಾಜನ್ ರಾಜ್ಯ ಸರಕಾರಕ್ಕೆ ಕರೆ ನೀಡಿದ್ದಾರೆ.

ತ್ರಿಪುರಾದಲ್ಲಿ ಕನಿಷ್ಟ ಕೂಲಿ ಹೆಚ್ಚಳ

ಅಗರ್ತಲಾ: ರಾಜ್ಯದ ಕೃಷಿ ಕಾರ್ಮಿಕರು, ರಬ್ಬರ್ ಪ್ಲಾಂಟೇಷನ್ ಕಾರ್ಮಿಕರು ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರ ಕನಿಷ್ಟ ಕೂಲಿಯನ್ನು ಹೆಚ್ಚಿಸಲು ತ್ರಿಪುರಾದ ಎಡರಂಗ ಸರ್ಕಾರ ನಿರ್ಧರಿಸಿದೆ. ಸಚಿವ ಸಂಪುಟ ಸಭೆ ಈ ಸಂಬಂಧ ಒಂದು ನಿರ್ಣಯವನ್ನು ಕೈಗೊಂಡಿದೆ.

ಅಗರ್ತಲಾ ನಗರಪಾಲಿಕೆಯ ಕಾರ್ಮಿಕರು ಮತ್ತು ನೌಕರರಿಗೆ ನಿವೃತ್ತಿ ವೇತನವನ್ನು ಕೊಡುವ ಬಗ್ಗೆಯೂ ಒಂದು ಮಹತ್ವದ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಮಮತಾ ಬ್ಯಾನರ್ಜಿಯಿಂದ ಪ್ರಾದೇಶಿಕ ಪಕ್ಷ!

ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಅನ್ನುವ ರೀತಿಯಲ್ಲಿ ಕಾಂಗ್ರೆಸ್(ಐ) ಪಕ್ಷ ಅಂತಃಕಲಹದ ದೇಗುದಿಯಲ್ಲಿ ದೇಯುತ್ತಿದೆ. ಅನೇಕ ಸಂದರ್ಭಗಳಲ್ಲಿ ಈ ಅಂತಃಕಲಹಗಳು ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯಗಳಲ್ಲಿ 'ಬಂಡುಕೋರ ಕಾಂಗ್ರೆಸ್‌ಗಳಿಂದ' ಹೊಸ ಪಕ್ಷಗಳು ಮತ್ತೆ ತವರುಮನೆ ಸೇರುವುದು ಕೂಡಾ ಅಷ್ಟೇ ಸಾಮಾನ್ಯ ಸಂಗತಿಯಾಗಿದೆ.

ಈಗ ನಮ್ಮಲ್ಲಿ ನೋಡಿ. ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಒಂದು ಬಾಂಬ್ ಎಸೆದಿದ್ದಾರೆ. ಮುಂದಿನ ವರ್ಷ ಒಂದು ಪ್ರಾದೇಶಿಕ ಪಕ್ಷ ಕಟ್ಟುವುದಾಗಿ ಅವರು ಹೇಳಿದ್ದಾರೆ ಎಂಬ ಪತ್ರಿಕಾ ವರದಿಗಳು ಪ್ರಕಟವಾಗಿವೆ. ಆದರೆ ತಾನು ಹಾಗೆ ಹೇಳಿಲ್ಲ ಎಂದು ಬಂಗಾರಪ್ಪ ಸ್ಪಷ್ಟನೆ ನೀಡಿದ್ದಾರೆ ಎಂಬ ವರದಿಗಳೂ ಇವೆ.

ಬಂಗಾರಪ್ಪನವರ ಯೋಜನೆ-ಯೋಚನೆ ಬಗ್ಗೆ ಇಲ್ಲಿ ಚರ್ಚೆ ಬೇಡ. ನಾವೀಗ ಪಶ್ಚಿಮ ಬಂಗಾಳಕ್ಕೆ ಹೋಗೋಣ ಅಲ್ಲಿ ಮಮತಾ ಬ್ಯಾನರ್ಜಿ ಎಂಬ 'ದಿಟ್ಟ ನಾಯಕಿ' ಇರುವುದು ನಮಗೆಲ್ಲಾ ಗೊತ್ತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸೋಮೇನ್ ಮಿತ್ರಾ ಮತ್ತು ಮಮತಾ ಬಣಗಳ ನಡುವಣ ಕಲಹ ಎಲ್ಲರಿಗೂ ತಿಳಿದದ್ದೆ. ಅದೀಗ ಪರಾಕಾಷ್ಠೆಗೆ ಹೋಗಿದೆ. ಮಿತ್ರಾ ಕೈ ಮೇಲಾಗಿದೆ. ಮಮತಾ ಬ್ಯಾನರ್ಜಿ ಮುಖ ಕಪ್ಪಿಟ್ಟಿದೆ.

ಹೌರಾ ನಗರಪಾಲಿಕೆ ಚುನಾವಣೆಗಳು ಸಮೀಪಿಸಿರುವ ಹಿನ್ನೆಲೆಯಲ್ಲಿ ಈ ಎರಡೂ ಬಣಗಳ ಕಲಹ ತಾರಕಕ್ಕೇರಿದ್ದು ಪರಸ್ಪರರನ್ನು ವೈಯುಕ್ತಿಕವಾಗಿ ನಿಂದಿಸುವ ಮಟ್ಟಕ್ಕೂ ಅವರು ಇಳಿದಿದ್ದಾರೆ.

ಪಕ್ಷದಲ್ಲಿ ಮೂಲೆಗುಂಪಾಗುತ್ತಿರುವುದನ್ನು ಕಂಡ ಮಮತಾ ಬ್ಯಾನರ್ಜಿ ಬಿಜೆಪಿಯನ್ನು ಸೇರಿದ್ದಾರೆಂಬ ಸುದ್ದಿ ದಟ್ಟವಾಗಿ ಹಬ್ಬಿತ್ತು. ಆ ಯತ್ನ ವಿಫಲವಾದಂತೆ ಕಾಣುತ್ತಿದೆ. ಆದ್ದರಿಂದ ಅವರು ಈಗ ಹೊಸ ಪ್ರಾದೇಶಿಕ ಪಕ್ಷವೊಂದನ್ನು ಕಟ್ಟಲು ಮುಂದಾಗಿದ್ದಾರೆ.

ಹೌರಾ ಚುನಾವಣೆಯಲ್ಲಿ ಪ್ರಚಾರದಲ್ಲಿ ತಾನು ಭಾಗವಹಿಸುವುದಿಲ್ಲ ಎಂದು ಮಮತಾ ಬಹಿರಂಗವಾಗಿ ಪ್ರಕಟಿಸಿದ್ದಾರೆ. ಅಂದರೆ ಇದು ಕಾಂಗ್ರೆಸ್‌ನಿಂದ ದೂರ ಸರಿಯುವ ಮುನ್ಸೂಚನೆಯಾಗಿದೆ. ಏನಿದ್ದರೂ ಸ್ವತಂತ್ರ ಪ್ರಾದೇಶಿಕ ಪಕ್ಷವನ್ನು ರಚಿಸುವ ಅವರ ಯೋಜನೆ ಇನ್ನೂ ಕಾರ್ಯಗತವಾಗಿಲ್ಲ. ಒಂದು ವೇಳೆ ಆಕೆ ಪ್ರಾದೇಶಿಕ ಪಕ್ಷವನ್ನು ಕಟ್ಟಿದರೆ, ಬಿಜೆಪಿ ಜತೆ ಕೂಡಿಕೊಂಡು ಕೆಲಸ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಇದು ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಒಂದು ಅಪಾಯಕಾರಿ ವಿದ್ಯಮಾನ ಆಗಲಿದೆ.

ಬಿಹಾರದಲ್ಲಿ ಮತಪ್ರದರ್ಶಕರ ಮೇಲೆ ಗೋಲಿಬಾರ್

ಭೂ ಸುಧಾರಣೆ ವಿಚಾರದಲ್ಲಿ ಚರ್ಚೆ ನಡೆಸಲು ಬಿಹಾರ ವಿಧಾನಸಭೆಯ ಅಧಿವೇಶನವನ್ನು ತುರ್ತಾಗಿ ಕರೆಯಬೇಕೆಂಬ ಬೇಡಿಕೆ ಮುಂದಿಟ್ಟು ಸಿಪಿಐ(ಎಂ) ಮತ್ತು ಇಂಡಿಯನ್ ಪೀಪಲ್ಸ್ ಫ್ರಂಟ್(ಐಪಿಎಫ್) ಅಕ್ಟೋಬರ್ 30 ರಂದು ರಾಜಧಾನಿ ಪಾಟ್ನಾದಲ್ಲಿ ಮತಪ್ರದರ್ಶನವನ್ನು ಏರ್ಪಡಿಸಿದ್ದವು. ಚಳುವಳಿಗಾರರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿ ಗುಂಡು ಹಾರಿಸಿದಾಗ ಒಬ್ಬ ಮತಪ್ರದರ್ಶಕ ಅಸು ನೀಗಿದನು.

ಈ ಘಟನೆಯನ್ನು ಸಿಪಿಐ(ಎಂ)ನ ಬಿಹಾರ ರಾಜ್ಯ ಕಾರ್ಯದರ್ಶಿ ಮಂಡಳಿ ಉಗ್ರವಾಗಿ ಖಂಡಿಸಿದೆ. ಸರಕಾರದ ಹಾಗೂ ಪೋಲೀಸರ ಅವಿವೇಕ ಹಾಗೂ ದೌರ್ಜನ್ಯದಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಬಳಸಿಕೊಂಡು ರಾಜ್ಯದ ಜನತಾದಳ ಸರಕಾರವನ್ನು ಅಸ್ಥಿರಗೊಳಿಸಲು ಕಾಂಗ್ರೆಸ್ ಮತ್ತು ಬಿಜೆಪಿ ಪ್ರಯತ್ನಿಸುತ್ತಿರುವುದನ್ನು ಪಕ್ಷ ಗಮನ ಸೆಳೆದಿದೆ.

ಬಿಹಾರದಲ್ಲಿ ಭೂಮಿ ಹೋರಾಟ ನಡೆಸಲು ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಜತೆ ಸೇರಲು ತಾನು ಸಿದ್ಧ ಎಂದು ಐ.ಪಿ.ಎಫ್ ಕಳೆದ ವರ್ಷ ಹೇಳಿತ್ತು. ಭೂ ಸುಧಾರಣೆ ಕಾನೂನುಗಳ ಜಾರಿಗಾಗಿ ಈ ಹೋರಾಟವನ್ನು ರೂಪಿಸಲಾಗಿತ್ತು. ಆದರೆ ತನ್ನ ಆಶ್ವಾಸನೆಯಿಂದ ಹಿಂದೆ ಸರಿದ ಐ.ಪಿ. ಎಫ್. ಜಮೀನು ರಾಷ್ಟ್ರೀಕರಣ ಬೇಡಿಕೆಯನ್ನು ಮುಂದಿಟ್ಟಿತು. ಇದರಿಂದಾಗಿ ಅದು ಕೃಷಿ ಕಾರ್ಮಿಕರು ಮತ್ತು ರೈತ ಸಮುದಾಯದಿಂದ ದೂರಸರಿದು ಹಾಗೂ ಅವರ ಜನಬೆಂಬಲ ಕ್ಷೀಣವಾಯಿತು.

ಇನ್ನೊಂದೆಡೆ, ಸಿಪಿಐ(ಎಂ) ಸರಿಯಾದ ಘೋಷಣೆ ಆಧಾರದಲ್ಲಿ ಯಶಸ್ವಿಯಾಗಿ ಹೋರಾಟವನ್ನು ಸಂಘಟಿಸಿದೆ. ಭಾರೀ ಪ್ರಮಾಣದ ಸಂಘರ್ಷ ಮುಂದುವರೆದಿದೆ. (ಈ ಬಗ್ಗೆ 'ಐಕ್ಯರಂಗ' ಹಲವು ಲೇಖನಗಳನ್ನು ಪ್ರಕಟಿಸಿದೆ) ಹೋರಾಟದಲ್ಲಿ ಸಿಪಿಐ(ಎಂ)ನ 15 ಸಂಗಾತಿಗಳು ಹುತಾತ್ಮರಾಗಿದ್ದಾರೆ. ಕಳೆದ ಒಂದು ವರ್ಷದಲ್ಲಿ ಇಪ್ಪೊಂದು ಮಂದಿ ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳ ಲಕ್ಷಾಂತರ ಜನರು ಸಿಪಿಐ(ಎಂ)ನ ಭೂ ಸುಧಾರಣೆಯ ಘೋಷಣೆಯನ್ನು ಅಂಗೀಕರಿಸಿ ಚಳುವಳಿಗೆ ಧುಮುಕಿದ್ದಾರೆ. ಭಾರೀ ಯಶಸ್ಸುಗಳನ್ನು ಗಳಿಸಿದ್ದಾರೆ. ಆದರೆ ದುರದೃಷ್ಟಕರ ಸಂಗತಿ ಎಂದರೆ ಐ.ಪಿ.ಎಫ್ ಭೂಮಾಲಕರ ವಿರುದ್ಧ ಹೋರಾಡುವುದನ್ನು ಬಿಟ್ಟು ಸಿಪಿಐ(ಎಂ) ಮೇಲೆ ತನ್ನ ದಾಳಿಯನ್ನು ಕೇಂದ್ರೀಕರಿಸಿದೆ. ಅದು ಹತಾಶೆಯಿಂದ ಈ ರೀತಿಯ ಕೃತ್ಯದಲ್ಲಿ ತೊಡಗಿದೆ. ದರ್ಭಾಂಗ ಪ್ರಕರಣ ಅದಕ್ಕೆ ಉತ್ತಮ ಉದಾಹರಣೆ.

ಯೋಜನಾ ವಿಕೇಂದ್ರೀಕರಣ ಒಂದು ಅಪೂರ್ವ ಕ್ರಮ

ಅಧಿಕಾರ ವಿಕೇಂದ್ರೀಕರಣ ವಿ... ದಲ್ಲಿ, ಆ ಬಗ್ಗೆ ಯಾವಾಗಲು 'ಜಪ' ಮಾಡು... ರುವ ಕಾಂಗ್ರೆಸ್ ಮತ್ತು ಇತರ ಪಕ್ಷಗಳಿಗಿಂತಲೂ ಮುಂದಿರುವುದು ಎಡ ಪಕ್ಷಗಳು ಎಂಬು... ವಾಸ್ತವವಾಗಿದೆ. ಪಶ್ಚಿಮ ಬಂಗಾಳದ ... ರಂಗ ಸರಕಾರ ಅರ್ಥಪೂರ್ಣವಾಗಿ ಅಧಿಕಾ... ವಿಕೇಂದ್ರೀಕರಣವನ್ನು ಮಾಡಿದೆ. ಯೋಜ... ವಿಕೇಂದ್ರೀಕರಣ ಇದರ ಅಂಗವಾಗಿದೆ.

ಈ ಯೋಜನಾ ವಿಕೇಂದ್ರೀಕರಣ... ಅನುಷ್ಠಾನಗೊಳಿಸಲು ರಾಜ್ಯ ಸರಕಾರ ಹಲ... ಕ್ರಮಗಳನ್ನು ಕೈಗೊಂಡಿದೆ. ಜಿಲ್ಲಾ ಮಟ... ಳಲ್ಲಿ ಚುನಾಯಿತ ಪಂಚಾಯತುಗಳೇ ಇ... ಮುಂದೆ ತೆರಿಗೆ ಸಂಗ್ರಹ ಮಾಡಲಿವೆ.

ತೆರಿಗೆ ಸಂಗ್ರಹಕ್ಕಾಗಿ ಪಂಚಾಯ... ಮಟ್ಟದ ಪ್ರತಿಯೊಬ್ಬ ಸದಸ್ಯರಿಗೆ ತರಬೇ... ನೀಡಲು ಸರಕಾರ ನಿರ್ಧರಿಸಿದೆ. ಈ ವಿಷ... ವನ್ನು ಎಡರಂಗ ಸರಕಾರದ ಹಣಕಾಸು ಸಚ... ಡಾ. ಅಶಿಮ್ ದಾಸ್ ಗುಪ್ತಾ ತಿಳಿಸಿದ್ದಾರೆ.

ಈಗ ಸದ್ಯಕ್ಕೆ ಪಂಚಾಯತ್‌ಗಳ... ವಾಹನ ತೆರಿಗೆ, ಸ್ಟ್ಯಾಂಪ್ ಡ್ಯೂಟಿ ಹಾಗ... ನೊಂದಣೆ ಶುಲ್ಕ ಮತ್ತು ಕಲ್ಲಿದ್ದಲು ಬಿಟ್ಟು ಉ... ದೆಲ್ಲ ಖನಿಜಗಳ ಮೇಲಿನ ರಾಯಲ್ಟಿ ಹೀ... ನಾಲ್ಕು ಮುಖ್ಯ ತೆರಿಗೆಗಳನ್ನು ಸಂಗ್ರಹಿಸು... ಜವಾಬ್ದಾರಿಯನ್ನು ನೀಡಲಾಗುತ್ತದೆ. ಹೀಗಾ... ಈ ಎಲ್ಲಾ ತೆರಿಗೆಗಳು ತಳ ಮಟ್ಟದಲ್ಲಿ ಸಂಗ... ಆಗಲಿವೆ.

ಯಾವುದೇ ಜಿಲ್ಲೆ ತೆರಿಗೆ ಸಂಗ್ರಹದ ಮಿ... ಯನ್ನು ಮೀರಿದ ಸಾಧನೆ ಮಾಡಿದರೆ ಅ... ಜಿಲ್ಲೆಗೆ ಹೆಚ್ಚಿನ ಹಣವನ್ನು ಅಭಿವೃದ್ಧಿ ಕಾ... ಗಳಿಗಾಗಿ ನೀಡಲಾಗುತ್ತದೆ.

ಅಭಿವೃದ್ಧಿಗಾಗಿ ಹಣವನ್ನು ಕ್ರೋಢೀ... ಸುವುದರಲ್ಲಿ ಹಾಗೂ ಅಭಿವೃದ್ಧಿ ಕಾರ್ಯಗಳ... ಕೈಗೆತ್ತಿಕೊಳ್ಳುವುದೆರಡರಲ್ಲೂ ಪಂಚಾಯತ... ಳನ್ನು ಒಳಗೊಳಿಸಲು ಸಿಪಿಐ(ಎಂ) ನೇತೃತ್ವ... ಸರಕಾರ ನಿರ್ಧರಿಸಿದೆ.

ರಾಜಕೀಯ ಇಚ್ಛಾಶಕ್ತಿಯ ಪರಿಣಾ... ಇದು ಇನ್ನೊಂದು ಸೇರ್ಪಡೆ ಅಲ್ಲವೆ?

ಬೀಡಿ ಕಾರ್ಮಿಕರ ಸಮಾವೇಶ

ಮೂಡಬಿದ್ರೆ: ಈ ಪ್ರದೇಶದ ಬೀಡಿ ಕಾರ್ಮಿಕರ ಸಮಾವೇಶವು 1.10.93ರಂದು ಬೆಳಿಗ್ಗೆ 10ಗಂಟೆಗೆ ಬ್ರಹ್ಮಶ್ರೀ ಗುರುನಾರಾಯಣ ಸೇವಾ ಸಂಘದಲ್ಲಿ ಯು.ಬಿ. ಲೋಕಯ್ಯ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಮುಖ್ಯ ಅತಿಥಿಗಳಾಗಿ ಕೇಂದ್ರ ಸರಕಾರದ ಕಾರ್ಮಿಕ ಶಿಕ್ಷಣ ಅಧಿಕಾರಿಯಾದ ಲೋಕಯ್ಯ ಶೆಟ್ಟಿ, ದ.ಕ. ಜಿಲ್ಲಾ ಬೀಡಿ ಫೆಡರೇಶನ್ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಕುಪ್ಪೆಪದವು ಬೀಡಿ ಕೆಲಸಗಾರರ ಸಂಘದ ಕೋಶಾಧಿಕಾರಿ ಸದಾಶಿವ ದಾಸ್ ಭಾಗವಹಿಸಿದ್ದರು.

ಲೋಕಯ್ಯ ಶೆಟ್ಟಿಯವರು ಬೀಡಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಕಾನೂನು ರೀತಿಯ ಸಲಹೆ ಸೂಚನೆಗಳನ್ನು ನೀಡಿದರು. ಜೆ. ಬಾಲಕೃಷ್ಣ ಶೆಟ್ಟಿ ಮಾತನಾಡುತ್ತಾ ಬೀಡಿ ಕಾರ್ಮಿಕರು ನಲವತ್ತು ರೂಪಾಯಿ ಮಜೂರಿ ಪಡೆಯುವ ಹೋರಾಟದ ಅಂಗವಾಗಿ ಬೋನಸ್ಸಿಗಾಗಿ ಇದೇ ಬರುವ 14ರಂದು ನಡೆಯುವ ಒಂದು ದಿನದ ಮುಷ್ಕರ ಮತ್ತು ಪ್ರದರ್ಶನದಲ್ಲಿ ಭಾಗವಹಿಸಬೇಕೆಂದು ವಿನಂತಿಸಿದರು. ಸದಾಶಿವ ದಾಸ್‌ರವರು ಮಾತನಾಡಿ ಬೀಡಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಂಘಟನೆಯನ್ನು ಬಲಪಡಿಸಬೇಕೆಂದು ಹೇಳಿದರು.

ಅಧ್ಯಕ್ಷಸ್ಥಾನದಿಂದ ಯು.ಬಿ. ಲೋಕಯ್ಯ ಶೆಟ್ಟಿಯವರು ಮಾತನಾಡಿ ಕಾರ್ಮಿಕರು ಒಟ್ಟಾಗಿ ಹೋರಾಟ ಮಾಡಿದರೆ ಮಾತ್ರ ನಮ್ಮ ಈಗಿನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯ ಎಂದರು.


ಸಂಘದ ಕಾರ್ಯದರ್ಶಿ ಕೆ.ರಮಣಿಯವರು ಸ್ವಾಗತಿಸಿ ವಂದಿಸಿದರು.

ಬಿಜೆಪಿ ಕಾರ್ಯಕರ್ತನ ದಾಂಧಲೆ, ಗೂಂಡಾಗಿರಿ

ಮತ್ತೂರು(ಶಿವಮೊಗ್ಗ) : ಗ್ರಾಮದಲ್ಲಿ ತಂಜನ್ ಎಂಬ ಪ್ರಾಂತ ರೈತ ಸಂಘದ ಕಾರ್ಯಕರ್ತನನ್ನು ಬಿಜೆಪಿ ಕಾರ್ಯಕರ್ತ ಸಿ.ಗೋಪಾಲ ಎಂಬುವನು ರಸ್ತೆಯಲ್ಲಿ ಮನಬಂದಂತೆ ಥಳಿಸಿ, ಮಚ್ಚಿನಿಂದ ತಲೆಗೆ ತೀವ್ರತರವಾದ ಗಾಯ ಮಾಡಿ, ಕೈ ಬೆರಳುಗಳನ್ನು ಕತ್ತರಿಸಿ ಹಾಕಿರುವ ಅಮಾನವೀಯ ಘಟನೆ ವರದಿಯಾಗಿದೆ.

ಕರ್ನಾಟಕದಲ್ಲಿ ಮುಂದಿನ ಆಡಳಿತ ಪಕ್ಷ ತಾವೇ ಎನ್ನುವ ಪಕ್ಷದ ಕಾರ್ಯಕರ್ತರ ಗೂಂಡಾಗಿರಿ, ದಾಂಧಲೆ ಇನ್ನು ಅಧಿಕಾರಕ್ಕೆ ಬರದಿರುವಾಗಲೇ ಹೀಗಿರುವಾಗ ಅಧಿಕಾರಕ್ಕೆ ಬಂದರೆ? ನಿಜಕ್ಕೂ ಅನಾಗರೀಕ ವರ್ತನೆಗಳು ಹೆಚ್ಚಾಗಬಹುದು ಎಂಬುದಕ್ಕೆ ಈ ಘಟನೆಯೇ ಸಾಕ್ಷಿ.

ಈ ಘಟನೆಯ ಹಿನ್ನೆಲೆ ಹೀಗಿದೆ : ಶಿವಮೊಗ್ಗ ದ ಮತ್ತೂರಿನಲ್ಲಿ ಬಿಜೆಪಿ ಕಾರ್ಯಕರ್ತರೇ ಹೆಚ್ಚಾಗಿದ್ದು ಅವರ ಪುಂಡಾಟಿಕೆ, ದಾಂಧಲೆ ಹೇಳತೀರದ್ದಾಗಿದೆ. ಊರಿನ ಕೆಲವು ಗೌಡರನ್ನು ಬಿಟ್ಟರೆ ಇನ್ನಿತರೆ ಊರಿನ ಮುಖಂಡರು ಬಿಜೆಪಿಯವರೇ ಆದ್ದರಿಂದ ಇಲ್ಲಿ ನ್ಯಾಯವನ್ನು ಕೇಳುವವರೇ ಇಲ್ಲವಾಗಿದೆ. ಬಡರೈತರು, ಕೃಷಿ ಕೂಲಿಗಾರರು ಬದುಕಲು ಕಷ್ಟವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಾಂತ ರೈತ ಸಂಘದ ಸದಸ್ಯರಾದವರನ್ನು ಕೂಲಿಗೆ ಕರೆಯದೆ ಅವರನ್ನು ಪ್ರಾಂತ ರೈತ ಸಂಘಕ್ಕೆ ಯಾಕೆ ಸದಸ್ಯರಾದಿರಿ. ಆದ್ದರಿಂದಲೇ ಇಲ್ಲಿ ನಿಮಗೆ ಕೆಲಸ ಇಲ್ಲ ಎಂಬ ತಮ್ಮ ಪ್ರಜಾಪ್ರಭುತ್ವವಿರೋಧಿ ನಿಜರೂಪವನ್ನು ತೋರಿಸುತ್ತಿದ್ದಾರೆ. ಪ್ರಾಂತ ರೈತ ಸಂಘವು ಬೆಳೆದರೆ ತಮ್ಮ ಅಸ್ತಿತ್ವಕ್ಕೆ ಕುತ್ತು ಹಾಗೂ ತಾವು ಈ ರೀತಿ ಜನರನ್ನು ಶೋಷಿಸಲಾಗುವುದಿಲ್ಲ ಎಂಬು ತಿಳಿದ ಈ ಮುಖಂಡರು ಈ ರೀತಿಯ ಅಮಾನವೀಯ ಬಿಜೆಪಿಯ ನಿಜಸ್ವರೂಪವನ್ನು ಜನರ ಮುಂದೆ ಈಗಲೇ ಬಿಚ್ಚಿಡುತ್ತಿದ್ದಾರೆ. ಈ ಸ್ವಯಂ ಘೋಷಿತ ಮುಖಂಡರೆಂದೆನಿಸಿಕೊಳ್ಳುವ ಕೆಲವು ಜನರು ಯಲ್ಲಪ್ಪ ಶ್ರೀಮತಿ ಗಂಗೂಬಾಯಿ ಇವರಿಗೆ ಜಗಳವಕಾರಣ ಒಡ್ಡಿ ನ್ಯಾಯಾಲಯದ ಅಧಿಕಾರವನ್ನು ತಾವೇ ಚಲಾಯಿಸುವುದು ಎಂಬಂತೆ ವರ್ತಿಸಿ 501 ಹಾಗೂ 301 ರೂಗಳನ್ನು ದಂಡ ವಿಧಿಸಿದ್ದರು. ಹಲ್ಲೆಗೊಳಗಾದ ತಂಜನ್ ಇವಕ್ಕೆ ಜಾಮೀನಾಗಿದ್ದರು. ತಂಜನ್ ಸಕಾಲಕ್ಕೆ ಹಣ ಒದಗಿಸಲಿಲ್ಲವೆಂಬ ಕಾರಣಕ್ಕೆ ಬಿಜೆಪಿಯ ಮುಖಂಡರ ಕುಮ್ಮಕ್ಕಿನಿಂದ ಆ ಪಕ್ಷದ ಕಾರ್ಯಕರ್ತ ಸಿ. ಗೋಪಾಲ್ ಎಂಬುವನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾನೆ. ಈ ಬಿಜೆಪಿ ಕಾರ್ಯಕರ್ತನನ್ನು ಬಂಧಿಸಿದ ನಾಟಕವಾಡಿದ ಪೋಲೀಸರು ಕೇವಲ ಎರಡು ಗಂಟೆಗಳ ನಂತರ ಬಿಡುಗಡೆ ಮಾಡಿರುವುದು ನಿಜಕ್ಕೂ ಆ ಗ್ರಾಮದ ಜನರಲ್ಲಿ ಭಯದ ವಾತಾವರಣ ಉಂಟು ಮಾಡಿದೆ. ಈ ಗೋಪಾಲನೆಂಬ ಬಿಜೆಪಿ ಕಾರ್ಯಕರ್ತನನ್ನು ಉಳಿಸಲು ಬಿಜೆಪಿ ಮುಖಂಡರು ಒತ್ತಡ ತಂದಿರುವುದು ಈಗ ಒಳಗುಟ್ಟೇನೂ ಅಲ್ಲ. ಈ ಸಂಬಂಧ ಯಾವುದೇ ಒತ್ತಡಕ್ಕೆ ಮಣಿಯದೆ ...



ಸಿ. ಗೋಪಾಲ್ ಎಂಬುವನನ್ನು ಕಠಿಣ ಶಿ... ಗುರಿಪಡಿಸಬೇಕೆಂದು ಶಿವಮೊಗ್ಗ ಪ್ರಾಂತ ರೈ... ಸಂಘವು ಪ್ರತಿಭಟನೆ ಸಲ್ಲಿಸಿ ಈ ಅಮಾ... ವೀಯ ಕ್ರಮವನ್ನು ಖಂಡಿಸಿದೆ. ತಪ್ಪಿತ... ರಿಗೆ ಕಾನೂನಿ ಶಿಕ್ಷೆ ನೀಡದಿದ್ದಲ್ಲಿ ಶಿವಮೊ... ಪ್ರಾಂತ ರೈತ ಸಂಘವು ಈ ಘಟನೆಯ ವಿರು... ಚಳುವಳಿಯನ್ನು ನಡೆಸಲಾಗುವುದೆಂದು ಎ... ರಿಕೆ ನೀಡಿದೆ.

ಗುಲ್ಬರ್ಗಾ ಜಿಲ್ಲೆಯ ನೀರಾವರಿಯ ಯೋಜನೆಗಳು ಮತ್ತು ಭವಿಷ್ಯ ಕುರಿತು ಬೃಹತ್ ರೈತರ ಸಮಾವೇಶ

ದಿನಾಂಕ 29-10-93ರಂದು ಗುಲ್ಬರ್ಗಾ ಜಿಲ್ಲೆಯ ವೀರಶೈವ ಕಲ್ಯಾಣ ಮಂಟಪದಲ್ಲಿ ಗುಲ್ಬರ್ಗಾ ಜಿಲ್ಲೆಯ ನೀರಾವರಿಯ ಯೋಜನೆಗಳ ಭವಿಷ್ಯ ಕುರಿತು ಬೃಹತ್ ಸಮಾವೇಶ ಜರುಗಿತು. ಸಮುದಾಯದ ಕಲಾವಿದರಾದ ಶಂಕರಯ್ಯಾ ಘಂಟಿ ಹಾಗೂ ಸಂಗಡಿಗರ ಸ್ವಾಗತ ಗೀತೆಯೊಂದಿಗೆ ಸಭೆಯು ಪ್ರಾರಂಭವಾಯಿತು. ಜಿಲ್ಲೆಯ ಹಲವಾರು ವರ್ಷಗಳಿಂದ ನೊಂದ ರೈತರ ಈ ಸಮಾವೇಶದಲ್ಲಿ ಗುಲ್ಬರ್ಗಾ ಜಿಲ್ಲೆಯ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಕುರಿತು ಹಲವಾರು ವಿಷಯಗಳನ್ನು ಚರ್ಚಿಸಿತು. ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ಈ ಸಮಾವೇಶದ ಅಧ್ಯಕ್ಷತೆಯನ್ನು ನೀತಿಕಂಠ ಬಡಕಲ್ ಅವರು ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಹಿರಿಯ ಮುಖಂಡರಾದ ಎನ್.ಕೆ. ಉಪಾಧ್ಯಾಯ ಅವರು ಮಾತನಾಡುತ್ತಾ ಹತ್ತಾರು ವರ್ಷಗಳ ಹಿಂದೆಯೇ ಅಡಿಗಲ್ಲು ಹಾಕಿದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪ ಅವರು ಹಾಗೂ ಅವರ ನಂತರದ ಮುಖ್ಯಮಂತ್ರಿ ಇದೇ ಭಾಗದವರಾದ ವೀರೇಂದ್ರಪಾಟೀಲರು ಜಿಲ್ಲೆಯ ನೀರಾವರಿ ಯೋಜನೆ ಪೂರ್ತಿ ಮಾಡಲು ವಿಶೇಷ ಆಸಕ್ತಿ ವಹಿಸದೇ ಇದ್ದಿರುವುದೇ ಈಗಿನ ಪರಿಸ್ಥಿತಿಗೆ ಕಾರಣವಾಗಿದೆ ಎಂದರು. ಇನ್ನೊಬ್ಬ ರೈತ ಸಂಘದ ಮುಖಂಡರಾದ ಜಿ.ಎನ್. ನಾಗರಾಜ್ ಅವರು ಕೇಂದ್ರ ಸರಕಾರದ ಐಎಂಎಫ್ ಎಂಬ ವಿಶ್ವ ಮಾರವಾಡಿಗಳ ಸಾಲದ ಶರತ್ತುಗಳಿಗೆ, ಡಂಕೆಲ್ ಪ್ರಸ್ತಾವಗಳಿಗೆ ತಲೆಬಾಗಿ ಇಡೀ ರೈತಾಪಿ ಜನತೆಯನ್ನೇ ಕೃಷಿ ಅಭಿವೃದ್ಧಿಯನ್ನೇ ಬಲಿ ಕೊಡುತ್ತಿರುವಂತೆ, ನೀರಾವರಿಯ ಮೇಲೂ ಕೊಡಲಿ ಪೆಟ್ಟು ಹಾಕಿದೆ. ನೀರಾವರಿಯ ಅಭಿವೃದ್ಧಿಗೂ ರೈತರ ಒಟ್ಟಾರೆ ಅಭಿವೃದ್ಧಿಗೂ ಈ ಸಾಲ ಹಾಗೂ ಶರತ್ತುಗಳು ತುತ್ತಾಗಿವೆ. ಕಳೆದ ನಲವತ್ತು ಕೇಂದ್ರ ರಾಜ್ಯ ಸರಕಾರಗಳು ಅಧಿಕಾರಸ್ತ ರಾಜಕಾರಣಿಗಳು ತೋರಿದ ದಿವ್ಯ ನಿರ್ಲಕ್ಷಕ್ಕೆ ಜಿಲ್ಲೆಯ ರೈತರು ಸಿಡಿದೆದ್ದು ಹೋರಾಟಕ್ಕಿಳಿಯುವುದೊಂದೇ ದಾರಿ ಎಂದರು. ನಾಗೇಂದ್ರ ಪಾಟೀಲ, ಜಂಬಗಾ, ನಾಗೇಂದ್ರಪ್ಪಾ ಅವರಾದಿ, ರಾಜಶೇಕರ ಜಕ್ಕಾ ಮೊದಲಾದ ಒಟ್ಟು 8 ಜನ ರೈತ ಮುಖಂಡರು ಜಿಲ್ಲೆಯ ನೀರಾವರಿಯ ಯೋಜನೆಗಳ ಕುರಿತು ನಿರ್ಣಯ ಮಂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನೀತಿಕಂಠ ಬಿಡಕಲ ಅವರು ಗುಲ್ಬರ್ಗಾ ಜಿಲ್ಲೆಯ ನೀರಾವರಿ ಯೋಜನೆಗಳು ತೀವ್ರಗತಿಯಲ್ಲಿ ಕಾರ್ಯಗತವಾದರೆ ಕರ್ನಾಟಕ ಪಂಜಾಬಾಗುತ್ತದೆ. ಒಂದು ವೇಳೆ ಆಗದೇ ಹೋದರೆ ರಾಜಾಸ್ತಾನದ ಮರುಭೂಮಿಯಾಗುತ್ತದೆ ಎಂದರು. ಈ ಯೋಜನೆಗಳು ಪೂರ್ತಿಯಾಗುವವರೆಗೂ ಹೋರಾಟ ಬಿಡುವುದಿಲ್ಲ ಎಂದರು.

ಈ ಸಮಾವೇಶವು ಕರ್ನಾಟಕ ಪ್ರಾಂ... ರೈತ ಸಂಘದ ನೇತೃತ್ವದಲ್ಲಿ ಹೋರಾಟ ಸ... ತಿಯ ರಚನೆ, ಹಳ್ಳಿ ಹಳ್ಳಿಗಳಲ್ಲಿ ಪ್ರಸಾರ, ಶಾ... ಕರುಗಳ, ಮಂತ್ರಿಗಳಿಗೆ ಬಹಿರಂಗ ಪ್ರ... ಘೇರಾವ್, ರಸ್ತಾ ರೋಕೋ, ಗುಲ್ಬರ್ಗಾ ಬಂದ್ ಹೀಗೆ ಹಲವಾರು ಸ್ಥರದಲ್ಲಿ ಕಾರ್ಯ... ಕ್ರಮ ಹಾಕಿಕೊಂಡಿದೆ. ಈ ಹೋರಾಟದ... ಜಿಲ್ಲೆಯ ಎಲ್ಲ ರೈತರು ಯಾವುದೇ ಬೇಧ ಭಾವ... ವಿಲ್ಲದೆ ಜಿಲ್ಲೆಯ ಸರ್ವತೋಮುಖ ಬೆಳವಣಿ... ಗಾಗಿ ಒಂದಾಗಬೇಕೆಂದು ಪ್ರಾಂತ ರೈತ ಸಂಘ... ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ ಮಾರು... ಮಾನ್ವಡೆ ಕೋರಿದ್ದಾರೆ. ಬಸವರಾಜ ಮರ... ಅವರ ವಂದನಾರ್ಪಣೆಯೊಂದಿಗೆ ಈ ಕಾರ್ಯ... ಕ್ರಮ ಮುಕ್ತಾಯವಾಯಿತು.

ಶ್ಚಿಮ ಯುರೋಪಿನ 'ಕಾಶ್ಮೀರ' - ಉತ್ತರ ಐರ್ಲೆಂಡಿನಲ್ಲಿ ಬಾಂಬ್ ಕಾಂಡ



--ಶರತ್ ಚಂದ್ರ

ಕಾಶ್ಮೀರದಲ್ಲಿ 'ಮಾನವ ಹಕ್ಕುಗಳ ಮನ', 'ಸ್ವಯಂ-ನಿರ್ಧಾರದ ಹಕ್ಕು'ಗಳ ಗೆ ಮಾತನಾಡುವ ಬಿಬಿಸಿ ಇತ್ಯಾದಿ ಪಾಶ್ಚಿ ತ್ಯ ಮಾಧ್ಯಮಗಳು ಅವರ ಹಿತ್ತಲಲ್ಲೇ ತ್ತಿ ಉರಿಯುತ್ತಿರುವ ಉತ್ತರ ಐರ್ಲೆಂಡಿನ ಮಸ್ಯೆ ಬಗ್ಗೆ ಚಕಾರವೆತ್ತುವುದಿಲ್ಲ. ಭಾರಿ ಸಾಚಾರಗಳಾದಾಗ ಬಿಟ್ಟರೆ. ಇತ್ತೀಚೆಗೆ ತಹ ಘಟನೆಗಳು ನಡೆದವು. ಕಾಶ್ಮೀರ ಮಸ್ಯೆಗೂ ಉತ್ತರ ಐರ್ಲೆಂಡಿನ ಸಮ ಗೂ ಬಹಳ ಆಸಕ್ತಿಕಾರಕ ಸಾಮ್ಯಗಳಿವೆ. ತ್ಯಾಸಗಳೂ ಇವೆ ನಿಜ.

ಎರಡೂ ಸಮಸ್ಯೆಗಳೂ ಹಲವಾರು ಶಕಗಳಿಂದ ಹತ್ತಿ ಉರಿಯುತ್ತಿರುವ ಸಮ ಗಳು. ಎರಡೂ ಸಮಸ್ಯೆಗಳು ಬ್ರಿಟಿಷ್ ಮ್ರಾಜ್ಯಶಾಹಿ ಧರ್ಮ ಮತ್ತು ಜನಾಂಗ ತ್ಯಾಸಗಳನ್ನು ಬಳಸಿ ಜನರನ್ನು ಒಡೆದು ಳುವ ನೀತಿಯ ಫಲ. ಇಡೀ ದೇಶದಲ್ಲಿ ಲ್ಪಸಂಖ್ಯಾತರಾಗಿರುವ ಒಂದು ಧರ್ಮದ ನ ಒಂದು ಪ್ರಾಂತ್ಯದಲ್ಲಿ ಬಹುಸಂಖ್ಯಾತ ಗಿರುವಾಗ ಆ ಪ್ರಾಂತ್ಯ ಪ್ರತ್ಯೇಕವಾಗಬ ಸುವುದು ಪರಿಹಾರವೇ? ಅದರಲ್ಲೂ ಪ್ರಾಂತ್ಯದ ಅಲ್ಪಸಂಖ್ಯಾತರು(ದೇಶದಲ್ಲಿ ಹುಸಂಖ್ಯಾತರು) ಅದನ್ನು ವಿರೋಧಿಸಿ ರೆ!

20ನೇ ಶತಮಾನದ ಆದಿಯಲ್ಲಿ ಟನ್ ಜನಾಂಗ, ಧರ್ಮದ ದೃಷ್ಟಿಯಿಂದ ರೂಪದ್ದಾಗಿರಲಿಲ್ಲ. ಬ್ರಿಟನ್‌ನಲ್ಲಿ ಂಗ್ಲೆಂಡ್, ಸ್ಕಾಟ್‌ಲ್ಯಾಂಡ್‌ವೆಲ್ಸ್, ಐರಿಶ್ ನಾಂಗದವರಿದ್ದರು. ಇಂಗ್ಲಿಷ್, ಸ್ಕಾಟ್, ಾಗೂ ವೆಲ್ಸ್ ಬಹಳ ಮಟ್ಟಿಗೆ ಪ್ರಾಟೆ ಸ್ಟ್ ಕ್ರಿಶ್ಚಿಯನ್ನರು. ಐರಿಶ್ ಜನ ಬಹಳ ಟ್ಟಿಗೆ ಕ್ಯಾಥೋಲಿಕ್ ಕ್ರಿಶ್ಚಿಯನ್ನರು. ಯುರೋಪಿನಲ್ಲಿ ಪ್ರಾಟೆಸ್ಟಂಟ್ ಹಾಗೂ ಥೋಲಿಕ್‌ರ ನಡುವೆ ಇಬ್ಬರೂ ಕ್ರಿಶ್ಚಿಯ ರಾದರೂ, ಬೇರೆ ಧರ್ಮವೋ ಎನೋ ನ್ನುವಷ್ಟು ದೊಡ್ಡ ಕಂದಕವಿದೆ. ಶತಮಾ ಗಳ ಕಾಲ ಘರ್ಷಣೆಯ ಇತಿಹಾಸದಿಂ ಗಿ, ಇವರ ನಡುವೆ ಬಿಗುವು ಅವಿ ಸ ಸಾಮಾನ್ಯ. ಐರ್ಲೆಂಡ್ ಒಂದು ತ್ಯೇಕ ದ್ವೀಪದಲ್ಲಿದೆ. ಇತರ ಪ್ರಾಂತ್ಯ ಳು ಇನ್ನೊಂದು ಮುಖ್ಯ ದ್ವೀಪದಲ್ಲಿದೆ. ರ್ಮ ಅಲ್ಲದೆ ಜನಾಂಗದ ಆಧಾರದ ೇಲೂ ಚಾರಿತ್ರಿಕ ಕಾರಣಗಳಿಗೆ ಬಿಗುವು, ವಿಶ್ವಾಸ, ಘರ್ಷಣೆ ಇದ್ದೇ ಇದೆ.

ಬ್ರಿಟನ್‌ನ ಜನಾಂಗಗಳಲ್ಲಿ ಇಂಗ್ಲಿಷ್ ನಾಂಗ ಪ್ರಭಲ ಜನಾಂಗವಾಗಿದ್ದು, ಅದು ಳಿದ ಜನಾಂಗಗಳನ್ನು ತನ್ನ ಅಧಿಪತ್ಯ ಲ್ಲಿ ಉಳಿಸಿಕೊಳ್ಳಬಯಸುತ್ತದೆ. ಇದರ ರುದ್ಧ ಹೋರಾಟ ಶತಮಾನಗಳದ್ದು. ನಾಂಗ, ಧರ್ಮ ಹಾಗೂ ಭೌಗೋಳಿ ಕಾಗಿಯೂ ಬೇರೆಯಾಗಿದ್ದ ಐರ್ಲೆಂಡ್ ಲ್ಲಿ ಇಂಗ್ಲಿಷ್ ಅಧಿಪತ್ಯದ ವಿರುದ್ಧ ಅತ್ಯಂತ ಪ್ರಬಲ ಚಳುವಳಿ ಕಂಡು ಬಂತು. ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದ ನಾಯಕರು, ಐರಿಶ್ ಹೋರಾಟದಿಂದ ಸ್ಫೂರ್ತಿ ಪಡೆದಿದ್ದು, ಅವರ ಜತೆ ಸೌಹಾರ್ದ ಸಂಬಂಧವಿಟ್ಟುಕೊಂಡಿದ್ದರು. ಐರಿಶ್ ಹೋರಾಟದ ಭಾಗವಾಗಿ 1919 ರಲ್ಲಿ ಐರಿಶ್ ರಿಪಬ್ಲಿಕನ್ ಆರ್ಮಿ(IRA) ಎಂಬ ಸಶಸ್ತ್ರ ಸಂಘಟನೆ ಹುಟ್ಟಿಕೊಂಡಿತು. ತೀವ್ರವಾಗಿ ಬೆಳೆಯುತ್ತಿದ್ದ ಐರಿಶ್ ಸ್ವಾತಂತ್ರ್ಯದ ಹೋರಾಟವನ್ನು ಕಂಡು ಬೆದರಿದ ಬ್ರಿಟಿಷ್ ಸಾಮ್ರಾಜ್ಯಶಾಹಿ ಸರಕಾರ ಐರ್ಲೆಂಡಿಗೆ 1921ರಲ್ಲಿ ಸ್ವಾತಂತ್ರ್ಯ ಕೊಡಲು ನಿರ್ಧರಿಸಿತು. ಆದರೆ ಈಗಿನ ಉರಿಯುತ್ತಿರುವ ಸಮಸ್ಯೆಯ ಬೀಜ ಬಿತ್ತಿದ್ದು ಆಗಲೇ. ಐರ್ಲೆಂಡಿನ ಉತ್ತರ ಭಾಗದ ಪ್ರಾಂತ್ಯದಲ್ಲಿ ಪ್ರೊಟೆಸ್ಟೆಂಟರು ಬಹುಮತದಲ್ಲಿರುವುದರಿಂದ ಆ ಪ್ರಾಂತ್ಯ ಬ್ರಿಟನ್‌ನಲ್ಲೇ ಉಳಿಯುತ್ತದೆ ಎಂದು ಕುಹಕವಾಡಿದರು.

ಅಲ್‌ಸ್ಟರ್ ಎಂದು ಕರೆಯಲಾಗುವ ಈ ಉತ್ತರ ಐರ್ಲೆಂಡ್‌ನ ಪ್ರಾಂತ್ಯದಲ್ಲಿ ಒಲಿವರ್ ಕ್ರಾಮ್‌ವೆಲ್‌ನ ರಿಪಬ್ಲಿಕನ್ ಸರಕಾರದ ಕಾಲದಲ್ಲಿ, ಆತನ ವಿರುದ್ಧವಿದ್ದ ಸ್ಕಾಟ್‌ರನ್ನು ಓಡಿಸಿದಾಗ, ಅವರು ಉತ್ತರ ಐರ್ಲೆಂಡಿನ ಪ್ರಾಂತ್ಯದಲ್ಲಿ ವಾಸವಾದರು. ಆ ಮೇಲಿನ ವಲಸೆ ಎಲ್ಲಾ ಸೇರಿ ಸ್ಥಳೀಯ ಐರಿಶ್ ಕ್ಯಾಥೋಲಿಕರು ಅಲ್ಪಸಂಖ್ಯಾತರಾದರು. 15 ಲಕ್ಷ ಆಲ್‌ಸ್ಟರ್ ಜನಸಂಖ್ಯೆಯಲ್ಲಿ 10 ಲಕ್ಷ ಐರಿಶ್ ಅಲ್ಲದ ಪ್ರಾಟೆಸ್ಟೆಂಟರು. ಐದು ಲಕ್ಷ ಸ್ಥಳೀಯ ಐರಿಶ್ ಕ್ಯಾಥೋಲಿಕರು.

ಈ ಪ್ರಾಂತ್ಯ ವಿವಾದಗ್ರಸ್ಥ ಪ್ರದೇಶವಾಗಿದೆ. ಐರ್ಲೆಂಡ್ ಹಾಗೂ ಬ್ರಿಟನ್ ಎರಡೂ ದೇಶಗಳು ಈ ಪ್ರಾಂತ್ಯ ತಮ್ಮ ದೇಶಕ್ಕೆ ಸೇರಬೇಕೆಂದು ವಾದಿಸುತ್ತವೆ. ಐರ್ಲೆಂಡ್ ಭೌಗೋಳಿಕವಾಗಿ ಒಂದೇ ದ್ವೀಪದಲ್ಲಿರುವುದರಿಂದ ಈ ಪ್ರಾಂತ್ಯ ತಮಗೆ ಸೇರಬೇಕೆಂದು ವಾದಿಸುತ್ತಾರೆ. ಈ ಪ್ರಾಂತ್ಯದ ಬಹುಸಂಖ್ಯಾತರು ಬ್ರಿಟನ್‌ನ ಭಾಗವಾಗಿ ಇರಬಯಸುತ್ತಾರೆ ಎಂದು ಬ್ರಿಟಿಷ್ ವಾದ. ಆದರೆ ಇದು ಎರಡೂ ದೇಶಗಳ ನಡುವೆ ಬರಿಯ ರಾಜಕೀಯ ಸಮಸ್ಯೆಯಾಗಿ ಉಳಿದಿಲ್ಲ. ಎರಡು ಜನಾಂಗ ಹಾಗೂ ಧರ್ಮಗಳ ಜನರ ನಡುವೆ ಘರ್ಷಣೆ, ಹಿಂಸಾಚಾರಕ್ಕೆ ಕಾರಣವಾಗಿದೆ. ಐಆರ್‌ಎ ಅಲ್‌ಸ್ಟರ್ ಐರ್ಲೆಂಡಿಗೆ ಸೇರಬೇಕೆಂದು ಸಶಸ್ತ್ರ ಹೋರಾಟ ನಡೆಸುತ್ತಿದೆ. ಬ್ರಿಟಿಷ್ ಸರಕಾರ ಈ ಪ್ರಾಂತ್ಯವನ್ನು ಆಳುವುದು ಅಸಾಧ್ಯ ಮಾಡುವ ರೀತಿಯಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸುತ್ತಿದೆ. ಅಲ್‌ಸ್ಟರ್‌ನ ಪ್ರೊಟೆಸ್ಟಂಟರು ಪ್ಯಾರಾ ಮಿಲಿಟರಿ ಗ್ಯಾಂಗ್‌ಗಳನ್ನು ಕಟ್ಟಿಕೊಂಡು ಐರಿಶ್ ಕ್ಯಾಥೋಲಿಕ್ ಅಲ್ಪಸಂಖ್ಯಾತರನ್ನು ದಮನಕ್ಕೊಳಪಡಿಸುತ್ತಿದ್ದಾರೆ. ಅವರು ಭಯದಿಂದ ಬದುಕುವಂತೆ ಆಗಿದೆ. ಭಯೋತ್ಪಾದಕ ಹಿಂಸಾಕಾಂಡದಿಂದ ಹಲವು ದಶಕಗಳಿಂದ ಇಲ್ಲಿಯ ಜನಜೀವನ ತತ್ತರಿಸಿದೆ.

1969ರವರೆಗೆ ಸ್ವಾಯತ್ತ ಪಾರ್ಲಿಮೆಂಟು ಇದ್ದ ಅಲ್‌ಸ್ಟರ್‌ನಲ್ಲಿ ಅದನ್ನು ಬರ್ಖಾಸ್ತು ಮಾಡಲಾಯಿತು. ಬ್ರಿಟನ್‌ನ ನೇರ ಆಡಳಿತ ಆರಂಭವಾಯಿತು. ಅಂದಿನಿಂದ ಹಿಂಸಾಕಾಂಡದಲ್ಲಿ ಈ ಚಿಕ್ಕ ಪ್ರಾಂತ್ಯ ಹತ್ತಿ ಉರಿಯುತ್ತಿದೆ. ಐಆರ್‌ಎ ಭಯೋತ್ಪಾದಕ ಕೃತ್ಯಗಳು(ಬಾಂಬ್ ದಾಳಿ ಇತ್ಯಾದಿ) ಒಂದು ಕಡೆ, ಪ್ರೊಟೆಸ್ಟೆಂಟರಿಂದ ಕ್ಯಾಥೋಲಿಕರ ಮೇಲೆ ದಬ್ಬಾಳಿಕೆ ಕಿರುಕುಳ ಇನ್ನೊಂದು ಕಡೆ, ಕಾನೂನು ಪಾಲನೆಯ ಹೆಸರಲ್ಲಿ ಬ್ರಿಟಿಷ್ ಸೈನ್ಯ ಹಾಗೂ ಪೋಲಿಸ್‌ರಿಂದ ಕ್ಯಾಥೋಲಿಕರ ಮೇಲೆ ದಬ್ಬಾಳಿಕೆ ಮತ್ತೊಂದು ಕಡೆ. 1969ರಿಂದೀಚೆಗೆ 3400 ಜನ ಈ ಹಿಂಸಾಕಾಂಡಕ್ಕೆ ಬಲಿಯಾಗಿದ್ದಾರೆ.

ಇತ್ತೀಚೆಗೆ ಅಕ್ಟೋಬರ್‌ನಲ್ಲಿ ನಡೆದ ಬಾಂಬ್ ದಾಳಿಯ ಸರಣಿ ಎಲ್ಲರನ್ನು ದಂಗುಬಡಿಸಿದೆ. ಎಲ್ಲರಿಗೂ ಆಶ್ಚರ್ಯವಾಗಿದ್ದು ಈ ಸಮಸ್ಯೆ ಬಗೆಹರಿಸಲು ಶಾಂತಿ ಮಾತುಕತೆಗಳು ನಡೆದು ಶಾಂತಿಯ ಹೊಸ ಸಾಧ್ಯತೆ ಇರುವಾಗಲೇ ನಡೆದ ಈ ಹಿಂಸಾಕಾಂಡ ಆತಂಕ ಹೆಚ್ಚಿಸಿದೆ. ಐಆರ್‌ಎನ ರಾಜಕೀಯ ವಿಭಾಗ ಸಿನ್‌ಫಿನ್‌ನ ನಾಯಕ ಹಾಗೂ ಸೋಶಲಿಸ್ಟ್ ಲಿಬರಲ್ ರಿಪಬ್ಲಿಕನ್ ಪಕ್ಷದ ನಾಯಕರು ಮಾತುಕತೆ ನಡೆಸಿ ಕದನ ವಿರಾಮ ಘೋಷಿಸಿದ್ದರು. ಆದರೆ ಹಿಂಸಾಕಾಂಡದ ನಂತರ ಎಲ್ಲಾ ತಿರುವು ಮುರುವಾಗಿದೆ.

ಇತ್ತೀಚೆಗೆ ಬಾಂಬ್‌ಕಾಂಡ್ ಆರಂಭವಾಗಿದ್ದು ಬ್ರಿಟಿಷ್ ಪರ ಪ್ರೊಟೆಸ್ಟೆಂಟ್ ಅಲ್‌ಸ್ಟರ್ ಫ್ರೀಡ್ ಫೈಟರ್ಸ್‌ನ(UFF) ಕಛೇರಿ ಮೇಲೆ ಐಆರ್‌ಎ ನಡೆಸಿದ ಬಾಂಬ್ ದಾಳಿಯಿಂದ. ಯುಎಫ್‌ಎಫ್ ಪ್ರತಿದಾಳಿ ನಡೆಸಿದ್ದು ಅಮಾಯಕ ಕ್ಯಾಥೋಲಿಕರ ಮೇಲೆ. ಸಿಕ್ಕಿ ಸಿಕ್ಕಿದ ಕ್ಯಾಥೋಲಿಕರನ್ನು ಗುಂಡಿಟ್ಟು ಕೊಲ್ಲಲಾಯಿತು. ಈ ಹಿಂಸಾಕಾಂಡವಲ್ಲಿ ಕಳೆದ ಕೆಲವು ದಿನಗಳಲ್ಲೇ 50ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ.

ಐರಿಶ್ ಸರಕಾರ ಈ ಸಮಸ್ಯೆಯನ್ನು ಶಾಂತಿಯುವಾಗಿ ಬಗೆಹರಿಸಲು ಪ್ರಯತ್ನಿಸುತ್ತಿದೆ. ಆದರೆ ಬ್ರಿಟಿಷ್ ಸರಕಾರ ಕ್ಯಾಥೋಲಿಕ್ ಅಲ್ಪಸಂಖ್ಯಾತರ ಸಮಸ್ಯೆಯನ್ನು ಮಿಲಿಟರಿ ಸಮಸ್ಯೆಯಂತೆ ಕಾಣುತ್ತಿದೆ. 30 ಲಕ್ಷ ಜನ ಇರುವ ಅಲ್‌ಸ್ಟರ್ ಪ್ರಾಂತ್ಯದಲ್ಲಿ 20 ಸಾವಿರ ಬ್ರಿಟಿಷ್ ಸೈನಿಕರು, 12 ಸಾವಿರ ಪೋಲೀಸರನ್ನು ಕಳಿಸಿದೆ. ಶಾಂತಿಯುತ ಮಾತುಕತೆಗಳ ಮೂಲಕ ಪರಿಹಾರಗೊಳಿಸುವ ಪ್ರಯತ್ನ ಮಾಡುತ್ತಿಲ್ಲ. ಐಆರ್‌ಎ ಜತೆ ಮಾತುಕತೆ ನಡೆಸಲು ನಿರಾಕರಿಸುತ್ತಿದೆ.

ತಸ್ಲಿಮಾರ ಕಾದಂಬರಿ ಮೇಲೆ ನಿಷೇಧ

ಮುಸ್ಲಿಂ ಮೂಲಭೂತವಾದಿಗಳಿಂದ 'ಮರಣ ದಂಡನೆ'ಗೆ ಗುರಿಯಾಗಿರುವ ಬಾಂಗ್ಲಾ ದೇಶದ ಲೇಖಕಿ ತಸ್ಲಿಮಾ ನಜರಿನ್ ಅವರಿಗೆ ಬಾಂಗ್ಲಾದೇಶ ಸರಕಾರ ಪೋಲೀಸ್ ರಕ್ಷಣೆಯೇನೋ ಕೊಟ್ಟಿದೆ. ಆದರೆ ಭಾರತದಂತೆಯೇ ಮೂಲಭೂತವಾದಿ, ಕೋಮುವಾದಿಗಳ ವಿರುದ್ಧ ಆಳುವ ಪಕ್ಷ ಹೋರಾಟ ಮಾಡುವ ಬದಲು, ಅವರನ್ನು ಸಂತೃಪ್ತಿಗೊಳಿಸುವ ಕೆಲವೊಮ್ಮೆ ಅವರ ಜತೆ ಮತಾಂಧತೆಯಲ್ಲಿ ಪೈಪೋಟಿಗೆ ನಿಲ್ಲುತ್ತದೆ.

ಬಾಂಗ್ಲಾ ದೇಶ ಸರಕಾರ ತಸ್ಲಿಮಾರವರ ಖ್ಯಾತ ಕಾದಂಬರಿ 'ಲಜ್ಜಾ'ವನ್ನು ನಿಷೇಧ ಹೊರಿಸಲು ಆಜ್ಞೆ ಹೊರಡಿಸಿದೆ. ಈ ಕಾದಂಬರಿಯು ಇಸ್ಲಾಮಿಕ್ ತತ್ವಗಳನ್ನು ಲೇವಡಿ ಮಾಡುವ ಸಂಗತಿಗಳಿವೆ. ಆದ್ದರಿಂದಾಗಿ ಈ ಕಾದಂಬರಿಯನ್ನು ನಿಷೇಧಿಸಲಾಗಿದೆ ಎಂದು ಸರಕಾರ ತಿಳಿಸಿದೆ.

'ಲಜ್ಜಾ' ಕಾದಂಬರಿಯ ಕಥಾ ವಸ್ತು - ಬಾಬರಿ ಮಸೀದಿ ನಾಶದ ನಂತರ ಬಾಂಗ್ಲಾ ದೇಶದಲ್ಲಿ ಮುಸ್ಲಿಂ ಮೂಲಭೂತವಾದಿಗಳು ಪ್ರತಿಭಟನೆಯ ಹೆಸರಿನಲ್ಲಿ ನಡೆಸಿದ ಹಿಂದೂ ಅಲ್ಪಸಂಖ್ಯಾತ ಮಹಿಳೆಯರ ಮಾನಭಂಗ ಮುಂತಾದ ಅತ್ಯಾಚಾರ. ಇದು ಕೋಮುವಾದಿಗಳ ಮೂಲಭೂತವಾದಿಗಳ ಕಡು ಕೋಪಕ್ಕೆ ಗುರಿಯಾಗುವುದು ಸಹಜವೇ. ಮಹಿಳೆಯ ಹೀನ ಸ್ಥಿತಿಯನ್ನು ಮನಮುಟ್ಟುವಂತೆ ಕತೆಯಾಗಿಸಬಲ್ಲ ತಸ್ಲಿಮಾ ಆ ಮೂಲಕ ಧರ್ಮ ಮಹಿಳೆಯರ ಮೇಲೆ ಹೇಗೆ ದಬ್ಬಾಳಿಕೆಯ ಸಾಧನವಾಗಿದೆ ಎಂದು ನಿರೂಪಿಸಿದ್ದಾರಂತೆ.

ತಮಾಷೆಯೆಂದರೆ ಈ ಕಾದಂಬರಿಯ ಭಾಗಗಳನ್ನು 'ಸಂಘ ಪರಿವಾರ'ದ ಹಿಂದೂ ಮೂಲಭೂತವಾದಿಗಳು ತಮ್ಮ ಮುಸ್ಲಿಂ-ವಿರೋಧಿ ಪ್ರಚಾರಕ್ಕೆ ಬಳಸಿಕೊಂಡಿದ್ದರು. ಇದನ್ನು ತಸ್ಲಿಮಾ ಕಟುವಾಗಿ ಖಂಡಿಸಿದ್ದರು. ತನ್ನ ಉದ್ದೇಶ ಯಾವುದೇ ಧರ್ಮವನ್ನು ಹೀಯಾಳಿಸುವುದು ಅಥವಾ ಎತ್ತಿ ಹಿಡಿಯುವುದಲ್ಲ. ಮಹಿಳೆಯರ ಮೇಲೆ ದಬ್ಬಾಳಿಕೆಯಲ್ಲಿ ಧರ್ಮದ ಪಾತ್ರ ನಿರೂಪಿಸುತ್ತದಷ್ಟೇ.

'ಬ್ರಿಟಿಷ್ ರೈಲು' ಖಾಸಗೀಕರಣದ ವಿರುದ್ಧ ಚಳುವಳಿ

ನಿರುದ್ಯೋಗ ಬ್ರಿಟನ್‌ನಲ್ಲಿ ಶೇಕಡಾ 10 ದಾಟಿ ಏರುತ್ತಿದ್ದರೂ ಸಂಪ್ರದಾಯವಾದಿ ಟೋರಿ ಸರಕಾರ ತನ್ನ ಖಾಸಗೀಕರಣದ ನೀತಿ ಬಿಟ್ಟು ಕೊಟ್ಟಿಲ್ಲ. ಸಾರ್ವಜನಿಕ ಕ್ಷೇತ್ರದ ಪ್ರಸಿದ್ಧ ಕಂಪನಿ ಬ್ರಿಟಿಷ್ ರೈಲ್‌ನ ಖಾಸಗೀಕರಣ ಸರಕಾರದ ಮುಂದಿನ ಬಲಿ ಪಶು. ಬ್ರಿಟಿಷ್ ರೈಲನ್ನು ಲಾಭದಾಯಕಗೊಳಿಸುವ ಹೆಸರಿನಲ್ಲಿ ಈಗಾಗಲೇ ಹಲವು ಲಾಭ ತರದ ಆದರೆ ಸಾಮಾಜಿಕವಾಗಿ ಆವಶ್ಯಕ ಸೇವೆಗಳನ್ನು ತೀವ್ರವಾಗಿ ಕಡಿತಗೊಳಿಸಿದೆ. ನೂರಾರು ಮುಂಜಾವಿನ ಹಾಗೂ ಮಧ್ಯ ರಾತ್ರಿ ರೈಲುಗಳನ್ನು ಕಡಿತಗೊಳಿಸಲಾಗಿದೆ. 50 ಸ್ಟೇಶನ್‌ಗಳನ್ನು ಮುಚ್ಚಲಾಗಿದೆ. ಸರಕಾರ ಅನುದಾನವನ್ನು ಕಡಿತಗೊಳಿಸಿದೆ. ಲಾಭದಾಯಕಗೊಳಿಸುವ ಹೆಸರಲ್ಲಿ ಒಂದು ಕಡೆ ಅಗತ್ಯ ಸಾಮಾಜಿಕ ಸೇವೆಗಳನ್ನು ಕಡಿತಗೊಳಿಸಿದರೆ ಇನ್ನೊಂದು ಕಡೆ ಇದರಿಂದ ಉದ್ಯೋಗಗಳನ್ನು ನಾಶ ಮಾಡಲಾಗುತ್ತಿದೆ. ಕಳೆದ ಒಂದು ವರ್ಷದಲ್ಲೇ ಶೇಕಡಾ 6ರಷ್ಟು ಬ್ರಿಟಿಷ್ ರೈಲು ಉದ್ಯೋಗಿಗಳು ಕೆಲಸ ಕಳೆದುಕೊಂಡಿದ್ದಾರೆ. 8 ಸಾವಿರಕ್ಕೂ ಹೆಚ್ಚು ನುರಿತ ಉದ್ಯೋಗಿಗಳು ಬಿಟ್ಟು ಹೋಗಿದ್ದಾರೆ.

ಆದರೆ ಸಾರ್ವಜನಿಕ ಸಾಗಾಣಿಕೆ(ರೈಲು ಇತ್ಯಾದಿ) ಕಡಿತಗೊಳಿಸುವ ಮೂಲಕ ಖಾಸಗಿ ಸಾಗಾಣಿಕೆಗೆ(ಕಾರು, ಲಾರಿ ಇತ್ಯಾದಿ) ಜನ ಮೊರೆ ಹೋಗಬೇಕಾಗುತ್ತದೆ. ಖಾಸಗಿ ರಸ್ತೆ ಸಾಗಾಣಿಕೆ ರೈಲಿಗಿಂತ ಹೆಚ್ಚು ಶಕ್ತಿ ವ್ಯಯ ಮಾಡುತ್ತದೆ. ದುಬಾರಿ ಹಾಗೂ ಪರಿಸರ-ಮಾಲಿನ್ಯವೂ ಅದರಿಂದ ಹೆಚ್ಚು. ಈ ರೀತಿ ಅದರ ಸಾಮಾಜಿಕ ವೆಚ್ಚಗಳು ಹೆಚ್ಚು.

ಬ್ರಿಟಿಷ್ ರೈಲು ಖಾಸಗೀಕರಣದ ವಿರುದ್ಧ ಪ್ರಬಲ ರಾಷ್ಟ್ರೀಯ ಮಟ್ಟದ ಚಳುವಳಿ ಹೂಡಲು ಟ್ರೇಡ್ ಯೂನಿಯನ್‌ಗಳು ಹಾಗೂ ಲೇಬರ್ ಪಕ್ಷ ನಿರ್ಧರಿಸಿದೆ.

ರಾಜ್ಯ ಸಮಿತಿಯ ಕರೆ.............

ಪುಟ1ರಿಂದ

ತ್ರಿಕಾ ಹೇಳಿಕೆ ತಿಳಿಸಿದೆ.

ರಾಜ್ಯ ಸಮಿತಿಯ ಅಂಗೀಕರಿಸಿದ ಠರಾವುಗಳು

1\. ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂ ನ ವಡ್ಡರ ಹಳ್ಳಿಯಲ್ಲಿ ಇತ್ತೀಚೆಗೆ ಅಲ್ಲಿನ ದೊಡ್ಡ ೂಮಾಲೀಕರು, ಬಡ್ಡಿ ಸಾಹುಕಾರರು ಆದ ಶ್ರೀ ಕೊಟ್ಟ ಿ ವೆಂಕಟಕೃಷ್ಣಯ್ಯ ಎಂಬುವರು 20-25 ವರ್ಷ ಿಂದಲೂ ಬಡ ಒಕ್ಕಲುಗಳಾಗಿ ಗುಡಿಸಲುಗಳಲ್ಲಿ ಸುತ್ತಿದ್ದ ಕೃಷಿ ಕೂಲಿಗಾರರುಗಳ ಕುಟುಂಬಗಳನ್ನು ೂರ ಹಾಕಿ ಆ ಭೂಮಿಯನ್ನು ಕಾನೂನು ಬಾಹಿ ಾಗಿ ಕೈವಶಮಾಡುವ ಸಲುವಾಗಿ, ಅವರ ಹಲವು ಗುಡಿಸಲುಗಳನ್ನು ಸುಟ್ಟು ಹಾಕಿ, ಗೂಂಡಾಗಳಿಂದ ವರ ಮೇಲೆ ದಾಳಿ ಮಾಡಿದಾಗ, ಆ ಭೂ ಮಾಲೀ ರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು 19 ಮಂದಿ ಡ ಕಾರ್ಮಿಕರ ಮೇಲೆ ಕೊಲೆಯ ಆಪಾದನೆ ಹಾಕಿ, ವರನ್ನು ಅಲ್ಲಿನ ಪೋಲೀಸರು ಜೈಲಿಗೆ ಅಟ್ಟಿದ್ದಾರೆ. ಈ ಭೆಯು ಈ ಘಟನೆಯನ್ನು ತೀವ್ರವಾಗಿ ಖಂಡಿಸುತ್ತದೆ. ಈ ಕೃಷಿ ಕಾರ್ಮಿಕರಿಗೆ ರಕ್ಷಣೆ ಕೊಡುವುದರ ಬದಲು ಅವರ ಮೇಲೆ ಭೂ ಮಾಲೀಕರ ಪರವಾಗಿ ಕ್ರಿಮಿನಲ್ ಪ್ರೊಸೀಜರ್ ಅನುಸರಿಸಿದ ಸರ್ಕಾರದ ನೀತಿಯನ್ನು ರಾಜ್ಯ ಸಮಿತಿ ಖಂಡಿಸಿದೆ.

2\. ಗುಲ್ಬರ್ಗಾ ಜಿಲ್ಲೆಯ, ಸೇಡಂ ತಾಲ್ಲೂಕಿನ ಮುಳಖೇಡದಲ್ಲಿರುವ ಬಿರ್ಲಾ ರಾಜಶ್ರೀ ಸಿಮೆಂಟ್ ಕಾರ್ಖಾನೆಯ ಸಾವಿರಾರು ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಒತ್ತಾಯಿಸುವ ಮುಂದಾಳುಗಳನ್ನು ಕೆಲಸದಿಂದ ವಜಾ ಮಾಡಿದ ವಿರುದ್ಧ ಶಾಂತಿಯುತವಾಗಿ ಸತ್ಯಾಗ್ರಹ ಮಾಡುತ್ತಿರುವ ದಿನಾಂಕ ನವೆಂಬರ್ 5, 1993 ರಂದು ಅವರ ಮೇಲೆ ಅಲ್ಲಿನ ಪೋಲೀಸರು ಗುಂಡು ಹಾರಿಸಿ ಹಲವು ಕಾರ್ಮಿಕರನ್ನು ಗಾಯಗೊಳಿಸಿದ ಹಾಗೂ ಅಮಾನುಷವಾಗಿ ಲಾಠೀ ಚಾರ್ಜ ಮಾಡಿದ ಪೋಲೀಸ್ ಕ್ರಮಗಳನ್ನು ಸಭೆಯು ತೀವ್ರವಾಗಿ ಖಂಡಿಸಿತು. ಕೂಡಲೇ ಸರ್ಕಾರವು ಮಧ್ಯ ಪ್ರವೇಶಿಸಿ ಈ ಪ್ರಶ್ನೆಯನ್ನು ಇತ್ಯರ್ಥಗೊಳಿಸಬೇಕೆಂದು, ಈ ಪೋಲೀಸ್ ಗುಂಡು ಹಾರಿಸಲು ಆಜ್ಞೆ ನೀಡಿದ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮವಹಿಸಬೇಕೆಂದು ಸಭೆಯು ಕೇಳಿಕೊಂಡಿದೆ.

3\. ಹಾನಗಲ್‌ನಲ್ಲಿ ಇತ್ತೀಚೆಗೆ ಉದ್ದೇಶಪೂರ್ವಕವಾಗಿ "ಕೋಮುಗಲಭೆ"ಯನ್ನು ಹುಟ್ಟು ಹಾಕುವ ಹಂಚಿಕೆಯಿಂದ ಅಲ್ಲಿನ ಆರ್.ಎಸ್.ಎಸ್.ನವರು ನಡೆಸಿದ ಪಥಚಲನವನ್ನು ನಿಷೇಧಿಸಿದ ತಹಶೀಲ್ದಾರರ ಆಫೀಸಿನ ಎದುರು ಮತ ಪ್ರದರ್ಶನ ಮಾಡಿ ತಮ್ಮ ಬೇಳೆ ಬೇಯಿಸಲು ನೋಡಿದ ಆರ್.ಎಸ್.ಎಸ್. ನೀತಿಯನ್ನು ಅದಕ್ಕೆ ಸಂಪೂರ್ಣ ಬೆಂಬಲವಿದ್ದ ಬಿಜೆಪಿಯ ವರ್ತನೆಯನ್ನು ಸಭೆಯು ಖಂಡಿಸಿದೆ.

4\. ಶಿವಮೊಗ್ಗದ "ಸಂಸ್ಕೃತ ಗ್ರಾಮ" ಎಂದು ಹೆಸರುವಾಸಿಯಾದ ಮತ್ತೂರು ಗ್ರಾಮದಲ್ಲಿ ಸಾಲ ಕೊಟ್ಟು ವಿಪರೀತ ಬಡ್ಡಿಯನ್ನು ಬಲತ್ಕಾರದಿಂದ ಕೆಳಜಾತಿಯ ಅತಿ ಬಡವರಾದ ಕೃಷಿ ಕೂಲಿಗಾರರಾದ ಮಲ್ಲಪ್ಪ ಮತ್ತು ಜಗ್ಗೂಬಾಯಿಯವರಿಂದ ವಸೂಲು ಮಾಡುತ್ತಿದ್ದಾಗ ಅದನ್ನು ಪ್ರತಿಭಟಿಸಿದ ತಂಜನ್ ಎಂಬುವರನ್ನು ಆ ಮೇಲ್ಜಾತಿಯವರ ಆರ್.ಎಸ್.ಎಸ್. ಗೂಂಡಾಗಳು ತಲೆ ಹೊಡೆದು ತೀವ್ರ ಘಾಸಿಗೊಳಿಸಿದ್ದನ್ನು ಸಭೆಯು ಖಂಡಿಸಿದೆ. ಪೋಲೀಸರು ಈ ಕುರಿತು ತೀವ್ರ ಕ್ರಮ ಕೈಗೊಂಡು ಆ ಬಡಜನತೆಗೆ ಧೈರ್ಯಕೊಡಲು ಸರ್ಕಾರ ಕ್ರಮ ವಹಿಸಬೇಕೆಂದು ಒತ್ತಾಯಿಸಿದೆ.

ಇತಿಹಾಸ ಪುಟಗಳಿಂದ

ಈ ಸಮ್ಮೇಳನ ನಡೆದ ಸಂದರ್ಭದಲ್ಲಿ ನಾವೆಲ್ಲರೂ ಒಂದು ತಿಂಗಳ ಕಾಲ ಮಾಸ್ಕೋದಲ್ಲಿದ್ದೆವು. ಈ ಕಾಲದಲ್ಲಿ ಲಿಯುರವರನ್ನು ಕಂಡು ಮಾತನಾಡಬೇಕೆಂದು ನನಗೆ ಅನ್ನಿಸಲಿಲ್ಲ. ಎರಡೂ ಕಡೆಯ ವಾದಗಳನ್ನು ಕೇಳಿ ಅದನ್ನು ಪರಿಶೀಲಿಸಿ ನಂತರ ನನ್ನ ಸ್ವಂತ ನಿಲುವಿಗೆ ಬರಬೇಕೆಂದು ತೀರ್ಮಾನಿಸಿದೆ.

'ಸಾಂಸ್ಕೃತಿಕ ಕ್ರಾಂತಿಯ' ಸಂದರ್ಭದಲ್ಲಿ 'ಬಂಡವಾಳಿಗರ ದಾರಿಯ' ನಾಯಕನೆಂದು ಲಿಯುರವರನ್ನು ಜರೆದು ಜೈಲಿಗೆ ಹಾಕಿದರು ಮತ್ತು ಅವರು ಅಲ್ಲಿಯೇ ಸತ್ತರೆಂದು ನನಗೆ ಬಂದ ಸುದ್ದಿಗಳು ತಿಳಿಸಿದವು. ಈ ಸುದ್ದಿ ನನಗೆ ಬಹಳ ದುಃಖವನ್ನುಂಟುಮಾಡಿತು. ಪ್ರಪಂಚದ ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷಗಳಲ್ಲೂ "ತಿದ್ದುವ ಪ್ರಕ್ರಿಯೆ" ನಡೆಯಬೇಕಾಗಿದೆ ಮತ್ತು ನಡೆಯುತ್ತದೆ. ಅಂತಹ ಸಂದರ್ಭದಲ್ಲಿ ಇದು ಹಲವು ಜನರಿಗೆ ಮುಳುವಾಗುತ್ತದೆ ಎಂದು ನನಗೆ ವೇದ್ಯವಾಗಿದೆ. ಬೀಜಿಂಗ್‌ನಲ್ಲಿ ಲಿಯುರವರ ಜೊತೆ ಒಂದು ಗಂಟೆ ಕಾಲ ನಡೆದ ಅಭಿಪ್ರಾಯ ವಿನಿಮಯದಲ್ಲಿ ಲಿಯು ನನಗೆ ಕೊಟ್ಟ ಉಪದೇಶದ ಪ್ರಾಧಾನ್ಯತೆ ಮತ್ತು ಅವಶ್ಯಕತೆ ನನಗೆ ಅರ್ಥವಾಗಿದೆ.

ಸಂಗ್ರಹ ಮತ್ತು ಅನುವಾದ

ಇ.ಕೆ.ಎಸ್. ರಾಜನ್ ಮತ್ತು ಪ್ರಕಾಶ್ ಕೆ

ಡಿಸೆಂಬರ್ 3-9: ಡಂಕೆಲ್ ವಿರೋಧಿ ವಾರಾಚರಣೆ

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಕರೆ

ಭಾರತ ಡಂಕೆಲ್ ಕರಡಿಗೆ ಸಹಿ ಹಾಕಬೇಕೆಂದು ಒತ್ತಡ ಹಾಕಲು ಭಾರತಕ್ಕೆ ಬಂದಿದ್ದ ಗ್ಯಾಟ್ ಮುಖ್ಯಸ್ಥ ಪೀಟರ್ ಸುದರ್ ಲ್ಯಾಂಡ್ ವಿರುದ್ಧ ಅಕ್ಟೋಬರ್ 28 ರಂದು ನವದೆಹಲಿಯಲ್ಲಿ ಬಲವಾದ ಪ್ರತಿಪ್ರದರ್ಶನ ನಡೆಸಿದ 'ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ' ಡಿಸೆಂಬರ್ 3 ರಿಂದ 9ರವರೆಗೆ ದೇಶಾದ್ಯಂತ ಡಂಕೆಲ್-ವಿರೋಧಿ ವಾರಾಚರಣೆ ನಡೆಸಲು ನಿರ್ಧರಿಸಿದೆ. ಡಂಕೆಲ್ ಪ್ರಸ್ತಾಪಗಳನ್ನು ರದ್ದು ಮಾಡಬೇಕೆಂದು ಒತ್ತಾಯಿಸಿ ರ್‍ಯಾಲಿಗಳು ಪ್ರತಿಪ್ರದರ್ಶನಗಳು ನಡೆಯಲಿವೆ. ಡಿಸೆಂಬರ್ 9 ರಂದು ಸಂಸತ್ತಿನ ಹೊರಗೆ ಎಲ್ಲಾ ಸಾಮೂಹಿಕ ಸಂಘಟನೆಗಳು ಒಂದು ದೊಡ್ಡ ರ್‍ಯಾಲಿ ನಡೆಸಲಿವೆ. ಈ ರ್‍ಯಾಲಿ ಭಾರತದ ಕೃಷಿ ಮತ್ತು ಆರ್ಥಿಕದ ಮೇಲೆ ಡಂಕೆಲ್ ಪ್ರಸ್ತಾಪಗಳ ವಿನಾಶಕಾರಿ ಪರಿಣಾಮಗಳತ್ತ ಜನರ ಗಮನ ಸೆಳೆದು ಡಿಸೆಂಬರ್ 15ರೊಳಗೆ ಸಹಿ ಮಾಡಬೇಕೆಂದಿರುವ ಒಪ್ಪಂದಕ್ಕೆ ಭಾರತ ಸರಕಾರ ಸಹಿ ಹಾಕದಂತೆ ಒತ್ತಡ ತರಲಿದೆ.

ಅಕ್ಟೋಬರ್ 28 ರಂದು ಬೆಳಿಗ್ಗೆ ನವದೆಹಲಿಯ ಜಂತರ್ ಮಂತರ್‌ನಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳಿಗೆ ಸೇರಿದ ನೂರಾರು ರೈತರು, ಕಾರ್ಮಿಕರು, ನೌಕರರು, ವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಸೇರಿದರು. ರಾಷ್ಟ್ರೀಯ ವೇದಿಕೆ ಕರೆಗೆ ಓಗೊಟ್ಟು ಉತ್ತರ ಪ್ರದೇಶಗಳಿಂದಲೂ ಬಸ್‌ಗಳಲ್ಲಿ ಪ್ರತಿಭಟನಕಾರರು ಬಂದಿದ್ದರು. ಪೀಟರ್ ಸುದರ್‌ಲ್ಯಾಂಡ್ ಈ ಪರ್ವದ ಆರಂಭದಲ್ಲಿ ಡಂಕೆಲ್ ಪ್ರಸ್ತಾಪಗಳನ್ನು ಮಂಡಿಸಿದ ಗ್ಯಾಟ್ (GATT) ಮುಖ್ಯಸ್ಥ ಆರ್ಥರ್ ಡಂಕೆಲ್ ರಿಂದ ಅಧಿಕಾರ ವಹಿಸಿಕೊಂಡರು.

"ಸುದರ್ ಲ್ಯಾಂಡ್ ವಾಪಸು ಹೋಗಿ", "ಡಂಕೆಲ್ ಕರಡಿಗೆ ಸಂಪೂರ್ಣ ತಿರಸ್ಕಾರ" ಎಂಬ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನಾಕಾರರು ಸಂಸತ್ತಿಗೆ ಸಾಗಲು ಪ್ರಯತ್ನಿಸಿದಾಗ ಪೋಲೀಸರು ಅವರನ್ನು ತಡೆದರು. ಇವಕ್ಕೆ ಮೊದಲು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಪಂಧೆ, ಎ.ಐ.ಕೆ.ಎಸ್. ಮುಖಂಡ ಎನ್.ಕೆ. ಶುಕ್ಲಾ ಹಾಗೂ ಜನವಾದಿ ಮಹಿಳಾ ಸಂಘಟನೆಯ ಹರ್‍ಯಾಣಾ ಘಟಕದ ಕಾರ್ಯದರ್ಶಿ ಜಗ್ಮತಿ ಸುಗ್ವಾನ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಾ ಸರಕಾರ ಹೊರಗಿನ ಒತ್ತಡಕ್ಕೆ ತಲೆ ಬಾಗಿದರೆ ಡಂಕೆಲ್ ಕರಡಿನ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯಲ್ಲದೆ ಪ್ರೊ. ನಂಜುಂಡಸ್ವಾಮಿ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಇತರ ಕೆಲವು ಸಂಘಟನೆಗಳ ಕಾರ್ಯಕರ್ತರೂ ರ್‍ಯಾಲಿಯಲ್ಲಿದ್ದರು. ಆದರೆ ಇದು ಜಂಟಿ ಕರೆಯಾಗಿರಲಿಲ್ಲ. ಅವರೂ ಆಕಸ್ಮಾತ್ ರ್‍ಯಾಲಿಯಲ್ಲಿದ್ದರು.

ನಂತರ ರಾಷ್ಟ್ರೀಯ ವೇದಿಕೆಯ 15 ಸದಸ್ಯರ ನಿಯೋಗವೊಂದು ವಾಣಿಜ್ಯ ಮಂತ್ರಿ ಪ್ರಣವ್ ಮುಖರ್ಜಿಯವರನ್ನು ಭೇಟಿ ಮಾಡಿ ಪೀಟರ್ ಸುದರ್‌ಲ್ಯಾಂಡ್‌ಗೆ ಸರಕಾರದ ಆಹ್ವಾನವನ್ನು ಟೀಕಿಸುವ, ಡಂಕೆಲ್ ಪ್ರಸ್ತಾಪಗಳನ್ನು ಯಾವುದೇ ರೀತಿಯಲ್ಲಿ ಒಪ್ಪುವುದರ ವಿರುದ್ಧ ಸರಕಾರವನ್ನು ಎಚ್ಚರಿಸುವ ಸ್ಮರಣ ಪತ್ರವೊಂದನ್ನು ಸಲ್ಲಿಸಿತು.

ಜಂಟಿ ಸಂಸದೀಯ ಸಮಿತಿಗೆ ಒತ್ತಾಯ

ಸುದರ್ ಲ್ಯಾಂಡ್ ಭೇಟಿ ಡಿಸೆಂಬರ್ 15, 1993 ರೊಳಗೆ ಯಾವುದೇ ಬದಲಾವಣೆಯಿಲ್ಲದೆ ಡಂಕೆಲ್ ಕರಡನ್ನು ಒಪ್ಪುವಂತೆ ಸರಕಾರವನ್ನು ಒತ್ತಾಯಿಸುವ ಉದ್ದೇಶವುಳ್ಳದ್ದು ಎಂಬುದು ಸ್ಪಷ್ಟ ಎಂದಿರುವ ಸ್ಮರಣಪತ್ರ ಡಂಕೆಲ್ ಕರಡು ಈಗಿರುವ ರೀತಿಯಲ್ಲಿ ಖಂಡಿತಾ ಸ್ವೀಕಾರಯೋಗ್ಯವಲ್ಲ ಎಂದಿದೆ. ಅದನ್ನು ಸ್ವೀಕರಿಸಿದರೆ ನಮ್ಮ ಆರ್ಥಿಕ ಪ್ರಮುಖ ವಲಯಗಳನ್ನು ಕುರಿತಂತೆ ಶಾಸನ ರಚಿಸುವ ನಮ್ಮ ಸಂಸತ್ತಿನ ಸಾರ್ವಭೌಮತೆಯನ್ನು ಬಿಟ್ಟುಕೊಟ್ಟಂತೆ ಸರಿ; ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ಆರ್ಥಿಕದ ಎಲ್ಲಾ ವಲಯಗಳಿಗೆ ಮುಕ್ತ ಅವಕಾಶ ನೀಡಬೇಕಾಗುತ್ತದೆ; ಪೇಟೆಂಟ್ ವ್ಯವಸ್ಥೆಯ ನೀಡಬೇಕಾಗುತ್ತದೆ; ಪೇಟೆಂಟ್ ವ್ಯವಸ್ಥೆಯ ಮೂಲಕ ನಮ್ಮ ಆರ್ಥಿಕದ ಎಲ್ಲಾ ವಲಯಗಳಿಗೆ ಮುಕ್ತ ಅವಕಾಶ ನೀಡಬೇಕಾಗುತ್ತದೆ; ಪೇಟೆಂಟ್ ವ್ಯವಸ್ಥೆಯ ಮೂಲಕ ನಮ್ಮ ವೈಜ್ಞಾನಿಕ- ತಾಂತ್ರಿಕ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ; ಕೃಷಿ ವಲಯವನ್ನು ಅಂತರ್‍ರಾಷ್ಟ್ರೀಯ ಮಾರುಕಟ್ಟೆಗಳಿಗೆ ಅಧೀನಗೊಳಿಸಿ ನಮ್ಮ ಆಹಾರ ಭದ್ರತೆಗೆ ಕಂಟಕ ತಂದು ಭಾರತೀಯ ಕೃಷಿಕರನ್ನು ಬಹುರಾಷ್ಟ್ರೀಯ ಕಂಪೆನಿಗಳ ಗುಲಾಮರಾಗಿ ಮಾಡುತ್ತದೆ; ಹೊಸ ಬೀಜಗಳ ತೀವ್ರ ಅಭಾವವುಂಟಾಗುತ್ತದೆ; ನಮ್ಮ ಆರೋಗ್ಯ ವ್ಯವಸ್ಥೆ ಹದಗೆಡುತ್ತದೆ; ಬ್ಯಾಂಕು ವಿಮಾ ವಲಯಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದಿಟ್ಟು ನಮ್ಮ ಉಳಿತಾಯವನ್ನು ಹೊರ ದೇಶಗಳಿಗೆ ಹರಿದು ಹೋಗುವಂತೆ ಮಾಡುತ್ತದೆ ಎಂದು ನಿಯೋಗ ವಿವರಿಸಿತು.

ಡಂಕೆಲ್ ಕರಡನ್ನು ವಿಶ್ಲೇಷಿಸಲು ತಕ್ಷಣ ಒಂದು ಜಂಟಿ ಸಂಸದೀಯ ಸಮಿತಿ ರಚಿಸಬೇಕು, ಒಂದು ಉಚ್ಚ ಮಟ್ಟದ ನ್ಯಾಯಾಂಗ ಆಯೋಗ ರಚಿಸಿ ಈ ಕರಡಿನ ಸಂವಿಧಾನ ಬದ್ಧತೆ, ಈ ಕರಡಿನಿಂದ ಉಂಟಾಗುವ ಸಾರ್ವಭೌಮತೆಯ ಕಾನೂನಿನ ಸಮಸ್ಯೆಗಳನ್ನು ಪರೀಕ್ಷಿಸಬೇಕು ಎಂದು ರಾಷ್ಟ್ರೀಯ ವೇದಿಕೆ ಒತ್ತಾಯಿಸಿದೆ. ಜಂಟಿ ಸಂಸದೀಯ ಸಮಿತಿಯ ಹಾಗೂ ನ್ಯಾಯಾಂಗ ಆಯೋಗದ ಶಿಫಾರಸುಗಳ ನಂತರ ಈ ಬಗ್ಗೆ ಸಂಸತ್ತಿನಲ್ಲಿ ಪೂರ್ಣ ರೀತಿಯ ಚರ್ಚೆ ನಡೆಯಬೇಕು, ಡಂಕೆಲ್ ಕರಡಿನ ಬಗ್ಗೆ ಅಂತಿಮ ನಿರ್ಧಾರವನ್ನು ರಾಜ್ಯ ವಿಧಾನ ಮಂಡಲಗಳು ಹಾಗೂ ರಾಜ್ಯ ಸರಕಾರಗಳೊಡನೆ ಸೂಕ್ತ ರೀತಿಯಲ್ಲಿ ಚರ್ಚಿಸಿ ಪ್ರಜಾಪ್ರಭುತ್ವ ವಿಧಾನದಲ್ಲಿ ಕೈಗೊಳ್ಳಬೇಕೆಂದು ನಿಯೋಗ ಆಗ್ರಹಪಡಿಸಿದೆ.

ತ್ರಿಪುರಾ ರಾಜ್ಯಪಾಲರಿಗೆ ಎಚ್ಚರಿಕೆ

ಜೇನುಗೂಡಿಗೆ ಕೈ ಹಾಕುವ ದುಸ್ಸಾಹಸ ಬೇಡ ನಿಮಗೆ!

ಮಾಜಿ ವಿದೇಶಾಂಗ ಕಾರ್ಯದರ್ಶಿ ರಮೇಶ್ ಬಂಡಾರಿ ತ್ರಿಪುರಾದ ರಾಜ್ಯಪಾಲರಾಗಿ ನೇಮಕಗೊಂಡಾಗಲೇ ಅವರ ಹಿನ್ನೆಲೆ ಬಗ್ಗೆ ಅನುಮಾನ ಉಂಟಾಗಿತ್ತು. ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದಿರುವ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಕ್ಕೆ ಕಿರಿಕಿರಿ ಉಂಟು ಮಾಡುವುದು ಈ ನೇಮಕದ ಹಿಂದಿನ ಉದ್ದೇಶವಾಗಿರಬಹುದು ಎಂಬ ಅನುಮಾನ ಬಂದಿತ್ತು. ಅದಕ್ಕೆ ಪುಷ್ಟಿ ಕೊಡುವ ವಿದ್ಯಮಾನ ಈಗ ನಡೆದಿದೆ.

ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಗೆ ಸಂಬಂಧಪಟ್ಟಂತೆ ರಾಜ್ಯಪಾಲ ಭಂಡಾರಿ ಒಂದು ಬಹಿರಂಗ ಹೇಳಿಕೆಯನ್ನು ನೀಡಿದ್ದಾರೆ. ಸಾಮಾನ್ಯವಾಗಿ ರಾಜ್ಯಪಾಲರು ಈ ರೀತಿಯಲ್ಲಿ ಹೇಳಿಕೆ ನೀಡುವುದು ಸಂಪ್ರದಾಯಕ್ಕೆ ವಿರೋಧವಾದುದು. ಅವರಲ್ಲೂ ಮುಖ್ಯಮಂತ್ರಿಯವರ ಜತೆ ಸಮಾಲೋಚನೆ ಮಾಡದೆಯೇ ರಾಜ್ಯಪಾಲರು ಈ ಹೇಳಿಕೆ ನೀಡಿದ್ದಾರೆನ್ನುವುದು ವಿಶೇಷವಾಗಿ ಪರಿಗಣಿಸಬೇಕಾದ ಸಂಗತಿಯಾಗಿದೆ.

ರಾಜ್ಯದ ಕಾನೂನು ಮತ್ತು ಶಾಂತಿಪಾಲನೆ ಪರಿಸ್ಥಿತಿಗೆ ಸಂಬಂಧಿಸಿ ಭಂಡಾರಿ ನೀಡಿರುವ ಹೇಳಿಕೆಯನ್ನು ಮುಖ್ಯಮಂತ್ರಿ ದಶರಥ ದೇವ್ ಟೀಕಿಸಿದ್ದಾರೆ.

ಸರಕಾರದ ದಿನನಿತ್ಯದ ಆಡಳಿತದಲ್ಲಿ ರಾಜ್ಯಪಾಲರು ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದೂ ದೇವ್ ಆರೋಪಿಸಿದ್ದಾರೆ.

ಕಾನೂನು ವಿಷಯವಾಗಿ ರಾಜ್ಯಪಾಲರೊಬ್ಬರು ಪತ್ರಿಕೆಗಳಿಗೆ ಹೇಳಿಕೆ ನೀಡುವುದು ಅನುಚಿತ. ಅವರು ಈ ವಿಷಯವನ್ನು ಮುಖ್ಯಮಂತ್ರಿಯವರ ಜತೆ ಈವರೆಗೆ ಚರ್ಚಿಸದೇ ಇರುವುದು ಆಶ್ಚರ್ಯದ ವಿಷಯವಾಗಿದೆ ಎಂದು ಅಗರ್ತಲಾದಲ್ಲಿ ಮುಖ್ಯಮಂತ್ರಿಯವರ ಕಾರ್ಯಾಲಯ ಹೊರಡಿಸಿರುವ ಹೇಳಿಕೆಯೊಂದು ತಿಳಿಸಿದೆ.

ಕುಖ್ಯಾತ ಷೇರು ಹಗರಣದ ಸಂಬಂಧದಲ್ಲಿ ರಮೇಶ್ ಭಂಡಾರಿಯವರ ಹೆಸರೂ ಒಳಗೊಂಡಿರುವುದರಿಂದ ಅವರನ್ನು ರಾಜ್ಯಪಾಲರ ಹುದ್ದೆಯಿಂದ ತೆಗೆದುಹಾಕಬೇಕೆಂದು ಸಿಪಿಐ(ಎಂ) ಒತ್ತಾಯಿಸಿತ್ತು. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇನಾದರೂ ಭಂಡಾರಿಯವರು ತರಲೆ ಕೆಲಸಕ್ಕೆ ಇಳಿದಿದ್ದಾರೆಯೇ?

ಅಂಥ ಕೃತ್ಯಕ್ಕೇನಾದರೂ ಇಳಿದಲ್ಲಿ ಅದು ತನಗೇ ತಿರುಗುಬಾಣವಾದೀತು ಎಂಬುದನ್ನು ಅವರು ತಿಳಿಯಬೇಕು.

ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಮೈತ್ರಿಕೂಟದ ಐದುವರ್ಷಗಳ ಹೇಯ ದೌರ್ಜನ್ಯ-ದಬ್ಬಾಳಿಕೆಯನ್ನು ಅನುಭವಿಸಿದರೂ ತ್ರಿಪುರಾದ ಪ್ರಜಾಪ್ರಭುತ್ವವಾದಿ ಜನತೆ ಅವಕ್ಕೆಲ್ಲ ಬಗ್ಗದೆ ಮತ್ತೆ ಜನಪರ ಸರಕಾರವನ್ನು ಆಯ್ಕೆ ಮಾಡಿದೆ.

ಅಂಥ ಆಡಳಿತ ವ್ಯವಸ್ಥೆಯೊಂದನ್ನು ಪದಚ್ಯುತಿಗೊಳಿಸಲು ಕೇಂದ್ರ ಸರಕಾರದ ಕೈಗೊಂಬೆಯಾಗಿ ವರ್ತಿಸಿದರೆ ಅದು ಜೇನುಗೂಡಿಗೆ ಕೈ ಹಾಕಿದಂತೆಯೇ ಸರಿ ಎಂಬುದನ್ನು ಅರಿತಿರಿ, ಮಾನ್ಯ ರಮೇಶ್ ಭಂಡಾರಿಯವರೇ!

ಕಟುಟೀಕೆ

ಹರ್ಷದ್ ಮೆಹ್ತಾ ಹಗರಣದಲ್ಲಿನ ತನ್ನ ಪಾತ್ರವನ್ನು ಮುಚ್ಚಿ ಹಾಕುವುದಕ್ಕೋಸ್ಕರ ರಾಜ್ಯಪಾಲ ಭಂಡಾರಿ ಇಂಥ ಹೇಳಿಕೆ ನೀಡುವ ತಂತ್ರದಲ್ಲಿ ತೊಡಗಿದ್ದಾರೆ ಎಂದು ಸಿಪಿಐ(ಎಂ) ತ್ರಿಪುರಾ ರಾಜ್ಯ ಸಮಿತಿ ಟೀಕಿಸಿದೆ.

ರಂಗದ ಇತರ ಅಂಗಪಕ್ಷಗಳ ಜತೆ ಸೇರಿಕೊಂಡು ರಾಜ್ಯಪಾಲರ ವಿರುದ್ಧ ಚಳುವಳಿ ಹೂಡಲು ಅದು ನಿರ್ಧರಿಸಿದೆ.

ರಾಜ್ಯಪಾಲರು ಸರಕಾರಿ ವಿರೋಧಿ ನಾಯಕರಂತೆ ಹೇಳಿಕೆ ನೀಡುತ್ತಿದ್ದಾರೆ. ಅವರ ಹೇಳಿಕೆ ಕಳೆದ ಚುನಾವಣೆಯಲ್ಲಿ ಜನರಿಂದ ತಿರಸ್ಕೃತವಾದ ಕಾಂಗ್ರೆ-ಟಿ.ಯು. ಜೆ.ಎಸ್‌ಗಳ ಹೇಳಿಕೆ ರೀತಿಯಲ್ಲಿದೆ ಎಂದು ಸಿಪಿಐ(ಎಂ) ಹೇಳಿದೆ.

ಹೋರಾಟಕ್ಕೆ ಮುಂದಾಗಿರಿ . . . .

ಪುಟ 1ರಿಂದ

ವಿಪರೀತವಾಗಿ ಬೆಳೆಯಿತು. ಕಾಂಗ್ರೆಸ್(ಐ) ಅಧ್ಯಕ್ಷ ಕೃಷ್ಣರಾವ್‌ರವರನ್ನು ಬದಲಿಸಬೇಕೆಂದು ಮೊಯಿಲಿ ಪರವಾಗಿರುವ ಒಂಬತ್ತು ಎಂ.ಪಿ.ಗಳು ಒತ್ತಾಯಿಸಿದ್ದಾರೆ. ಕಾಂಗ್ರೆಸ್(ಐ) ಹೈಕಮಾಂಡು ಕರ್ನಾಟಕ್ಕೆ ದೀಪಾವಳಿಯ ತರುವಾಯ ವೀಕ್ಷಕರನ್ನು ಕಳುಹಿಸುವುದಾಗಿ ಪ್ರಕಟಿಸಿದೆ.

ಮೊಯಿಲಿ ಸರಕಾರದ ವಿಫಲತೆ

ಭಿನ್ನಮತೀಯರಿಗೆ "ಕ್ಯಾಪಿಟೇಷನ್ ಫೀ" ಪ್ರಶ್ನೆ ಸುಲಭವಾಗಿ ಕೈಗೆ ಸಿಕ್ಕಿತು. ರಾಜ್ಯದಲ್ಲಿ ಅಬಕಾರಿ ಲಾಬಿಯಲ್ಲದೆ, ಖಾಸಗೀ ಶಿಕ್ಷಣ ಸಂಸ್ಥೆಗಳದ್ದು ಒಂದು ಬಲಿಷ್ಠ ಲಾಬಿಯಾಗಿದೆ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿರುವ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರವೇಶ ಮತ್ತು ಕ್ಯಾಪಿಟೇಷನ್ ಫೀ ವಿಷಯದಲ್ಲಿ ನ್ಯಾಯಾಲಯಗಳು ಮಧ್ಯಪ್ರವೇಶ ಮಾಡಿ ತೀರ್ಪುಕೊಟ್ಟವು. ಸುಪ್ರೀಂ ಕೋರ್ಟಿನ ತೀರ್ಪು ಕರ್ನಾಟಕದ ಖಾಸಗೀ ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಯಿತು. ತಾವು ಸುಪ್ರೀಂ ಕೋರ್ಟಿನ ತೀರ್ಪಿಗೆ ಅನುಸಾರವಾಗಿ ನಡೆದುಕೊಳ್ಳುವುದಾಗಿ ಮೊಯಿಲಿ ಸಾರಿದರು.

ಈ ವಿಚಾರದಲ್ಲಿ ಅವರಿಗೆ ಪಕ್ಷದ ಮತ್ತು ಎಸ್.ಎಫ್.ಐ ಸಂಘಟನೆಗಳ ಹೊರತಾಗಿ ಬೇರೆಲ್ಲಿಂದಲೂ ಬೆಂಬಲ ಸಿಕ್ಕಲಿಲ್ಲ. ಮಠಾಧಿಪತಿಗಳು ಅವರ ನಿಲುವಿನ ವಿರುದ್ಧ ಸಿಡಿದೆದ್ದರು. ತಮ್ಮ ವೃತ್ತಿಪರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ನಿಯಂತ್ರಿಸುವ ಹಕ್ಕು ತಮಗಿದೆ ಎಂದು ಸುಪ್ರೀಂ ಕೋರ್ಟಿನ ತೀರ್ಪು ವಿರುದ್ಧ ಸರ್ಕಾರ ಶಾಸನವನ್ನು ಮಾಡಬೇಕೆಂದು, ಇಲ್ಲವಾದರೆ ವಿದ್ಯಾರ್ಥಿಗಳಿಗೆ ಪ್ರವೇಶವನ್ನೇ ನಿರಾಕರಿಸಲಾಗುವುದೆಂದು ಬೆದರಿಸಿದರು. ಮಠಾಧಿಪತಿಗಳ ಈ ನಿಲುವು ಕಾಂಗ್ರೆಸ್(ಐ) ಭಿನ್ನಮತೀಯರಿಗೆ ಮೊಯಿಲಿಯವರನ್ನು ಉರುಳಿಸುವ ತಮ್ಮ ಹಂಚಿಕೆಗೆ ಸರಿಯಾಗಿ ಬಂದಿತು.

ಆಗ ಸುಪ್ರೀಂ ಕೋರ್ಟ್ ತಮ್ಮ ಹಿಂದಿನ ಕಟ್ಟುನಿಟ್ಟಿನ ನಿಲುವೆಯನ್ನೇ ಬದಲಿಸಿ ತಾನೇ ಅಧಿಕ ಫೀಯನ್ನು ನಿರ್ಧರಿಸಿತು. ಶೇ. 15 ರಷ್ಟು ಸ್ಥಾನಗಳನ್ನು ತುಂಬಿಸಲು ಆಡಳಿತ ಮಂಡಳಿಗಳಿಗೆ ಅವಕಾಶ ಕೊಟ್ಟಿತು. ಇನ್ನು ಕೆಲವು ಖಾಸಗೀ ಕಾಲೇಜುಗಳು 'ತಾವು ಅಲ್ಪಮತೀಯ, ಅಲ್ಪಭಾಷ ಸಂಘಟನೆಗಳವರು, ತಮಗೆ ಈ ತೀರ್ಪು ಅನ್ವಯವಾಗುವುದಿಲ್ಲ' ಎಂದು ವಾದಿಸಿದ್ದಾರೆ.

ಪಕ್ಷವು ಸ್ವಲ್ಪ ಮಟ್ಟಿಗೆ ಈ ಖಾಸಗಿ ವಿದ್ಯಾಭ್ಯಾಸ ವ್ಯಾಪಾರಿಗಳ ಲಾಬಿಯನ್ನು ಬಯಲಿಗೆಳೆಯಲು ಪ್ರಯತ್ನಿಸಿತು. ಎಸ್.ಎಫ್.ಐ. ಇತರ ಕೆಲವು ವಿದ್ಯಾರ್ಥಿ ಸಂಘಟನೆಗಳನ್ನು ಜತೆಯಲ್ಲಿ ಸೇರಿಸಿಕೊಂಡು ರಾಜ್ಯದ ಕೇಂದ್ರದಲ್ಲಿ ಬಲವಾದ ಪ್ರತಿಭಟನೆ ಮಾಡಿತು. ರಾಜ್ಯಾದ್ಯಂತ ವಿಪುಲವಾದ ಪ್ರಚಾರ ನಡೆಸಿದವು. ಜನತಾದಳ ಖಾಸಗೀ ಸಂಸ್ಥೆಗಳ ಪರವಾಗಿ ನಿಂತಿತು. ಬಿಜೆಪಿಯು ಮಠಾಧಿಪತಿಗಳನ್ನೂ ನೇರವಾಗಿ ಬೆಂಬಲಿಸಿತು.

ವೀರಪ್ಪ ಮೊಯಿಲಿಯವರ ಅಬಕಾರಿ ಲಾಬಿ ಕುರಿತು ನಿಲುವೆ ಮಿಶ್ರವಾಗಿದೆ. ಕೆಲವೊಮ್ಮೆ ಉಗ್ರ, ಕೆಲವೊಮ್ಮೆ ಸೌಮ್ಯ ನಿಲುವು ಅವರದ್ದು. ಅವರು ಐ.ಎಂ.ಎಫ್. ಎಲ್. ಲಾಬಿಯ ಕುರಿತು ಕಠಿಣ ಧೋರಣೆ ತಾಳಿ, ಸೆಕೆಂಡ್ಸ್ ಮಾರಾಟವನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಅದೇ ಸಮಯದಲ್ಲಿ ಅವರು ಲಿಕ್ಕರ್ ಲಾಬಿಯ ಬಗ್ಗೆ ತೀರ ಕಠಿಣ ನಿಲುವೆ ತಾಳುವುದಿಲ್ಲ. ಬಂಗಾರಪ್ಪನವರಂತೆ ಅವರು ಈ ಲಾಬಿ ಬಗ್ಗೆ ಮೃದು ನಿಲುವೆ. ಅರಕ್ ಪ್ಲಾಸ್ಟಿಕ್ ಬ್ಯಾಗ್ ವಿಚಾರವು ಹಾಗೆಯೇ ಮುಂದುವರೆಯುತ್ತಿದೆ. ಆದರೆ ಈ ಲಾಬಿಯು ಮೊಯಿಲಿಯವರ ಬಗ್ಗೆ ಅನುಕೂಲಕರವಾಗಿಲ್ಲ, ಅವರನ್ನು ಪದಚ್ಯುತಿ ಮಾಡುವುದರಲ್ಲಿ ಅವರದು ಒಂದು ಕೈ ಇದೆ.

ಬಿಜೆಪಿಗೆ ಜನರ ಬಗ್ಗೆ ಕಾಳಜಿ ಇಲ್ಲ

ಬಿಜೆಪಿ. ತಾನೂ ಕಾಂಗ್ರೆಸ್(ಐ)ಗೆ ಪರ್ಯಾಯವೆಂದು ನಟಿಸುತ್ತಿದೆ. ಅವರ ಹಣದ ಶಕ್ತಿ ಮತ್ತು ಅವರಿಗೆ ಮಾಧ್ಯಮದ ಮೇಲಿರುವ ಹಿಡಿತ ಅವರಿಗೆ ಅನುಕೂಲಕರವಾಗಿದೆ. ಆದರೆ ಜನರ ಪ್ರಶ್ನೆಗಳ ಪರಿಹಾರದ ಬಗ್ಗೆ ಅವರಿಗೆ ನಿಜವಾದ ಕಾಳಜಿ ಇಲ್ಲ. ಆದ್ದರಿಂದ ಜನತೆಯ ಸಮಸ್ಯೆಗಳ ಕುರಿತು ನಾವು ಪ್ರಬಲವಾದ ಆಂದೋಲನ ನಡೆಸುತ್ತಾ ಬರುವುದೊಂದೆ, ಅವರನ್ನು ಬಯಲಿಗೆಳೆಯುವ ಏಕೈಕ ದಾರಿ. ಆದರೆ ಜನತೆಯ ಈ ಸಮಸ್ಯೆಗಳನ್ನು ಎತ್ತಿ ದೊಡ್ಡ ಪ್ರಮಾಣದ ಹೋರಾಟಗಳನ್ನು ನಡೆಸಲು ಅವಶ್ಯವಿರುವ ರಾಜಕೀಯ ಶಕ್ತಿಗಳ ಕೇಂದ್ರೀಕರಣ ರಾಜ್ಯದಲ್ಲಿ ಇನ್ನೂ ಒಟ್ಟು ಸೇರಬೇಕಷ್ಟೆ. ಇತ್ತೀಚೆಗೆ ಬಿಜೆಪಿ ಜನಾದೇಶ ಜಾಥಾಗಳನ್ನು ನಡೆಸಿತು. ಆದರೆ ಅವು ಎಣಿಸಿದಷ್ಟು ಜನತೆಯನ್ನು ಆಕರ್ಷಿಸಿಲ್ಲ.

ಪಕ್ಷವು ಸತತವಾಗಿ ಕಾಂಗ್ರೆಸ್(ಐ)ನ ಜನ ವಿರೋಧಿ ಆರ್ಥಿಕ ನೀತಿಗಳನ್ನು ವಿರೋಧಿಸುತ್ತಾ ಬಂದಿದೆ. ಬಿಜೆಪಿಯ ಮತೀಯ ರಾಜಕೀಯವನ್ನು ವಿರೋಧಿಸುತ್ತಾ ಬಂದಿದೆ. ಪಕ್ಷವು ಕಾಂಗ್ರೆಸ್(ಐ) ಪೋಲೀಸ್ ನೀತಿಯನ್ನು ವಿರೋಧಿಸುತ್ತಾ ಬಂದಿದೆ. ಹಲವಾರು ಪೋಲೀಸ್ ಲಾಕಪ್ ಮರಣಗಳಿಂದಾಗಿ ಸರ್ಕಾರವು ಪೋಲೀಸ್ ಕಮಿಷನರ್‌ರವರನ್ನೇ ಬದಲಿಸಬೇಕಾಗಿ ಬಂದಿದೆ, ಆದರೆ ಸರ್ಕಾರದ ಪೋಲೀಸ್ ಧೋರಣೆ ಕಾರ್ಮಿಕ ಹೋರಾಟಗಳಿಗೆ ತೀವ್ರ ಅಡ್ಡಿಯಾಗಿ ಬರುತ್ತಿದೆ. ಇದನ್ನು ನಾವು ಹೊಸಕೋಟೆ ಮತ್ತು ಬಿಡದಿಗಳಲ್ಲಿ ಎದುರಿಸಿ ಬಹಿರಂಗ ಪಡಿಸಿದ್ದೇವೆ.

ಜನತಾದಳ ಮತ್ತು ಎಸ್.ಜೆ.ಪಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ಒಂದು ಸೇರಿದ್ದುದ್ದು ರಾಜ್ಯದ ರಾಜಕೀಯದಲ್ಲಿ ಒಂದು ಒಳ್ಳೆಯ ಬೆಳವಣಿಗೆ. ಇದು ಬಿಜೆಪಿ ಕಡೆಗೆ ವಿರೋಧ ಪಕ್ಷಗಳವರು ಸರಿದು ಹೋಗುವ ಪ್ರಕ್ರಿಯೆಗೆ ತಡೆಯನ್ನುಂಟು ಮಾಡಿದೆ. ಈ ಒಂದಾದ ಜನತಾದಳ ಜನತೆಯ ಸಮಸ್ಯೆಯ ವಿಷಯಗಳಲ್ಲಿ ಸ್ಪಂದಿಸಿ ಎಡ ಪಕ್ಷಗಳ ಜೊತೆಗೂಡಿ ರಾಜ್ಯದಲ್ಲಿ ಕಾಂಗ್ರೆಸ್(ಐ) ಸರ್ಕಾರದ ನೀತಿಗಳನ್ನು ದೃಢವಾಗಿ ವಿರೋಧಿಸುವುದಕ್ಕೆ ಮುಂದಾದರೆ ರಾಜ್ಯದ ರಾಜಕೀಯ ಭವಿಷ್ಯ ಅನುಕೂಲಕರವಾಗುವುದರಲ್ಲಿ ಸಂಶಯವಿಲ್ಲ.

ಚುನಾವಣಾ ರಾಜಕೀಯದಿಂದ ಜನತೆಯ ಪರವಾದ ರಾಜಕೀಯದತ್ತ

ಆದರೆ ಕೇವಲ ಚುನಾವಣಾ ರಾಜಕೀಯದಿಂದ ಜನತಾದಳವನ್ನು ಜನತೆಯ ಸಮಸ್ಯೆಗಳಿಗೆ ಪರಿಹಾರ ಹುಡುಕುವ ರಾಜಕೀಯದತ್ತ ಹೊರಳಿಸಬೇಕಾದರೆ ರಾಜ್ಯದಲ್ಲಿ ಸಿಪಿಐ(ಎಂ)ನ ಸ್ವತಂತ್ರ ಚಟುವಟಿಕೆಗಳು ಮತ್ತು ಸಿಪಿಐ ಜೊತೆಗೂಡಿ ಎಡ ಐಕ್ಯತೆಯ ಆಧಾರದಲ್ಲಿ ಚಟುವಟಿಕೆಗಳು ಪ್ರಬಲವಾಗಿ ಬೆಳೆದು ಬರಬೇಕಾಗಿದೆ.

ಪಕ್ಷವು ರಾಜ್ಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಟ್ಟು ಗೂಡಿಸುವುದಕ್ಕೆ, ಈ ಐಕ್ಯತೆಯನ್ನು ಜನತೆಯ ಸಮಸ್ಯೆಗಳ ಪರಿಹಾರದೊಡನೆ ಜೋಡಿಸುವುದಕ್ಕೆ ಪ್ರಯತ್ನ ಮಾಡುತ್ತಾ ಬಂದಿದೆ. ಸಿಪಿಐ ಜೊತೆಗೂಡಿ 'ಕೋ ಆರ್ಡಿನೇಷನ್ ಕಮಿಟಿ' ಯನ್ನು ಪಕ್ಷದ ಕೇಂದ್ರ ಸಮಿತಿಯ ನಿರ್ದೇಶನದ ಪ್ರಕಾರ ಈ ಬಗ್ಗೆ ರಚಿಸಿ ಕೊಂಡಿದ್ದೇವೆ. ಹಲವು ಬಾರಿ ಹಲವು ವಿಷಯಗಳಲ್ಲಿ ನಾವು ಅವರು ಜೊತೆಗೂಡಿ ಜನತಾದಳದ ಮೇಲೆ ಒತ್ತಡ ಹಾಕಿದ್ದೇವೆ.

ಕೋಮು ಸೌಹಾರ್ದ ಚಳುವಳಿಯಲ್ಲಿ ಈ ಕೆಲಸದಲ್ಲಿ ಪಕ್ಷವು ಸ್ವಲ್ಪಮಟ್ಟಿನ ಜಯಗಳಿಸಿದೆ. ಜನತಾದಳ ಬಹಿರಂಗವಾಗಿ ಕೋಮು ಸೌಹಾರ್ದ ವಿಷಯದಲ್ಲಿ ದೃಢ ನಿಲುವೆ ತೆಗೆದುಕೊಂಡಿದೆ. ಹಲವು ಬಹಿರಂಗ ಸಭೆಗಳಲ್ಲೂ ಜಾಥಗಳಲ್ಲೂ ಈ ವಿಷಯದಲ್ಲಿ ಜನತಾದಳವು ಭಾಗವಹಿಸಿತು. ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳನ್ನು ವಿರೋಧಿಸುವುದರಲ್ಲಿ ಜನತಾದಳದಲ್ಲಿ ಬಹಳಷ್ಟು ಚಂಚಲತೆ ಇದೆ. ಪರಿಣಾಮವಾಗಿ ಪಕ್ಷಕ್ಕೆ ಜೈಲ್‌ಭರೋ ಮತ್ತು ಭಾರತ್ ಬಂದ್ ಕಾರ್ಯಕ್ರಮಗಳಲ್ಲಿ ಬಹಳ ಪ್ರಯತ್ನದ ಫಲವಾಗಿ ಕೊನೆ ಗಳಿಗೆಯಲ್ಲಿ ಮಾತ್ರ ಜನತಾದಳದ ಬೆಂಬಲಿಗರನ್ನು ಇಳಿಸಲು ಸಾಧ್ಯವಾಯಿತು.

ಪಕ್ಷದ ಸ್ವತಂತ್ರ ಚಟುವಟಿಕೆಗಳಿಂದ ಈ ಕಾಲಾವಧಿಯಲ್ಲಿ ರಾಜ್ಯದ ಜನತೆಯ ಗಮನವನ್ನು ನಮ್ಮೆಡೆಗೆ ಎಳೆಯಲು ಸಾಧ್ಯವಾಯಿತು. ಜೈಲ್‌ಭರೋ ಕಾರ್ಯಕ್ರಮದಲ್ಲಿ ರಾಜ್ಯದಲ್ಲಿ 20-25 ಸಾವಿರದಷ್ಟು ಜನರನ್ನು ಇಳಿಸಲು ಸಾಧ್ಯವಾದರೆ, ಇದರಲ್ಲಿ ಬಹು ಅಂಶ ಭಾಗ ನಮ್ಮ ಪಕ್ಷದ ಪರವಾಗಿದೆ. ಕರ್ನಾಟಕ ಬಂದ್ ರಾಜ್ಯದ ಮೂಲೆ ಮೂಲೆಗಳಲ್ಲಿಯೂ ಯಶಸ್ವಿಯಾಗಿದೆ. ಇದರ ಬಹು ಅಂಶ ಯಶಸ್ಸಿಗೆ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಅವಿರತ ದುಡಿಮೆಯೇ ಕಾರಣ. ಎಣಿಸಿದಕ್ಕಿಂತಲೂ ಅಧಿಕ ಜನ ಬೆಂಬಲ ಈ ಭಾರತ್ ಬಂದ್ ಕಾರ್ಯಕ್ರಮಕ್ಕೆ ನಮಗೆ ದೊರೆತಿದೆ. ಅದೇ ವೇಳೆ, ನಾವು ಪಕ್ಷದ ಪಿ.ಬಿ. ಮತ್ತು ಸಿ. ಸಿ. ಸಭೆಗಳನ್ನು ರಾಜ್ಯದಲ್ಲಿ ನಡೆಸಿದ್ದುದ್ದು ನಮ್ಮ ಪಕ್ಷಕ್ಕೂ ನಮ್ಮ ಚಳುವಳಿಗೂ ಶೋಭೆ ಕೊಟ್ಟಿದೆ. 20-25 ಸಾವಿರದಷ್ಟು ದೊಡ್ಡ ರ್‍ಯಾಲಿಯನ್ನು ನಡೆಸಿ ಅದರಲ್ಲಿ ಜ್ಯೋತಿಬಸು ಇ.ಎಂ.ಎಸ್. ಮತ್ತು ಸುರ್ಜಿತರವರು ಭಾಷಣ ಮಾಡಿದುದ್ದು ರಾಜ್ಯದಲ್ಲಿ ರಾಜಕೀಯ ಪರಿಣಾಮ ಬೀರಿದೆ ನಮ್ಮ ಅನುಯಾಯಿಗಳಲ್ಲಿ ಹೊಸ ಸ್ಫೂರ್ತಿ ತುಂಬಿದೆ. ಜನತಾದಳದವರೊಡನೆ ನಮ್ಮ ಪಕ್ಷದ ಹಿರಿಯ ಮುಖಂಡರುಗಳು ಬೆರೆಯುವುದಕ್ಕೆ ಈ ಅವಕಾಶವನ್ನು ಉಪಯೋಗಿಸಿದುದು ರಾಜ್ಯದ ರಾಜಕೀಯದಲ್ಲಿ ಒಂದು ಒಳ್ಳೆಯ ಹೆಜ್ಜೆ.

ರಾಜ್ಯದ ರಾಜಕೀಯದಲ್ಲಿ ನಮ್ಮ ಪಕ್ಷವು ತನ್ನ ಎಲ್ಲಾ ಸಾಮೂಹಿಕ ಸಂಘಟನೆಗಳ ಬೆಂಬಲ ಪಡೆದು 'ರಾಜಕೀಯ ಪ್ರಚಾರ'ವನ್ನು ಸತತವಾಗಿ ಮಾಡಲು ಮುಂದಾಗಬೇಕು. ತಾನಾಗಿಯೇ ಆಗಲಿ, ಎಡಪಕ್ಷಗಳ ಜೊತೆಗೂಡಿಯಾಗಲಿ ಜನತೆಯ ಸಮಸ್ಯೆಗಳಿಗೆ ಇನ್ನೂ ಹೆಚ್ಚಾಗಿ ಸ್ಪಂಧಿಸಿ ಹೋರಾಟಗಳನ್ನು ಹಮ್ಮಿಕೊಳ್ಳಬೇಕು. ಕಾಂಗ್ರೆಸ್(ಐ) ರಾಜಕೀಯವನ್ನು ಬಿಜೆಪಿಯ ಮತೀಯ ವಿಭಜನಕಾರೀ ರಾಜಕೀಯವನ್ನು ಬಹಿರಂಗಗೊಳಿಸುವುದರಲ್ಲಿ ಇನ್ನೂ ಹೆಚ್ಚಿನ ರಭಸದಿಂದ ಜನತೆಯ ಮಧ್ಯೆ ಕಾರ್ಯ ಪ್ರವೃತ್ತರಾಗಬೇಕು. ಮುಂಬರುವ ಪಂಚಾಯಿತಿ ಚುನಾವಣೆಗಳನ್ನು ಸವಾಲಾಗಿ ಎದುರಿಸಬೇಕು.

ಕೃಷಿ ನೀತಿ ಕುರಿತು ವಿಚಾರ ಸಂಕಿರಣ

ನವೆಂಬರ್ 20, 1993 ರಂದು ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ (ಐಕ್ಯ ರಂಗ ಕಛೇರಿಗೆ ಹತ್ತಿರದಲ್ಲಿದೆ) ನಡೆಸಲು ತೀರ್ಮಾನಿಸಲಾಗಿದೆ. ಕಾಂ.ಎಸ್. ರಾಮಚಂದ್ರಪಿಳ್ಳೆ ಕಿಸಾನ್ ಸಭಾ ಹಣಕಾಸು ಕಾರ್ಯದರ್ಶಿಗಳು ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು, ಪರ್ಯಾಯ ಕೃಷಿ ನೀತಿಯ ಮೇಲೆ ಪ್ರಬಂಧ ಮಂಡಿಸಲಿರುವವರು, ಜೊತೆಗೆ ಇತರೆ ಉಪನ್ಯಾಸಕರು ಪ್ರಬಂಧ ಮಂಡಿಸಲಿರುವವರು.

ರೈತರಂಗ ಕಾರ್ಯಕರ್ತರಿಗೆ ತರಬೇತಿ ಶಾಲೆ

ನವೆಂಬರ್ 21, 21, 23 ರಂದು ಮೂರು ದಿನ ಶಾಲೆಯನ್ನು ಶಿವಶಕ್ತಿ ಕಲ್ಯಾಣ ಮಂಟಪ (ಕೋಣನಕುಂಟೆ ಕ್ರಾಸ್ -ಕಲಾಸಿಪಾಳ್ಯ ದಿಂದ 210 ರಿಂದ 217 ಹಾಗೂ ಬಸ್‌ನಿಲ್ದಾಣ ದಿಂದ 211ಸಿ ಮತ್ತು 214ಇ ನಂಬರಿನ ಬಸ್ಸುಗಳು ಹೋಗುತ್ತವೆ) ದಲ್ಲಿ ನಡೆಸಲಾಗುತ್ತಿದೆ. ಕಾಂ. ಎಸ್. ರಾಮಚಂದ್ರಪಿಳ್ಳೆ ತರಬೇತಿ ನಡೆಸಲಿದ್ದಾರೆ. ಪ್ರತಿಯೊಬ್ಬರು 50 ರೂ. ಶುಲ್ಕ ಕಡ್ಡಾಯ.

ಡಿಸೆಂಬರ್ 5 ರಂದು ಕೋಮುಸೌಹಾರ್ದತೆಗಾಗಿ ಯುವಜನರ ಬೃಹತ್ ಸಮ್ಮಿಲನ

ಡಿಸೆಂಬರ್ 6, ದೇಶದ ಇತಿಹಾಸದಲ್ಲಿ ಕರಾಳ ದಿನ. ದೇಶದ ಐಕ್ಯತೆ, ಸಮಗ್ರತೆ, ಕೋಮುಸೌಹಾರ್ದತೆ, ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ಸಮೂಲ ನಾಶಗೊಳಿಸಲು ಕೋಮುವಾದಿ ಶಕ್ತಿಗಳು ಆಕ್ರಮಣಗೈದು- ಜನತೆಯ ಮಾರಣ ಹೋಮ ಮಾಡಿದ ದಿನ. ಇದು ಮತ್ತೆಂದೂ ಮರುಕಳುಹಿಸದಿರಲಿ, ಕೋಮುಸೌಹಾರ್ದತೆ ಬಲಗೊಂಡು ಬೆಳೆಯಲಿ ಎಂಬ ಆಶಯದೊಂದಿಗೆ ಡಿಸೆಂಬರ್ 5, ರವಿವಾರ ಬೆಂಗಳೂರು ನಗರದಲ್ಲಿ ಬೃಹತ್ ಯುವ ಸಮ್ಮಿಲನವನ್ನು ಡಿ.ವೈ.ಎಫ್.ಐ ಸಂಘಟಿಸಲಿದೆ. ಕಾರ್ಯಕ್ರಮಗಳು ಬೆಳಿಗ್ಗೆ 10 ರಿಂದ ಸಂಜೆ 8ರವರೆಗೆ - ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ನಾಡಿನ ಖ್ಯಾತ ಬುದ್ಧಿಜೀವಿಗಳು, ನಾಗರೀಕರು, ಯುವಜನ ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ಸಿದ್ಧತೆಗಳು ಭರದಿಂದ ಸಾಗಿವೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಯುವಜನರು ಪಾಲ್ಗೊಳ್ಳಲು ವಿನಂತಿಸಲಾಗಿದೆ.

ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾಸಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ಸಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್